ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಶೋಧನಾ ಪ್ರಬಂಧ

"ಆಧುನಿಕ ಕನ್ನಡ ಸಾಹಿತ್ಯ ಮತ್ತು ರಾಮಮನೋಹರ ಲೋಹಿಯಾ ಚಿಂತನೆಗಳು"
(ಯು.ಆರ್.ಅನಂತಮೂರ್ತಿಯವರ 'ಅವಸ್ಥೆ' ಮತ್ತು ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ 'ಚಿದಂಬರ ರಹಸ್ಯ' ಕಾದಂಬರಿಗಳ ಹಿನ್ನೆಲೆಯಲ್ಲಿ)

ಪುಟ್ಟರಾಜ.ವಿ
ಸಂಶೋಧನಾ ವಿದ್ಯಾರ್ಥಿ
ನೋಂದಣಿ ಸಂಖ್ಯೆ : KVMBKS – 00440

ಮಾರ್ಗದರ್ಶಕರು

ಡಾ॥ಸಿ.ಬಿ.ಅನ್ನಪೂರ್ಣಮ್ಮ

ಆಯ್ಕೆ ಶ್ರೇಣಿ ಉಪನ್ಯಾಸಕರು
ನ್ಯಾಷನಲ್ ಕಾಲೇಜು, ಬೆಂಗಳೂರು

ಕಾವ್ಯಮಂಡಲ
ನಂ. 13/85, ರಾಷ್ಟ್ರೀಯ ವಿದ್ಯಾಲಯ ರಸ್ತೆ,
ಬಸವನಗುಡಿ, ಬೆಂಗಳೂರು – 560 004

2010

816A

ದೃಢೀಕರಣ ಪತ್ರ

ಪುಟ್ಟರಾಜ.ವಿ ಅವರು **ಎಂ.ಫಿಲ್** ಪದವಿಗಾಗಿ ಬರೆದು ಸಿದ್ಧಪಡಿಸಿರುವ **'ಆಧುನಿಕ ಕನ್ನಡ ಸಾಹಿತ್ಯ ಮತ್ತು ರಾಮಮನೋಹರ ಲೋಹಿಯಾ ಚಿಂತನೆಗಳು'** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು.
ಡಾ||ಸಿ.ಬಿ.ಅನ್ನಪೂರ್ಣಮ್ಮ
ಆಯ್ಕೆ ಶ್ರೇಣಿ ಉಪನ್ಯಾಸಕರು
ನ್ಯಾಷನಲ್ ಕಾಲೇಜು
ಬಸವನಗುಡಿ, ಬೆಂಗಳೂರು.

ದಿನಾಂಕ : 13-9-2010
ಸ್ಥಳ: ಬೆಂಗಳೂರು.

816A

ಪ್ರಮಾಣ ಪತ್ರ

'ಆಧುನಿಕ ಕನ್ನಡ ಸಾಹಿತ್ಯ ಮತ್ತು ರಾಮಮನೋಹರ ಲೋಹಿಯಾ ಚಿಂತನೆಗಳು' ಎಂಬ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯ ಮಂಡಲದ ವತಿಯಿಂದ ಸಲ್ಲಿಸಲು **ಡಾ॥ಸಿ.ಬಿ.ಅನ್ನಪೂರ್ಣಮ್ಮ**ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ವಿಷಯವಾಗಿ ಇದುವರೆಗೂ ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.


ದಿನಾಂಕ : ೨೩/೦೭/೨೦೧೦
ಸ್ಥಳ: ಬೆಂಗಳೂರು.

ಪುಟ್ಟರಾಜ.ವಿ
ಸಂಶೋಧನಾ ವಿದ್ಯಾರ್ಥಿ
ಬೆಂಗಳೂರು.

816A

ಪರಿವಿಡಿ

ಕ್ರ.ಸಂ.	ವಿಷಯ	ಪು.ಸಂ
ಅಧ್ಯಾಯ – 1	ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವ್ಯಾಪ್ತಿ	1–3
ಅಧ್ಯಾಯ – 2	ರಾಮಮನೋಹರ ಲೋಹಿಯಾ ಅವರು ರೂಪಿಸಿದ ಸಮಾಜವಾದದ ಸ್ವರೂಪ	4–9
ಅಧ್ಯಾಯ – 3	ರಾಮಮನೋಹರ ಲೋಹಿಯಾ ಚಿಂತನೆಗಳ ಪ್ರಭಾವ: ಕರ್ನಾಟಕ ಸಂದರ್ಭದಲ್ಲಿ	10–16
ಅಧ್ಯಾಯ – 4	ಅನಂತಮೂರ್ತಿಯವರ 'ಅವಸ್ಥೆ' ಕಾದಂಬರಿಯಲ್ಲಿ ಕರ್ನಾಟಕದ ಸಮಾಜವಾದಿ ರಾಜಕಾರಣ ಮತ್ತು ಲೋಹಿಯಾ ಪ್ರಭಾವದ ಅಧ್ಯಯನ	17–38
ಅಧ್ಯಾಯ – 5	ಪೂರ್ಣಚಂದ್ರ ತೇಜಸ್ವಿಯವರ 'ಚಿದಂಬರ ರಹಸ್ಯ' ಲೋಹಿಯಾ ತಾತ್ವಿಕತೆಯ ಹಿನ್ನೆಲೆಯಲ್ಲಿ ಒಂದು ನೋಟ	39–67
	ಸಂದರ್ಶನಗಳು	68–82
	ಉಪಸಂಹಾರ	83
	ಪರಾಮರ್ಶನ ಗ್ರಂಥಗಳು	84–85



ಡಾ.ರಾಮ ಮನೋಹರ ಲೋಹಿಯಾ

1910-1967

ಅಧ್ಯಾಯ – 1

ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವ್ಯಾಪ್ತಿ

"ಲೋಹಿಯಾರ ತತ್ವ ಚಿಂತನೆ, ಕುವೆಂಪುರವರ ಕಲಾಸೃಷ್ಟಿ, ಕಾರಂತರ ಜೀವನದೃಷ್ಟಿ ಮತ್ತು ಬದುಕಿನ ಪ್ರಯೋಗಶೀಲತೆ ಈ ಮೂರೇ ನನ್ನ ಈಚಿನ ಸಾಹಿತ್ಯ ರಚನೆಯ ಮೇಲೆ ಗಾಢ ಪರಿಣಾಮವನ್ನುಂಟು ಮಾಡಿರುವುವು. ಬಹುಶಃ ಮುಂಬರುವ ಕಲಾವಿದರಿಗೆ ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿ ಚೈತನ್ಯ ಶಕ್ತಿಯಾಗಬಲ್ಲಂಥವು ಈ ಮೂರೇ".

– ಕೆ.ಪಿ.ಪೂರ್ಣಚಂದ್ರ ತೇಜಸ್ವಿ

'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನದ 'ಹೊಸದಿಗಂತದೆಡೆಗೆ' ಮುನ್ನುಡಿಯಲ್ಲಿ ಮುಂಬರಲಿರುವ ಆಧುನಿಕ ಕನ್ನಡ ಸಾಹಿತ್ಯದ ವಸ್ತುದ್ರವ್ಯ ಯಾವುದು, ಎಂಬುದನ್ನು ತೇಜಸ್ವಿಯವರು ಮೇಲಿನ ಮಾತುಗಳ ಮೂಲಕ ವಿಶ್ಲೇಷಿಸಿದ್ದಾರೆ. ನವ್ಯ ಚಳುವಳಿಯಲ್ಲಿ ಗುರ್ತಿಸಿಕೊಂಡು ಬೆಳೆದು ಬಂದ ತೇಜಸ್ವಿಯವರು 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನದಿಂದ ಪರಿವರ್ತನಶೀಲನವ್ಯದ ಕಡೆ ಹೊರಳುತ್ತಾರೆ. ಡಿ.ಆರ್.ನಾಗರಾಜ್ ಗುರುತಿಸುವಂತೆ 'ನವ್ಯದಲ್ಲಿ ಮೂಲನವ್ಯ ಮತ್ತು ಪರಿವರ್ತನಶೀಲ ನವ್ಯ ಎನ್ನುವ ಎರಡು ಘಟ್ಟಗಳನ್ನು ಗುರುತಿಸಬಹುದು. ಮೂಲನವ್ಯದ ಪ್ರಮುಖರು ತಮ್ಮ ಸೃಜನಶೀಲ ಮಾರ್ಗ ಹಾಗೂ ವೈಚಾರಿಕ ಮಾರ್ಗಗಳ ಮಾರಕಮಿತಿಗಳ ಬಗ್ಗೆ ಎಚ್ಚರಗೊಂಡು ಅವುಗಳನ್ನು ಪರಿಷ್ಕರಿಸಿಕೊಳ್ಳುವಲ್ಲಿ ಪರಿವರ್ತನಶೀಲ ನವ್ಯದ ಘಟ್ಟ ಪ್ರಾರಂಭವಾಗುತ್ತದೆ. ಇದಕ್ಕೆ ನಿದರ್ಶನಗಳಾಗಿ ತೇಜಸ್ವಿಯವರು 'ಅಬಚೂರಿನ ಪೋಸ್ಟಾಫೀಸು' ಸಂಕಲನಕ್ಕೆ ಬರೆದ ಮುನ್ನುಡಿಯನ್ನೂ, ಅನಂತಮೂರ್ತಿಯವರ 'ಸೂರ್ಯನ ಕುದುರೆ' ಕಥೆಯನ್ನೂ ಹಾಗೂ 'ಬೆತ್ತಲೆ ಪೂಜೆ ಏಕೆ ಕೂಡದು?' ಲೇಖನವನ್ನೂ ಉಲ್ಲೇಖಿಸಬಹುದು. ಒಂದು ಕಾಲಘಟ್ಟದಲ್ಲಿ 'ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಲೇಖಕ'ವನ್ನು ಬರೆದ ಅನಂತಮೂರ್ತಿಯವರು ಇನ್ನೊಂದು ಕಾಲಘಟ್ಟದಲ್ಲಿ ಬೆತ್ತಲೆ ಪೂಜೆ...'ಯನ್ನೂ ಬರೆದರು. ಒಂದು ಮೂಲನವ್ಯದ್ದಾದರೆ ಇನ್ನೊಂದು ಪರಿವರ್ತನಶೀಲನವ್ಯದ್ದು.'[1]

ಇದಕ್ಕೆ ಕಾರಣ ಡಿ.ಆರ್.ನಾಗರಾಜ್ ಹೇಳುವಂತೆ ಒಂದು ಚಳುವಳಿಗೆ ಕೇವಲ 10–15 ವರ್ಷ ಆಯಸ್ಸಿರಬಹುದು. ಕಾಲದ ಪ್ರವಾಹದಲ್ಲಿ ಚಳುವಳಿಗಳು ನಿರಂತರವಾಗಿ

ಹರಿದು ಬರಲು ದುಸ್ಸಾಧ್ಯವೇ ಸರಿ. ಅನಂತಮೂರ್ತಿಯವರಲ್ಲಿ ನವ್ಯವನ್ನು ಬಿಡಿಸಿಕೊಳ್ಳಲಾಗದಷ್ಟು ದ್ವಂದ್ವ ಉಳಿದುಕೊಂಡು ಬಂದಿದೆ; 'ಇಂಗ್ಲಿಷ್ ಸಾಹಿತ್ಯ ಮಾತ್ರದಿಂದ ಪ್ರಭಾವಿತರಾದ ನಾವು ಕೆಲವೊಮ್ಮೆ ಎಷ್ಟು ದಡ್ಡರಂತೆ ವರ್ತಿಸುತ್ತೇವೆಂದರೆ, ಇಂಗ್ಲಿಷ್ ಜನಾಂಗಕ್ಕೆ ಅತ್ಯಂತ ಸಹಜವಾದ ಮನೋಧರ್ಮ ನಮಗೂ ಸಹಜವಾದ್ದು ಎಂದು ಭಾವಿಸುವಷ್ಟು.'[2]

ನವ್ಯ ಸಾಹಿತ್ಯ ಇಂಗ್ಲಿಷ್ ಸಾಹಿತ್ಯದ ನಕಲಾಗುತ್ತಿದೆ ಎಂದು ಅನಂತಮೂರ್ತಿಯವರು ಭಾವಿಸಿದರೆ; ತೇಜಸ್ವಿಯವರು ನವ್ಯ ಸಾಹಿತ್ಯದ ಮುಂಚೂಣಿಯಲ್ಲಿನ ಬ್ರಾಹ್ಮಣರಿಂದಾಗಿ ಅದು ಅವನತಿಯತ್ತ ಸಾಗುತ್ತಿದೆ ಎಂದು ಪ್ರತಿಕ್ರಿಯಿಸುತ್ತಾರೆ. ಕಾಲದ ಪ್ರವಾಹದಲ್ಲಿ ಯಾವೊಂದು ಚಳುವಳಿಗಳೂ ಜೀವಂತವಾಗಿ ಉಳಿಯದಿದ್ದರೂ ಆ ಸಂದರ್ಭದಲ್ಲಿ ರಚನೆಯಾದ ಕಲಾಕೃತಿಗಳು, ಚಿಂತನಾಧಾರೆಗಳು ಮುಂದಿನ ಅನೇಕರಿಗೆ ದಾರಿದೀಪವಾಗಿರುವುದಂತು ಸುಸ್ಪಷ್ಟ.

ಕನ್ನಡ ನವೋದಯ ಸಾಹಿತ್ಯದ ಮೇಲೆ ಗಾಂಧೀಜಿಯವರ ಸರ್ವೋದಯ ತತ್ವದ ಪ್ರಭಾವ ಕಂಡುಬಂದರೆ ನವ್ಯ ಸಾಹಿತ್ಯದಲ್ಲಿ ಲೋಹಿಯಾ ಸಮಾಜವಾದದ ಎಳೆಗಳು ಕಾಣಿಸಿಗುತ್ತವೆ. ನವೋದಯದ ಆಶಯಗಳನ್ನಿಟ್ಟುಕೊಂಡು ಬರೆಯಲಾಗದ ನವ್ಯ ಲೇಖಕರಿಗೆ ಲೋಹಿಯಾ ಸ್ಫೂರ್ತಿಯಾಗುತ್ತಾರೆ. ಕಾಂಗ್ರೆಸ್‌ನ ಭ್ರಷ್ಟ ವ್ಯವಸ್ಥೆ ವಿರುದ್ಧ ಸ್ಫೋಟಿಸಿ ನಿಂತು ಲೋಹಿಯಾ ಸಾರಿದ ಸಮರ ನವ್ಯ ಲೇಖಕರಲ್ಲಿ ಕಾಣಬಹುದಾಗಿದೆ. ಲೋಹಿಯಾರು ವ್ಯಾಖ್ಯಾನಿಸಿ ಬರೆದ ಜಾತಿ ಪದ್ಧತಿ ಈ ಲೇಖಕರಿಗೆ ಬಹುವಾಗಿ ಕಾಡಿದೆ. ಲಂಕೇಶ್, ಅನಂತಮೂರ್ತಿ, ತೇಜಸ್ವಿ ತಮ್ಮ ಕಾದಂಬರಿಯಲ್ಲಿ ಜಾತಿವಿನಾಶವನ್ನು ಒತ್ತಿ ಹೇಳುತ್ತಾರೆ. ಜಾತಿ ವಿನಾಶವಾಗದೆ ಸಮಾನತೆ ಸಾಧ್ಯವಿಲ್ಲ ಎನ್ನುವ ಲೋಹಿಯಾರ ಪ್ರಖರ ವೈಚಾರಿಕತೆ, ರಾಜಕೀಯ ಚಿಂತನೆಗಳು ಭಾರತದ ಎಲ್ಲಾ ಸಮಸ್ಯೆಗಳಿಗೆ ಚಿಕಿತ್ಸಕರೂಪದಂತಿದ್ದವು. ನವ್ಯ, ದಲಿತ, ಬಂಡಾಯ ಕಾಲದಲ್ಲಿ ಹೊಸತನಕ್ಕಾಗಿ ತುಡಿಯುತ್ತಿದ್ದ ತರುಣ ಕವಿಗಳ ಸಂವೇದನೆಯ ಭಾಗವಾಗಿದ್ದ ಲೋಹಿಯಾ ಕನ್ನಡ ಸಾಹಿತ್ಯದ ಮೇಲೆ ದಟ್ಟ ಪ್ರಭಾವವನ್ನುಂಟು ಮಾಡಿದ್ದಾರೆ. ಸಮಾಜವಾದಿ ಚಳುವಳಿಗಳಲ್ಲಿ ಭಾಗವಹಿಸುತ್ತಾ ಬಂದಿರುವ ಅನಂತಮೂರ್ತಿ, ಲಂಕೇಶ್ ಮತ್ತು ತೇಜಸ್ವಿ ಅವರ ಕಾದಂಬರಿಗಳಲ್ಲಿ ಸಮಾಜವಾದಿ ನೋಟಕ್ರಮ ಕಂಡು ಬರುತ್ತದೆ. ಲೋಹಿಯಾರಿಂದ ಪ್ರಭಾವಿತರಾದ ಯು.ಆರ್. ಅನಂತಮೂರ್ತಿಯವರ 'ಅವಸ್ಥೆ' ಮತ್ತು ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ 'ಚಿದಂಬರ ರಹಸ್ಯ' ಕಾದಂಬರಿಯನ್ನು ಲೋಹಿಯಾ ಚಿಂತನೆಗಳ ತಾತ್ವಿಕತೆ

ಮೂಲಕ ಈ ಅಧ್ಯಯನದ ಕಕ್ಷೆಗೆ ಒಳಪಡಿಸಲಾಗಿದೆ. 'ಅವಸ್ಥೆ' ಕಾದಂಬರಿಯು ಕರ್ನಾಟಕ ರಾಜಕಾರಣದ ರೂಪಕಾತ್ಮಕ ಚಿತ್ರಣವನ್ನು ಹಾಗೂ 'ಚಿದಂಬರ ರಹಸ್ಯ' ಕೃತಿಯು ಸ್ವಾತಂತ್ರ್ಯೋತ್ತರ ಭಾರತದ ಚಿತ್ರಣವನ್ನು ಕಟ್ಟಿಕೊಡುತ್ತವೆ. ಈ ಹಿನ್ನೆಲೆಯಲ್ಲಿ ಈ ಇಬ್ಬರ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಈ ಅಧ್ಯಯನ ಕೆಳಕಂಡ ಅಂಶಗಳನ್ನು ಚರ್ಚಿಸುತ್ತದೆ:

1. ಜಾತಿವಿನಾಶ
2. ಜಾತಿ ಮತ್ತು ಜಡತೆ
3. ಕರ್ನಾಟಕ ರಾಜಕಾರಣದಲ್ಲಿ ಸಮಾಜವಾದದ ಸ್ವರೂಪ
4. ಹಿಂದೂ ಮತ್ತು ಮುಸ್ಲಿಂ ಸಂಬಂಧಗಳು
5. ಚಳುವಳಿ ರಾಜಕಾರಣ ಮತ್ತು ಅಧಿಕಾರ ರಾಜಕಾರಣ
6. ಲೈಂಗಿಕ ಜಗತ್ತು ಮತ್ತು ಸಮಾಜವಾದಿ ನೈತಿಕತೆಯ ಪರಿಕಲ್ಪನೆ
7. ಧರ್ಮ ಮತ್ತು ವ್ಯಕ್ತಿ, ಧರ್ಮ ಮತ್ತು ಸಮಾಜ
8. ಸಮಾಜವಾದಿ ಪ್ರಜ್ಞೆ ಮತ್ತು ಹೊಸ ತಲೆಮಾರು.

ಈ ಅಂಶಗಳ ಮೂಲಕ ಈ ಕಾದಂಬರಿಗಳನ್ನು ವಿಶ್ಲೇಷಣೆಗೆ ಒಳಪಡಿಸುವುದರ ಜೊತೆಗೆ ಇವು ಕಟ್ಟಿಕೊಡುವ ರೂಪಕಾತ್ಮಕ ಚಿತ್ರಣವನ್ನು ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಟಿಪ್ಪಣಿಗಳು

1. ಅಗ್ರಹಾರ ಕೃಷ್ಣಮೂರ್ತಿ (ಸಂ): 'ಸಂಸ್ಕೃತಿ ಕಥನ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಾಶನ, 2006, ಪು.7, 8

2. ಯು.ಆರ್.ಅನಂತಮೂರ್ತಿ, 'ಸನ್ನಿವೇಶ' ಅಕ್ಷರ ಪ್ರಕಾಶನ, ದ್ವಿತೀಯ ಮುದ್ರಣ – 1992, ಪು.42.

3. ಪೂರ್ಣಚಂದ್ರ ತೇಜಸ್ವಿ, 'ವಿಮರ್ಶೆಯ ವಿಮರ್ಶೆ', ಪುಸ್ತಕ ಪ್ರಕಾಶನ, 2009.

4. ಡಾ.ನಟರಾಜ್ ಹುಳಿಯಾರ್‌ರೊಂದಿಗೆ ಸಂವಾದಿಸುತ್ತಾ ಮಾಡಿಕೊಂಡ ಟಿಪ್ಪಣಿಗಳು

ಅಧ್ಯಾಯ – 2

ರಾಮಮನೋಹರ ಲೋಹಿಯಾ ಅವರು ರೂಪಿಸಿದ ಸಮಾಜವಾದದ ಸ್ವರೂಪ

ಲೋಹಿಯಾ ಅವರು ರೂಪಿಸಿದ ಸಮಾಜವಾದಕ್ಕಿಂತ ಮುಂಚಿತವಾಗಿ ಭಾರತದಲ್ಲಿ ಗಾಂಧೀಜಿಯವರ ಸರ್ವೋದಯ ತತ್ವದಡಿ ಆಚಾರ್ಯ ನರೇಂದ್ರದೇವ, ವಿನೋಬಾ ಮುಂತಾದವರಲ್ಲಿ ಸಮಾಜವಾದ ರೂಪುಗೊಳ್ಳುತ್ತಿತ್ತು. ಇನ್ನೊಂದೆಡೆ ಮಾರ್ಕ್ಸಿಸ್ಟ್ ಚಿಂತಕರಾದ ಎಂ.ಎನ್.ರಾಯ್, ಅಶೋಕಮೆಹ್ತಾ, ಅವರ ನೆರಳಲ್ಲಿ ಸಮಾಜವಾದ ರೂಪುಗೊಂಡಿತು. ಗಾಂಧೀಜಿಯವರು ಆಧ್ಯಾತ್ಮದ ನೆರಳಲ್ಲಿ ಸಮಾಜವಾದವನ್ನು ವ್ಯಾಖ್ಯಾನಿಸಲೆತ್ನಿಸಿದರು.

'ಈಶೋಪನಿಷದ್'ದಲ್ಲಿಯೆ ಮೊದಲನೆಯ ಶ್ಲೋಕದಲ್ಲಿಯೆ ಸಮಾಜವಾದದ ಸ್ವರೂಪವನ್ನು ಸ್ಪಷ್ಟವಾಗಿ ಹೇಳಿದೆ....ನಮ್ಮ ಪೂರ್ವಜರೆ ನಮಗೆ ನಿಜವಾದ ಸಮಾಜವಾದವನ್ನು ಹೇಳಿಕೊಟ್ಟಿರುವರು. ಸಮಾಜವಾದಿಯು ಯಾರು? ಸಮಾಜವಾದವೆನ್ನುವುದು ಒಳ್ಳೇ ಮನೋಹರವಾದ ಶಬ್ದವಿದೆ. ಸಮಾಜವಾದದಲ್ಲಿ ಸಮಾಜದ ಸದಸ್ಯರೆಲ್ಲರೂ ಸರಿಸಮಾನರು. ಮೇಲು ಕೀಳೆಂಬ ಭೇದಭಾವಗಳಿಲ್ಲ. ವ್ಯಕ್ತಿಯ ಶರೀರದಲ್ಲಿ ತಲೆ ಉನ್ನತೆ ಸ್ಥಾನದಲ್ಲಿರುವದೆಂದು ಅದು ಹೆಚ್ಚಿನದಲ್ಲ, ಪಾದಗಳು ಬುಡದಲ್ಲಿ ಭೂಮಿಗೆ ತಾಗಿವೆಯೆಂದು ಅವು ಕೀಳಲ್ಲ, ವ್ಯಕ್ತಿಯ ಶರೀರದಲ್ಲಿಯ ಅವಯವಗಳು ಸರಿಸಮಾನವಾಗಿರುವಂತೆ, ಸಮಾಜದ ಸದಸ್ಯರೆಲ್ಲರೂ ಅಷ್ಟೇ ಸರಿಸಮಾನರು. ಇದುವೇ ಸಮಾಜವಾದವಾಗಿದೆ.'[1]

ಗಾಂಧೀಜಿಯವರು ಸತ್ಯ, ಅಹಿಂಸೆ, ಅಸಹಕಾರ ತತ್ವಗಳ ತಳಹದಿಯ ಮೇಲೆ ಸಮಾಜವಾದವನ್ನು ರೂಪಿಸಿದ್ದಾರೆ. 'ಸ್ವಾತಂತ್ರ್ಯೋತ್ತರ ಸಮಯದ ನಮ್ಮ ದೇಶದ ಸಂದರ್ಭದಲ್ಲಿ ಒಂದು ರಾಜಕೀಯ ಸಿದ್ಧಾಂತವಾಗಿ ಸಮಾಜವಾದವು ರಾಜಕೀಯ ಚಟುವಟಿಕೆಗಳ ಪರಿಧಿಯಲ್ಲಿ ರಷ್ಯಾ ಹಾಗೂ ಚೀನಾದಲ್ಲಿ ಪ್ರಚಲಿತವಿದ್ದ ಸಮಾಜವಾದದ ತತ್ವ ಮತ್ತು ಕಾರ್ಯಚರಣೆಗಳಿಂದ ಗಣನೀಯವಾಗಿ ಪ್ರಭಾವಿತವಾಗಿದೆ. ಇಂಥ ಅಂತರರಾಷ್ಟ್ರೀಯ ಪ್ರಭಾವದಿಂದಾಗಿಯೇ ಒಂದಾಗಿ ಕೆಲಸ ಮಾಡುತ್ತಿದ್ದ ಭಾರತೀಯ ಕಮ್ಯುನಿಸ್ಟ್ ಪಕ್ಷವು 1950ರ ದಶಕದಲ್ಲಿ ಎರಡು ಪ್ರತ್ಯೇಕ ರಾಜಕೀಯ ಪಕ್ಷಗಳಾಗಿ ವಿಭಜಿಸಲ್ಪಟ್ಟಿತು. ರಷ್ಯಾದ ನೆಲದಲ್ಲಿ ಬೇರುಬಿಟ್ಟ ಸಮಾಜವಾದಿ ರಾಜಕೀಯ ಆಚರಣೆಯು ಸಿ.ಪಿ.ಐ ಪಕ್ಷದ ಚಿಂತನೆ ಮತ್ತು ಯೋಜನೆಗಳ ಮೇಲೆ ಗಂಭೀರ ಪ್ರಭಾವ ಬೀರಿದ್ದರೆ

ಚೀನಾ ದೇಶದಲ್ಲಿ ಬಳಕೆಯಲ್ಲಿದ್ದ 'ಕಮ್ಯುನಿಸಂ' ಸಿದ್ಧಾಂತವು ಭಾರತದ ಸಿ.ಪಿ.ಐ(ಎಂ) ಪಕ್ಷದ ನಿಲುವುಗಳ ಮೇಲೆ ಸಾಕಷ್ಟು ಪರಿಣಾಮ ಬೀರಿದ್ದು ಕಾಣುತ್ತದೆ. ಇದು ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷಗಳ ಪ್ರಸ್ತುತ ಪರಿಸ್ಥಿತಿ. ಸಮಾಜವಾದೀ ಚಿಂತನೆ, ಚಟುವಟಿಕೆಗಳು ಈ ಸಮಸ್ಯೆಯನ್ನು ಭವಿಷ್ಯದಲ್ಲಿ ಎದುರಿಸಬಹುದೆಂಬ ಮುಂದಾಲೋಚನೆಯುಳ್ಳ ಸ್ವಾತಂತ್ರ್ಯಪೂರ್ವದ ಪ್ರಮುಖ ಸಮಾಜವಾದೀ ರಾಜಕೀಯ ನಾಯಕರು ಭಾರತೀಯ ಸಮಾಜವಾದವು ತನ್ನ ಸಾಂಸ್ಕೃತಿಕ ಸಾಮಾಜಿಕ ಚೌಕಟ್ಟಿನ ಸೀಮೆಯಲ್ಲಿ ತನಗೆ ಅವಶ್ಯವಿರುವ ಸೈದ್ಧಾಂತಿಕ ನೆಲೆಗಟ್ಟನ್ನು ಅಳವಡಿಸಿಕೊಳ್ಳಬೇಕೆಂದು ಮೊದಲಿನಿಂದಲೂ ವಾದಿಸುತ್ತಲೇ ಬಂದಿದ್ದಾರೆ. ಉಳಿದ ಸಮಾಜವಾದಿ ಆಳ್ವಿಕೆಯ ಮಾದರಿಗಳು ತಾತ್ವಿಕವಾಗಿ ಮತ್ತು ಸೈದ್ಧಾಂತಿಕ ರಾಜಕೀಯ ಚಟುವಟಿಕೆಗಳಲ್ಲಿ ಕಾರ್ಯಾತ್ಮಕವಾಗಿ ಮಾರ್ಗದರ್ಶನ ಮಾಡಬಹುದೇ ವಿನಃ ಅವು ನಮಗೆ ಆದರ್ಶಮಾದರಿಗಳಾಗಿ ನಿಲ್ಲಲಾರವು ಎಂಬುದು ರಾಷ್ಟ್ರೀಯ ಸಮಾಜವಾದಿಗಳು ಪ್ರಬಲವಾಗಿ ಪ್ರತಿಪಾದಿಸಿದ ವಿಚಾರಧಾರೆ. ಎಂ.ಎನ್.ರಾಯ್ ಇಂತಹ ರಾಷ್ಟೀಯ ಎಡಪಂಥೀಯ ವಿಚಾರಧಾರೆಯ ಗುಂಪಿಗೆ ಸೇರಿದ ಭಾರತೀಯ ಧುರೀಣರಲ್ಲಿ ಅಗ್ರಗಣ್ಯರು. ರಾಯ್ ಅವರ ದೃಷ್ಟಿಯಲ್ಲಿ ಸಮಾಜವಾದ ಅಥವಾ 'ಸೋಶಿಯಲಿಸಂ' ಮತ್ತು 'ಕಮ್ಯುನಿಸಂ' ಎರಡೂ ಒಂದೇ ನಾಣ್ಯದ ಎರಡು ಮುಖಗಳು. ಇವು ಎರಡೂ ಒಂದೇ ತಾತ್ವಿಕ ನೆಲೆಗಟ್ಟಿನಲ್ಲಿ ನಿಲ್ಲುವಂತಹವು ಮತ್ತು ಒಂದೇ ಮಾದರಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತಹವು. ಈ ವಿಚಾರಧಾರೆಯು ಬಳಸುವ ಪ್ರಮುಖ ಸಾಧನವು ವರ್ಗ ಸಂಘರ್ಷ. ಇದರ ಗುರಿ, ಸಮಾನತೆಯ ಆಧಾರದ ಮೇಲೆ ನಿಂತ ಸಮಾಜ. ಸಂಘರ್ಷ ಹಾಗೂ ಪುನರ್ನಿರ್ಮಾಣಗಳು ಸಮಾಜವಾದದ ಮೂಲ ತಿರುಳು. ಸಾಮಾನ್ಯ ವ್ಯಕ್ತಿಯ ಜೀವನಾವಶ್ಯಕತೆಗಳಿಂದ ಹೊರತಾದ ಸಮಾಜವಾದವು ಕ್ರಾಂತಿಯ ಸಾಧನವಾಗಲು ಶಕ್ಯವಿಲ್ಲ. ಮೂಲಭೂತವಾಗಿ ಹೇಳಬೇಕೆಂದರೆ, ರಾಯ್ ಅವರು ಪ್ರತಿಪಾದಿಸಿದ ಈ ಸೈದ್ಧಾಂತಿಕ ತತ್ವವು ಮಾನವರನ್ನು ಯಾಂತ್ರೀಕೃತ ಗೊಂಬೆಗಳಂತೆ ನೋಡುವುದಿಲ್ಲ; ಬದಲಾಗಿ ಮಾನವೀಯ ಅಂಶಗಳು ಮತ್ತು ಮಾನವತ್ವದ ಮೌಲ್ಯಗಳು ಸಮಾಜವಾದದ ಮೂಲ ಬೇರುಗಳಾಗಿ ಇಲ್ಲಿ ಕಾಣಿಸಿಕೊಳ್ಳುತ್ತವೆ.'[2]

ಮಾರ್ಕ್ಸ್ ವಿಚಾರಗಳ ತಳಹದಿಯ ಮೇಲೆ ರಾಯ್ ಸಮಾಜವಾದವನ್ನು ರೂಪಿಸುತ್ತಾರೆ.

ಮಾರ್ಕ್ಸ್ ಮತ್ತು ಬೌದ್ಧ ಮತಗಳನ್ನು ಮೈಗೂಡಿಸಿಕೊಂಡಿದ್ದ ಆಚಾರ್ಯ ನರೇಂದ್ರದೇವರು ಶೋಷಣೆಯ ನೆಲೆಯಲ್ಲಿ ಸಮಾಜವಾದವನ್ನು ರೂಪಿಸುತ್ತಾರೆ. ಮಾರ್ಕ್ಸ್‌ನ ಮಾತುಗಳಲ್ಲೇ ಹೇಳುವುದಾದರೆ "ಶ್ರಮಿಕನ ಅಭ್ಯುದಯವು ಸಮಾಜದಲ್ಲಿನ ಮನುಷ್ಯನ ಸಮಗ್ರ ಅಭ್ಯುದಯ. ಸಮಾಜದ ಎಲ್ಲ ಮಟ್ಟದ ತುಳಿತ – ಶ್ರಮಜೀವಿಯ ತುಳಿತದಲ್ಲಿ ಸಾಂದ್ರಗೊಂಡಿದೆ ಕೂಡಾ."[3] ರೋಸಾ ಲುಕ್ಸಂಬರ್ಗ್‌ಳ ಮಾತಿನಂತೆ "ಸಮಾಜವಾದವು ಕೇವಲ ರೊಟ್ಟಿಯ ಸಮಸ್ಯೆ ಮಾತ್ರ ಅಲ್ಲ; ಅದೊಂದು ಜಾಗತಿಕ ಸಾಂಸ್ಕೃತಿಕ ಚಳುವಳಿ."[4]

ಸಮಾಜವಾದದ ಅನ್ವೇಷಣೆ ವರ್ಗರಹಿತ ಸಮಾಜದ ಸ್ಥಾಪನೆ. ನಮ್ಮಲ್ಲಿ ಶೋಷಕ–ಶೋಷಿತರಿದ್ದಾರೆ, ಪೀಡಕ–ಪೀಡಿತರಿದ್ದಾರೆ. ಇವರನ್ನೊಳಗೊಂಡ ನಾನಾ ವರ್ಗಗಳ ವಿಮುಖ ಆಸಕ್ತಿ–ಪ್ರವೃತ್ತಿಗಳಿಗೆ ಚರಮಗೀತೆ ಹಾಡಿ, ಸಮಾಜವನ್ನು ಪುನರ್ ರಚಿಸಬಯಸುತ್ತದೆ ಸಮಾಜವಾದ. ಆಗ ಒಬ್ಬ ವ್ಯಕ್ತಿಯ ಉನ್ನತಿ ಸಹಜವಾಗಿ ಇನ್ನಿತರ ವ್ಯಕ್ತಿಗಳ ಉನ್ನತಿಯಾಗುತ್ತದೆ. ಇದರಿಂದ ಎಲ್ಲ ಸದಸ್ಯರು ಒಟ್ಟಾಗಿ ಏಕಮಾತ್ರ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬದುಕುತ್ತಾರೆ. ಮಾನವ ಚರಿತ್ರೆ ಬಹುಕಾಲದಿಂದ ಶೋಷಕ ಹಾಗೂ ಶೋಷಿತ ವರ್ಗಗಳ ನಡುವಿನ ಹೋರಾಟದ ಚಿತ್ರಣವಾಗಿದೆ. ವ್ಯಕ್ತಿ ಸದಾ ಸಾಮಾಜಿಕ ಪ್ರಗತಿಯ ಕಟ್ಟಳೆಗಳ ಸಾಧನವಾಗಿದ್ದಾನೆ. ಆತ ಸಮಾಜದ ವಿಕಾಸಕ್ಕೊಂದು ಜಾಗೃತ ನಿರ್ದೇಶನ ನೀಡಲು ಸಮರ್ಥನಾಗಿಲ್ಲ. ಸ್ವತಂತ್ರವಾದ, ಶೋಷಣೆಗೀಡಾದಂತಹ ಸಾಮಾಜಿಕ ಶ್ರೇಣಿಯನ್ನು ಸಮಾಜವಾದ ನಿರ್ಮಿಸಬಯಸುತ್ತದೆ. ಅಲ್ಲಿ ಆಗ ಜನರು ತಮ್ಮ ಅಸಹಾಯಕತೆಯ ನೆಲೆಯಿಂದ ಮೇಲೇಳುತ್ತಾರೆ; ಸಮಾಜದ ವಿಕಾಸಪಥವನ್ನು ಹಸನುಮಾಡುತ್ತಾರೆ. ಹೀಗೆ ಕಾರ್ಲ್‌ಮಾರ್ಕ್ಸ್ ಪ್ರಕಾರ ಸಮಾಜವಾದ 'ಅಗತ್ಯತೆಯ ಎಲ್ಲೆಯಿಂದ ಸ್ವಾತಂತ್ರ್ಯದ ಎಲ್ಲೆಗೆ' ಜನರನ್ನು ಕರೆದೊಯ್ಯುವ ಗುರಿ ಹೊಂದಿದೆ.[5]

ಬೌದ್ಧಿಕ ಪರಿಕಲ್ಪನೆಗಳಲ್ಲಿ ಮಾರ್ಕ್ಸ್‌ನಿಗೆ ಹತ್ತಿರವಿದ್ದು ಹೃದಯದ ಮಟ್ಟದಲ್ಲಿ ಗಾಂಧೀಜಿಗೆ ಹತ್ತಿರವಾಗಿ ಆಚಾರ್ಯ ನರೇಂದ್ರದೇವರು ಸಮಾಜವಾದವನ್ನು ರೂಪಿಸಿದರು.

ಭಾರತೀಯ ಸಮಾಜವಾದವನ್ನು ವೈಜ್ಞಾನಿಕ ತಳಹದಿಯ ಮೇಲೆ ನಿರ್ಮಿಸಿದ ಕೀರ್ತಿ ರಾಮಮನೋಹರ ಲೋಹಿಯಾ ಅವರಿಗೆ ಸಲ್ಲುತ್ತದೆ. ಭಾರತದಲ್ಲಿ ಸಮಾಜವಾದದ ಉದಯ ಗಾಂಧೀಜಿಯವರ 'ದರಿದ್ರ ನಾರಾಯಣ' ಕಲ್ಪನೆಯಿಂದಲೇ

ಆರಂಭಗೊಂಡಿತು ಎಂದು ಚರ್ಚಿಸುತ್ತಾರೆ. ಚಿಕ್ಕಂದಿನಲ್ಲೆ ಗಾಂಧೀಜಿಯವರ ಸಂಪರ್ಕಕ್ಕೆ ಬಂದ ಲೋಹಿಯಾರವರು ಕೊನೆವರೆಗೂ ಅವರ ಪ್ರಭಾವದಿಂದ ಬಿಡಿಸಿಕೊಳ್ಳಲಾಗಲಿಲ್ಲ. ಆದರೆ ಗಾಂಧೀಜಿಯವರ ಕುರುಡು ಶಿಷ್ಯನಂತಿರದೆ ಕಣ್ಣು ತೆರೆದ ಶಿಷ್ಯನಂತಿದ್ದರು ಲೋಹಿಯಾ. ನಾವು ಗಾಂಧೀಜಿಯಂತಹ ಮಹಾನ್ ವ್ಯಕ್ತಿಯ ಬಗ್ಗೆ ಆಲೋಚಿಸುವಾಗ ಅವರ ಬಗೆಗಿನ ಆದರ್ಶಗಳೆಲ್ಲವನ್ನು ವಾಸ್ತವವೆಂದು ಪರಿಗಣಿಸುವ ತಪ್ಪು ಮಾಡುವ ಸಾಧ್ಯತೆ ಇದೆ. ನಾನು ಹಲವಾರು ಬಾರಿ ಕ್ಯಾಥೋಲಿಕ್‌ರಂತೆಯೂ, ಕಮ್ಯೂನಿಸ್ಟರಂತೆಯೂ ಗಾಂಧೀಜಿಯವರ ಬಗ್ಗೆ ಆಲೋಚಿಸಿದ್ದೇನೆ ಎಂಬುದನ್ನು ಇಲ್ಲಿ ಒಪ್ಪಿಕೊಳ್ಳಲೇಬೇಕು. ಕಮ್ಯುನಿಸ್ಟನು ತನ್ನ ಆದರ್ಶವನ್ನು ಯಾವುದೋ ಒಂದು ಕಾಲದಲ್ಲೋ ಒಂದು ದೇಶದಲ್ಲೋ ಅಥವಾ ಒಬ್ಬ ವ್ಯಕ್ತಿಯಲ್ಲೋ ಮೂರ್ತೀಭವಿಸುವಂತೆ ಕಂಡರಿಸುವನು. ಆಗ ಆತನ ವಿಮರ್ಶನ ಶಕ್ತಿ ಕ್ಷೀಣಿಸಿ, ಆತನ ಆದರ್ಶದ ಕುಂದುಕೊರತೆಗಳೆಲ್ಲವು ಅವನಿಗೆ ಕಾಣದಂತಾಗುತ್ತದೆ. ಅನೇಕ ಕಮ್ಯುನಿಸ್ಟರ ಈ ಚರ್ಯೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಅನೇಕ ಕಮ್ಯುನಿಸ್ಟರ ಮನಸ್ಸು ನನಗೆ ಅರ್ಥವಾದುದು ಕೊನೆಗೆ ಗಾಂಧೀಜಿಯವರ ಬಗ್ಗೆ ನನಗಿರುವ ಮಮತೆಯನ್ನು ಅರ್ಥಮಾಡಿಕೊಂಡ ನಂತರವೇ. ಅದರಿಂದ ಸಂಪೂರ್ಣ ಬಿಡುಗಡೆಗೊಂಡಿರುವೆನೆಂದು ನಾನು ತಿಳಿಯಲಾರೆ. ಏಕೆಂದರೆ ಅವರ ಬಗೆಗೆ ನನಗೆ ವಿಚಾರಾತೀತ ಭಕ್ತಿಯ ಕೆಲ ಅಂಶಗಳು ಇನ್ನೂ ಇವೆ.'[6]

ಗಾಂಧೀಜಿ ವ್ಯಕ್ತಿತ್ವ, ಆಲೋಚನೆ ಅವರು ರೂಪಿಸಿದ ನಾಗರಿಕ ಅಸಹಕಾರ, ವಿಕೇಂದ್ರಿಕರಣ, ಗ್ರಾಮ ಸ್ವರಾಜ್ಯ, ಇವುಗಳ ಜೊತೆಗೆ ಗಾಂಧೀಜಿಯವರ ಗುರಿ ಮತ್ತು ದಾರಿಗಳ ಶುದ್ಧತೆ ಲೋಹಿಯಾರಿಗೆ ಅತ್ಯಂತ ಮುಖ್ಯವಾಗಿ ಕಂಡಿತ್ತು. ಲೋಹಿಯಾ ಜರ್ಮನಿಯಲ್ಲಿದ್ದಾಗ ಮಾರ್ಕ್ಸ್‌ನ ಕೃತಿಗಳನ್ನೂ ಮೂಲ ಜರ್ಮನ್ ಭಾಷೆಯಲ್ಲೇ ಓದಿ ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದರಿಂದ ಮಾರ್ಕ್ಸ್ ಮೇಲಿನ ವಿಶ್ಲೇಷಣೆ ಆರಂಭವಾಯಿತು. ಆದರೆ ಮಾರ್ಕ್ಸ್‌ವಾದದ ಜೊತೆಗೆ ವಸ್ತುನಿಷ್ಠ ಅಂತರವನ್ನು ಸಾಧಿಸಿಕೊಂಡು ಬಂದರು. ಗಾಂಧಿವಾದ ಮಠೀಯವಾದವಾಗುತ್ತಿದ್ದಾಗ, ಗಾಂಧಿವಾದವನ್ನು, ಮಾರ್ಕ್ಸ್‌ವಾದವನ್ನು ವಿಮರ್ಶಿಸಿದ ಲೋಹಿಯಾ 'ನಾನು ಮಾರ್ಕ್ಸ್‌ಪರವೂ ಇಲ್ಲ ವಿರೋಧವೂ ಅಲ್ಲ, ಗಾಂಧಿ ಪರವೂ ವಿರೋಧವೂ ಇಲ್ಲ' ಎಂದು ಹೇಳುತ್ತಾರೆ. 'ನಮ್ಮ ಹಾದಿ ಸತ್ಯಾಗ್ರಹ ಹಾಗೂ ನಾಗರಿಕ ಅವಿಧೇಯತೆ, ಜೊತೆಗೆ ವಯಸ್ಕ ಮತದಾನದ ಮೂಲಕ 'ವಿಶ್ವ ಸಂಸತ್ತನ್ನು' ಸ್ಥಾಪಿಸುವುದು ನಮ್ಮ ಗುರಿ. ಈ ಗುರಿ ಮಾರ್ಕ್ಸ್‌ವಾದಕ್ಕಿಲ್ಲ.'[7] ಲೋಹಿಯಾರ ಈ ನಿಲುವು ಗಾಂಧೀಜಿಯವರ ಸತ್ಯಾಗ್ರಹದ

ಬಗೆಗಿನ ಒಲವನ್ನು ತಿಳಿಸುತ್ತದೆ. 'ಭಾರತೀಯ ಸಮಾಜವಾದವು ಅನೇಕ ವರುಷಗಳಿಂದಲೂ ಈ ಗಾಂಧೀವಾದದ ಅಥವಾ ಪ್ರಜಾಪ್ರಭುತ್ವದ ನಂಬಿಕೆಗಳನ್ನು ಹಾಗೂ ಕಮ್ಯೂನಿಸಂ, ಮಾರ್ಕ್ಸ್‌ವಾದ ನಂಬಿಕೆಗಳನ್ನು ಬೆರಕೆ ಮಾಡುವ ಸಾಂಕ್ರಾಮಿಕ ರೋಗದಿಂದ ಸಾಕಷ್ಟು ನರಳಿದೆ. ಈ ನಿಷ್ಪ್ರಯೋಜಕವಾದ ಪ್ರಯತ್ನದಿಂದ ಮನುಷ್ಯನ ಮನಸ್ಸು ಕೊಳಕಾದ, ಕೆಲಸಕ್ಕೆ ಬಾರದ ಆಲೋಚನೆಗಳ ಹಗ್ಗವನ್ನು (ಕೆಲವಂಶವನ್ನು ಮಾರ್ಕ್ಸ್‌ವಾದದಿಂದಲೂ ಕೆಲವಂಶವನ್ನು ಗಾಂಧೀವಾದದಿಂದಲೂ ತೆಗೆದು) ಹೊಸೆಯಬಹುದೇ ವಿನಃ ಇನ್ನೇನೂ ಮಾಡಲಾರದು.'[8] 'ಹೊಂದಾಣಿಕೆಯ ಬಗೆಗೆ ಎಚ್ಚರವಿರಲಿ' ಎಂದು ಹೇಳುತ್ತಿದ್ದ ಲೋಹಿಯಾರವರು ಈ ಮಿಲನವನ್ನು ಮೂರ್ಖತನವೆಂದು ಕರೆಯುತ್ತಿದ್ದರು. ಆದರೆ ಗಾಂಧೀಜಿಯವರ 'ಸತ್ಯಾಗ್ರಹ' ಅಸ್ತ್ರ ಲೋಹಿಯಾರಿಗೆ ಕ್ರಾಂತಿಕಾರಕವಾಗಿ ಕಂಡಿತ್ತು. ಮಾನವ ಒಂಟಿಯಾಗಿದ್ದಾಗ್ಯೂ ಹೋರಾಡುವ ಶಕ್ತಿಯನ್ನು ಮಾನವ ಜನಕೋಟಿಗೆ ದಯಪಾಲಿಸಿದ ಗಾಂಧೀಜಿ ಲೋಹಿಯಾರ ಪ್ರಜ್ಞೆಯ ಆಳಕ್ಕಿಳಿದಿದ್ದರು. ಕಮ್ಯುನಿಸಂ, ಮಾರ್ಕ್ಸ್‌ವಾದ, ಗಾಂಧೀವಾದಗಳಲ್ಲಿ ಮುಖ್ಯವಾಗಿ ಗಾಂಧೀಯವರ ಬೆಳಕಿನಲ್ಲಿ ಸಮಾಜವಾದವನ್ನು ರೂಪಿಸಲೆತ್ನಿಸಿದರು. ಗಾಂಧೀಜಿಯವರ ಜೀವನ ಹಾಗೂ ಗುರಿಗಳನ್ನು ಸಮಾಜವಾದದ ವಸ್ತ್ರದೊಡನೆ ನೇಯ್ದರೆ ನವೀನ ಸಮಾಜವಾದವೊಂದು ನಿರ್ಮಾಣವಾದೀತು. ಮಾನವ ಕುಲ ಆಗ ಶಾಂತಿ ಹಾಗೂ ಸಭ್ಯ ಜೀವನದ ನೂತನ ಯುಗವನ್ನು ನಿರೀಕ್ಷಿಸಬಹುದು. ಕನ್ನಡದ ಪ್ರಸಿದ್ಧ ವಿಮರ್ಶಕರಾದ ಪಿ.ಲಂಕೇಶರ ಪ್ರಕಾರ "ಬಂಡವಾಳಶಾಹಿ ಮತ್ತು ಕಮ್ಯುನಿಸಂನ ಗುಪ್ತ ಕ್ರೌರ್ಯ, ದಬ್ಬಾಳಿಕೆಯನ್ನ ಅಲ್ಲಗೆಳೆದು ರೂಪಿತವಾದದ್ದು ಲೋಹಿಯಾ ಸಮಾಜವಾದ." ಕಿ.ರಂ.ನಾಗರಾಜರ ಪ್ರಕಾರ "ಕೆಳಸ್ತರದಿಂದ ಗಟ್ಟಿಗೊಳ್ಳುವ ಸಮಾಜದ ಸರ್ವಾಂಗೀಣ ವಿಕಸನಶೀಲತೆ ಲೋಹಿಯಾ ಸಮಾಜವಾದವಾಗಿದೆ." ಡಾ॥ನಟರಾಜ್ ಹುಳಿಯಾರ್‌ರವರ ಪ್ರಕಾರ "ಎಲ್ಲಾ ಜಾತಿಗಳಿಗೂ ಮಹಿಳೆಯರಿಗೂ ತಕ್ಕ ಮೀಸಲಾತಿ ಹಾಗೂ ಪ್ರಾತಿನಿಧ್ಯವುಳ್ಳ ಸಮಾಜವಾದಿ ಪಕ್ಷ ಲೋಹಿಯಾ ಅವರು ರೂಪಿಸುತ್ತಾರೆ." ಬಂಜಗೆರೆ ಜಯಪ್ರಕಾಶ್ ಅವರ ಪ್ರಕಾರ "ಗಾಂಧೀಜಿ ಚರಕದ ಮೂಲಕ ಗ್ರಾಮೋದ್ಯೋಗದ ಮೂಲಕ ಸಮಾಜವಾದ ಆರ್ಥಿಕತೆಯನ್ನು ರೂಪಿಸಿದ್ರೆ, ಲೋಹಿಯಾ ಗುದ್ದಲಿಯ ಮೂಲಕ ಸಮಾಜವಾದದ ಆರ್ಥಿಕತೆ ರೂಪಿಸುತ್ತಾರೆ." ಚಂದ್ರಶೇಖರ ನಂಗಲಿ ಅವರ ಪ್ರಕಾರ "ಭಾರತಕ್ಕೆ ಅಗತ್ಯವಾದ ಒಂದು ಚಳುವಳಿಯನ್ನು ರೂಪಿಸಿದ ಗತಿಶೀಲ ಹೋರಾಟವೇ ಲೋಹಿಯಾ ಸಮಾಜವಾದ."

'ಸಮಾಜವಾದವು ಇನ್ನೂ ತೆರೆದ ಸಿದ್ಧಾಂತ ಆದರೆ ಕಮ್ಯೂನಿಸಂ ಹಾಗೂ ಬಂಡವಾಳ ಶಾಹಿ ಪದ್ಧತಿಗಳು ಮುಚ್ಚಿದಂಥವು. ನವೀನ ಜಗತ್ತು ಇಡೀ ಜಗತ್ತಿನ ಜನರಿಗೆ ಸಭ್ಯ ಜೀವನಾವಕಾಶಕ್ಕಾಗಿ ಹೋರಾಡಬೇಕು. ಸಂಪದಭಿವೃದ್ಧಿಗಿಂತ ಸಭ್ಯ ಜೀವನ ಎನ್ನುವುದು ಮುಖ್ಯವಾದ ಘೋಷಣೆ' ಎಂದು ಲೋಹಿಯಾರ ನಂಬಿಕೆಯಾಗಿತ್ತು. ಲೋಹಿಯಾರವರು ಸಮಾಜವಾದಕ್ಕೆ ಗಾಂಧೀಜಿಯವರಿಂದ ಹೋರಾಟದ ಸ್ವರೂಪವನ್ನು (ಚಳುವಳಿ ರಾಜಕಾರಣ) ಮಾರ್ಕ್ಸ್‌ರಿಂದ ಸಂಪತ್ತಿನ ನಿರ್‌ವ್ಯಾಮೋಹವನ್ನು ತಂದುಕೊಟ್ಟು, ದೇಸಿ ವಾತಾವರಣಕ್ಕೆ ಅನ್ವಯವಾಗುವಂತೆ ವೈಜ್ಞಾನಿಕ ಸಮಾಜವಾದವನ್ನು ತಮ್ಮ ಬದುಕಿನುದ್ದಕ್ಕೂ ರೂಪಿಸಿದರು.

ಟಿಪ್ಪಣಿಗಳು

1. ಶ್ರೀ.ಗಜೇಂದ್ರಗಡ ಶಾಮರಾಯ: (ಅನು) 'ನನ್ನ ಕನಸಿನ ಭಾರತ,' ಮೋ.ಕ.ಗಾಂಧಿ, ಗಾಂಧಿ ಸ್ಮಾರಕ ನಿಧಿ ಪ್ರಕಾಶನ 1960
2. ಪ್ರೊ.ವಿಘ್ನೇಶ್. ಎನ್.ಭಟ್ : 'ಎಂ.ಎನ್.ರಾಯ್,' ಕನ್ನಡ ಪುಸ್ತಕ ಪ್ರಾಧಿಕಾರ 2000.
3. ಡಾ||ಡಿ.ಆರ್.ನಾಗರಾಜ್, ಕಿ.ರಂ. ನಾಗರಾಜ್ (ಸಂ) 'ಸಮಾಜವಾದಿ ಆಚಾರ್ಯ,' ಭಾರತ ಯಾತ್ರಾ ಕೇಂದ್ರ, 1969
4. ಹನುಮಂತ : (ಸಂ) 'ಸಮಾಜವಾದದೆಡೆಗೆ,' ಆಚಾರ್ಯನರೇಂದ್ರದೇವ, ಜನಪ್ರಕಾಶನ, 1991
5. ಡಾ||ದಸ್ತಗೀರಸಾಬ್‌ದಿನ್ನಿ(ಸಂ) 'ಲೋಹಿಯಾ ಸಾಂಸ್ಕೃತಿಕ ಅನುಸಂಧಾನ,' ಕರ್ನಾಟಕ ಸಾಹಿತ್ಯ ಅಕಾಡೆಮಿ, 2008.
6. ನಟರಾಜ್ ಹುಳಿಯಾರ್ (ಸಂ) ರಾಮಮನೋಹರ ಲೋಹಿಯಾ ಚಿಂತನೆ, ಸಂ: 7, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008.
7. ಹಸನ್ ನಯೀಂ ಸುರಕೋಡ (ಅನು), 'ಜಾತಿ ಪದ್ಧತಿ', ಪತ್ರಿಕೆ ಪ್ರಕಾಶನ, ಲಂಕೇಶ್ ಮುನ್ನುಡಿ.
8. ನಟರಾಜ್ ಹುಳಿಯಾರ್ (ಸಂ) ರಾಮಮನೋಹರ ಲೋಹಿಯಾ ಚಿಂತನೆ, ಸಂ: 7, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008.

ಅಧ್ಯಾಯ : 3

ರಾಮಮನೋಹರ ಲೋಹಿಯಾ ಚಿಂತನೆಗಳ ಪ್ರಭಾವ: ಕರ್ನಾಟಕ ಸಂದರ್ಭದಲ್ಲಿ

ತಮ್ಮ ಕ್ರಿಯಾಶೀಲ ಬದುಕಿನುದ್ದಕ್ಕೂ ರೂಪಿಸಿದ ಸಿದ್ಧಾಂತಗಳಿಂದ ಲೋಹಿಯಾರ ಪ್ರಭಾವ ಭಾರತದ ಅನೇಕ ಕಡೆಗಳಲ್ಲಿ ಕಾಣಬಹುದಾಗಿದೆ.

ಲೋಹಿಯಾ ವ್ಯಕ್ತಿಪರಿಚಯ: ರಾಮಮನೋಹರ ಲೋಹಿಯಾ ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯ ಅಕ್ಬರ್‌ಪುರದಲ್ಲಿ 23 ಮಾರ್ಚ್ 1910 ರಂದು ಹುಟ್ಟಿದರು. ತಂದೆ ಹೀರಾಲಾಲ್; ತಾಯಿ ಚಂದಾ. ಗಾಂಧೀಜಿಯವರ ಅನುಯಾಯಿಯಾಗಿದ್ದ ಹೀರಾಲಾಲ್ ಲೋಹಿಯಾ ಒಂಭತ್ತು ವರ್ಷದವರಾಗಿದ್ದಾಗಲೇ ಅವರನ್ನು ಗಾಂಧೀಜಿಯವರ ಬಳಿ ಕರೆದೊಯ್ದಿದ್ದರು. ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡ ಲೋಹಿಯಾ ಅಕ್ಬರ್‌ಪುರದಲ್ಲಿ ಪ್ರಾಥಮಿಕ ಶಿಕ್ಷಣ ಆರಂಭಿಸಿ, ಕಲ್ಕತ್ತದಲ್ಲಿ ಬಿ.ಎ. ಪದವಿ ಮುಗಿಸಿದರು. ಮುಂದೆ ಜರ್ಮನಿಯ ಬರ್ಲಿನ್‌ನ ಹಂಬೋಲ್ಟ್ ವಿಶ್ವವಿದ್ಯಾಲಯದಲ್ಲಿ 'ಎಕನಾಮಿಕ್ಸ್ ಆಫ್ ಸಾಲ್ಟ್ ಸತ್ಯಾಗ್ರಹ' ಎಂಬ ವಿಷಯದ ಮೇಲೆ ಸಂಶೋಧನೆ ಮಾಡಿ ಪಿ.ಎಚ್.ಡಿ ಪದವಿ ಪಡೆದರು.

ವಿದ್ಯಾರ್ಥಿ ದೆಸೆಯಲ್ಲೇ ಸ್ವಾತಂತ್ರ್ಯ ಚಳುವಳಿ ಪ್ರವೇಶಿಸಿದ ಲೋಹಿಯಾ ಸ್ವಾತಂತ್ರ್ಯ ನಂತರ ಅಧಿಕಾರ ರಾಜಕಾರಣದ ವಿರುದ್ಧ ಚಳುವಳಿ ರಾಜಕಾರಣವನ್ನು ಸಂಘಟಿಸಲೆತ್ನಿಸುತ್ತಾರೆ. 'ಮ್ಯಾನ್‌ಕೈಂಡ್' ಹಾಗೂ 'ಚೌಕಂಭಾ' ಪತ್ರಿಕೆಗಳನ್ನು ಆರಂಭಿಸಿ ಸೂಕ್ಷ್ಮ ಒಳನೋಟಗಳುಳ್ಳ ಲೇಖನಗಳನ್ನು ಬರೆಯುತ್ತಾರೆ. ಸಮಾಜವಾದಿಗಳು ಮುಖ್ಯವಾಗಿ ಪುಸ್ತಕ ವಿಮುಖತೆಯನ್ನು ಮೊದಲು ಗೆಲ್ಲಬೇಕು ಎಂದು ಕರೆನೀಡುವ ಲೋಹಿಯಾರವರು ಅನೇಕ ಕೃತಿಗಳನ್ನು ಇಂಗ್ಲಿಷ್ ಹಾಗೂ ಹಿಂದಿ ಭಾಷೆಯಲ್ಲಿ ರಚಿಸಿದ್ದಾರೆ. 'ದಿ ಕ್ಯಾಸ್ಟ್ ಸಿಸ್ಟಮ್,' 'ಇಂಟರ್‌ವಲ್ ಡ್ಯೂರಿಂಗ್ ಪಾಲಿಟಿಕ್ಸ್', 'ಮಾರ್ಕ್ಸ್ ಗಾಂಧಿ ಅಂಡ್ ಸೋಷಿಯಲಿಸಂ', 'ವೀಲ್ ಆಫ್ ಹಿಸ್ಟರಿ', 'ಫ್ರಾಗ್ಮೆಂಟ್ಸ್ ಆಫ್ ಎ ವರ್ಲ್ಡ್ ಮೈಂಡ್', 'ಗಿಲ್ಟಿ ಮೆನ್ ಆಫ್ ಇಂಡಿಯಾಸ್ ಪಾರ್ಟಿಷನ್', 'ದ ಮಿಸ್ಟರಿ ಆಫ್ ಸರ್ ಸ್ಟಾಫರ್ಡ್ ಕ್ರಿಪ್ಸ್', 'ಲಾಂಗ್ವೇಜ್', 'ರುಪೀಸ್ 25000 ಎ ಡೇ', 'ಇಂಡಿಯಾ', 'ಚೈನಾ ಅಂಡ್ ನಾರ್ದರ್ನ್ ಫ್ರಾಂಟಿಯರ್ಸ್', 'ನೋಟ್ ಆಂಡ್ ಕಾಮೆಂಟ್ಸ್ ಸಂಪುಟ 1, 2', 'ವಿಲ್ ಟು ಪವರ್', ಇವು ಇಂಗ್ಲಿಷ್‌ನಲ್ಲಿ ಬರೆದವುಗಳೆಂದರೆ ಹಿಂದಿಯಲ್ಲಿ 'ಜಾತಿಪ್ರಥಾ', 'ಸಮಾಜವಾಗಿ ಆಂದೋಲನ್ ಕಾ ಇತಿಹಾಸ್', 'ಹಿಂದೂ ಮುಸಲ್ಮಾನ್', 'ಅನ್ನ ಸಮಸ್ಯಾ',

'ಆಜಾದ್ ಹಿಂದೂಸ್ಥಾನ್ ಕಿ ನಯೀ ರುಜ್‌ಹಾನ್', 'ಲೋಕಸಭಾ ಮೆ ಲೋಹಿಯಾ' (ಸಂಪುಟಗಳು) ಇವು ರಚಿತವಾದ ಪುಸ್ತಕಗಳಾಗಿವೆ.



ಕರ್ನಾಟಕದಲ್ಲಿ ಲೋಹಿಯಾ: ಸಮಾಜವಾದಿಗಳಾದ ರವಳಪ್ಪ,
ಪೊನ್ನಮ್ಮಾಳ್ ಹಾಗೂ ಗೋಪಾಲಗೌಡರೊಂದಿಗೆ



ಕರ್ನಾಟಕದಲ್ಲಿ ಲೋಹಿಯಾ: ಕೃಷ್ಣಗೋಪಾಲ್, ಅಣ್ಣಾದೇಶಪಾಂಡೆ, ಶಿವಣ್ಣ,
ಎಸ್. ವೆಂಕಟರಾಮ್, ಕೆ.ಜಿ. ಮಹೇಶ್ವರಪ್ಪ, ಟಿ.ಎನ್. ನಾಗರಾಜ್, ಶಾಂತವೇರಿ ಗೋಪಾಲಗೌಡ,
ಲೋಹಿಯಾ, ಶ್ರೀಕಂಠಶರ್ಮ, ಖಾದ್ರಿ, ಶಾಮಣ್ಣ, ಜೆ.ಎಚ್. ಪಟೇಲ್, ಕೋಣಂದೂರು ಲಿಂಗಪ್ಪ,

ಗಾಂಧೀಯ ನಂತರ ಉತ್ತರ ಭಾರತದ ರಾಜಕಾರಣಿಯೊಬ್ಬರು ಕರ್ನಾಟಕ ಸಾಂಸ್ಕೃತಿಕ ರಾಜಕಾರಣದಲ್ಲಿ ಆ ಮಟ್ಟಿಗೆ ಪ್ರಭಾವ ಬೀರಿದವರು ಲೋಹಿಯಾ ಅವರೇ ಎಂದು ಹೇಳುವ ರಹಮತ್ ತರೀಕೆರೆಯವರ ಪ್ರಕಾರ ರಾಮಮನೋಹರ ಲೋಹಿಯಾ ಕರ್ನಾಟಕದ ಜನತೆಗೆ ನೇರ ಸಂಪರ್ಕಕ್ಕೆ ಒದಗಿದ್ದು 1950ರ ದಶಕದಲ್ಲಿ ಕಾಣಿಸಿಕೊಂಡ ಕಾಗೋಡು ಭೂ ಹೋರಾಟದ ಮೂಲಕ. ಆಗ ಅವರು ಸ್ವತಃ ಕರ್ನಾಟಕಕ್ಕೆ ಬಂದು ಚಳುವಳಿಯಲ್ಲಿ ಭಾಗವಹಿಸಿದರು. ಕೆಲವು ದಿನ ಜೈಲುವಾಸವನ್ನು ಅನುಭವಿಸಿದರು. ನಂತರ ಅವರ ಚಿಂತನೆಯನ್ನು ಕರ್ನಾಟಕದಲ್ಲಿ ಪಸರಿಸುತ್ತಾ ಬಂದವರು ಲೋಹಿಯಾ ಶಿಷ್ಯರಾದ ಒರಿಸ್ಸಾದ ಕಿಶನ್ ಪಟ್ನಾಯಕ್. ಜಾತಿ ಪದ್ಧತಿ, ಕಾಂಗ್ರೆಸ್ ಪಕ್ಷದ ಜಡತೆ, ನೆಹರೂ ಆಡಳಿತ ಮತ್ತು ಇಂಗ್ಲಿಷ್ ಹೇರಿಕೆಗಳನ್ನು ವಿರೋಧಿಸುವುದು ದೇಶೀ ಭಾಷೆ, ಗಾಂಧಿವಾದಗಳ ಒಲವು. ಸಾಂಸ್ಕೃತಿಕ ಸೂಕ್ಷ್ಮತೆ, ಸಾಹಿತ್ಯ ಸಂಹಿತೆಗಳ ಅಭಿರುಚಿ ಹೊಂದಿರುವುದು ಲೋಹಿಯಾವಾದಿ ಚಿಂತನೆಯ ಪ್ರಮುಖ ತಾತ್ವಿಕ ರಾಜಕೀಯ ಸಾಮಾಜಿಕ ನಿಲುವುಗಳಾಗಿದ್ದವು. ಇವು ಕರ್ನಾಟಕದ 1950–60ರ ದಶಕದ ಅನೇಕ ವಿದ್ಯಮಾನಗಳ ಜತೆ ವಿಚಿತ್ರವಾಗಿ ಬೆಸೆದುಕೊಂಡವು. ಅದರಲ್ಲೂ ಆಗ ಆಧುನಿಕ ಶಿಕ್ಷಣ ಹಾಗೂ ಸಾಮಾಜಿಕ ಎಚ್ಚರವನ್ನು ಪಡೆದು ನಗರವಾಸಕ್ಕೆ ಬಂದಿದ್ದ ಭೂಮಾಲೀಕ ಶೂದ್ರ ಜಾತಿಗಳ ತರುಣರ ತುಡಿತಗಳ ಜತೆ ಲೋಹಿಯಾವಾದವು ಆಪ್ತವಾಗಿ ಬೆರೆಯಿತು. ತನ್ನನ್ನು ಪತ್ರಿಕೆ, ಸಾಹಿತ್ಯ, ಸಿನಿಮಾ, ರಾಜಕಾರಣ, ಮುಂತಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದ ಬಿಸಿರಕ್ತದ ಈ ತರುಣರಿಗೆ ಲೋಹಿಯಾರ ಸ್ವಾಭಿಮಾನ ಪ್ರಜ್ಞೆ ಹಠಮಾರಿತನ, ಪ್ರತಿರೋಧದ ಗುಣ, ಸಾಂಸ್ಕೃತಿಕ ವಿಶ್ಲೇಷಣೆಗಳು, ಮಾನವೀಯತೆ, ಸೂಕ್ಷ್ಮತೆ ಬೌದ್ಧಿಕತೆಗಳು ಇಷ್ಟವಾದವು. ತೇಜಸ್ವಿ ಮತ್ತು ನಂಜುಂಡಸ್ವಾಮಿ ಸೇರಿಕೊಂಡು ಲೋಹಿಯಾ ಚಿಂತನೆಗಳ ರೆಡ್ ಬುಕ್ ಸಿದ್ಧಪಡಿಸಿ ಪ್ರಕಟಿಸುವುದು ಈ ಪ್ರಭಾವದ ಒಂದು ಸಣ್ಣ ಸಾಕ್ಷಿಯಾಗಿದೆ. 1947ರಿಂದಲೂ ಸತತವಾಗಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವು ಭಾರತದ ಅಧಿಕಾರಸ್ಥ ರಾಜಕಾರಣದ ಸಂಕೇತವಾಗಿದ್ದು, ಅದನ್ನು ವಿರೋಧಿಸುತ್ತಿದ್ದ ಲೋಹಿಯಾ ಚಿಂತನೆ, ಕಾಂಗ್ರೆಸ್ ಅಧಿಕಾರದಲ್ಲಿದ್ದ ಕರ್ನಾಟಕದಲ್ಲೂ ತನ್ನ ಪ್ರಸ್ತುತತೆಯನ್ನು ಪಡೆದುಕೊಂಡಿತು. ಬ್ರಾಹ್ಮಣರ ಸಾಮಾಜಿಕ ಯಜಮಾನಿಕೆಯನ್ನು ವಿರೋಧಿಸುವ ಬಸವಣ್ಣ ಮತ್ತು ಕುವೆಂಪು ಹಿನ್ನೆಲೆಗಳು ಕೂಡ ಇದರ ಜತೆ ಸೇರಿಕೊಂಡವು. ಆದರೂ ಕಳೆದರ್ಧ ಶತಮಾನದ ಚರಿತ್ರೆಯನ್ನು ಕಂಡರೆ, ಲೋಹಿಯಾವಾದವು ಕರ್ನಾಟಕದ ಸಾಂಸ್ಕೃತಿಕ ರಾಜಕಾರಣದಲ್ಲಿ ಬೀರಿದ ಪ್ರಭಾವವು ಅನೇಕ ವೈರುಧ್ಯಗಳಿಂದ ಕೂಡಿರುವುದು ತಿಳಿಯುತ್ತದೆ. ಶೂದ್ರ ತರುಣ ತಲೆಮಾರಿಗೆ ಲೋಹಿಯಾ ಅವರ ಜಾತಿವಿರೋಧಿ

ಚಿಂತನೆಗಳು ಪ್ರಿಯವಾಗಿದ್ದು ಮಾತ್ರವಲ್ಲ, ಜಾತಿಪದ್ಧತಿಯನ್ನು ವಿರೋಧಿಸುತ್ತಿದ್ದ ಉಚ್ಚ ಜಾತಿಯಿಂದ ಬಂದ ಅನೇಕರು ಲೋಹಿಯಾ ಚಿಂತನೆಗೆ ತಮ್ಮನ್ನು ಒಪ್ಪಿಸಿಕೊಂಡರು. ಕೆ.ವಿ.ಸುಬ್ಬಣ್ಣನವರು ಲೋಹಿಯಾ ಅವರ ಬಹಳ ಪ್ರಸಿದ್ಧವಾದ ಕೃತಿ 'ರಾಜಕೀಯದ ಮಧ್ಯೆ ಬಿಡುವು' ಅನುವಾದಿಸಿದರು. ವಯಸ್ಸಿನಲ್ಲಿ ಕೊಂಚ ಹಿರಿಯಾಗಿದ್ದ ಅಡಿಗರು, ಜಾತಿಪದ್ಧತಿಯ ಸಮರ್ಥಕರಾಗಿದ್ದರೂ, ಜಾತಿ ಪದ್ಧತಿಯ ಕಟುಟೀಕಾಕಾರಾಗಿದ್ದ ಲೋಹಿಯಾರ 'ಇತಿಹಾಸ ಚಕ್ರ'ವನ್ನು ಅನುವಾದಿಸಿದರು. ಅಡಿಗರು ತಮ್ಮ ಮೊದಲ ಘಟ್ಟದಲ್ಲಿ ಸಮಾಜವಾದಿ ಆಶಯಗಳುಳ್ಳ ಕವಿತೆಗಳನ್ನು ಬರೆದವರು. ಅನಂತಮೂರ್ತಿ, ಲಂಕೇಶ್, ಚಂಪಾ ಸಾಹಿತ್ಯಕವಾಗಿ ರಾಜಕೀಯವಾಗಿ ಅವರ ಶಿಷ್ಯರಾಗಿದ್ದರು. ಎಲ್ಲರೂ ನವ್ಯದ ವ್ಯಕ್ತಿ ವಿಶಿಷ್ಟವಾದಿ ಚಿಂತನೆಯನ್ನು ಒಂದು ತಾತ್ವಿಕ ದರ್ಶನವಾಗಿ ಒಪ್ಪಿಕೊಂಡಿದ್ದವರು. ಆದರೂ ಹೀಗಾಗಿಯೇ ಮೊದಲ ಘಟ್ಟದಲ್ಲಿ ಅಡಿಗರ ಪ್ರಭಾವಕ್ಕೆ ಒಳಗಾದಂತೆ ಕಂಡ ಚಂಪಾ ಮತ್ತು ತೇಜಸ್ವಿ, ನಂತರ ತಾತ್ವಿಕವಾಗಿ ದೂರಸರಿದರು. ಬ್ರಾಹ್ಮಣರು ಸಾಂಸ್ಕೃತಿಕ ರಾಜಕಾರಣದಲ್ಲಿ ಪಡೆದುಕೊಂಡಿರುವ ಹಿಡಿತವನ್ನು ತಪ್ಪಿಸಬೇಕೆಂದು ಚಂಪಾ, ತೇಜಸ್ವಿ, ಲಂಕೇಶ್ ಮುಂತಾದವರು ಸೇರಿ, ಜಾತಿ ವಿನಾಶ ಚಳುವಳಿ ಮತ್ತು ಕಲಾವಿದರ ಬರಹಗಾರರ ಒಕ್ಕೂಟ ಮುಂತಾದ ಸಮಾವೇಶವನ್ನು ಸಂಘಟಿಸಿದಾಗ ಲೋಹಿಯಾವಾದಿಗಳಾಗಿದ್ದ ತಮ್ಮ ಬ್ರಾಹ್ಮಣ ಸಂಗಾತಿಗಳನ್ನು ಸಮಾವೇಶದಿಂದ ಹೊರಗಿಟ್ಟರು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಅಡಿಗರು ಕಾಂಗ್ರೆಸ್ ವಿರೋಧಿಸಿ ಜನಸಂಘದ ವತಿಯಿಂದ ಚುನಾವಣೆಗೆ ನಿಂತಾಗ ಲಂಕೇಶ್ ಅದನ್ನು ಬೆಂಬಲಿಸಿದರು ಮತ್ತು ಚುನಾವಣಾ ಪ್ರಚಾರಕ್ಕೂ ಹೋದರು. ಆದರೆ ಅನಂತಮೂರ್ತಿ ಅವರು ಇದಕ್ಕೆ ವಿರುದ್ಧವಾಗಿದ್ದರು. ಅಡಿಗರ ಜತೆಯಿದ್ದ ಲಂಕೇಶ್, ಕುವೆಂಪು ಅವರನ್ನು ಮೊದಮೊದಲು ಕಟುವಾಗಿ ನೋಡುತ್ತಿದ್ದವರು, ಕೊನೆಯ ದಿನಗಳಲ್ಲಿ ಅಡಿಗರಿಗಿಂತ ಕುವೆಂಪು ಸಾಂಸ್ಕೃತಿಕವಾಗಿ ಮುಖ್ಯವೆಂದು ಕಂಡುಕೊಂಡರು. ಸಾಹಿತ್ಯ ಮತ್ತು ಸಾಮಾಜಿಕ ಧೋರಣೆಗಳ ವಿಷಯದಲ್ಲಿ ಅಷ್ಟೊಂದು ಸಮಾನ ಮನಸ್ಕರಲ್ಲದ ಕುವೆಂಪು ಮತ್ತು ಅಡಿಗರ ಶಿಷ್ಯರು ಲೋಹಿಯಾವಾದದ ವಿಷಯದಲ್ಲಿ ಸಮಾನ ಮನಸ್ಕರಾಗಿದ್ದರು. ಹೆಚ್ಚು ಕಡಿಮೆ ಎಲ್ಲರಿಗೂ ಕಾಮೂ, ಕಾಫ್ಕಾ, ಎಲಿಯಟ್ ಮುಂತಾದ ಮಾಡ್ರನಿಸ್ಟ್ ಲೇಖಕರ ಪ್ರಭಾವವಿತ್ತು. ಹೀಗೆ ರಾಜಕೀಯದಲ್ಲಿ ಗಾಂಧೀವಾದ ಲೋಹಿಯಾವಾದ, ಜೆ.ಪಿ. ಚಿಂತನೆ, ಸಾಹಿತ್ಯಕವಾಗಿ ಯುರೋಪಿನ ನವ್ಯ ಲೇಕಕರು, ಕುವೆಂಪು, ಬಸವಣ್ಣ, ಸಾಮಾಜಿಕವಾಗಿ ಸಮಾಜವಾದ ಇವೆಲ್ಲವೂ ಈ ಕಾಲಘಟ್ಟದ ಚಿಂತಕರು, ಲೇಖಕರು ಮತ್ತು ಚಳುವಳಿಗಾರರಲ್ಲಿ ವಿಚಿತ್ರವಾಗಿ ಸಿಂಥಸೈಜ್ ಆಗಿದ್ದವು. ಇದರ ವೈರುಧ್ಯಗಳೇ ಬಹುಶಃ

ಲೋಹಿಯಾವಾದದ ಪ್ರಭಾವಕ್ಕೆ ಸಿಲುಕಿದವರ ಸೂಕ್ಷ್ಮತೆ ಸೃಜನಶೀಲತೆ ಮಾನವೀಯ ಸರಳತೆ ಅರಾಜಕತೆಗಳಿಗೂ ಕಾರಣವಾದವು. ಈ ವೈರುಧ್ಯಮಯ ಎನಿಸುವ ವಿವರಗಳು ಸೂಚಿಸುವ ಸಂಗತಿಯೆಂದರೆ ಲೋಹಿಯಾವಾದದ ಪ್ರಭಾವವು ಕರ್ನಾಟಕದ ಮೇಲೆ ಏಕರೂಪಿಯಾಗಿಲ್ಲ. ಬೇರೆ ಬೇರೆ ತಲೆಮಾರು, ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಗಳಿಗೆ ಸೇರಿದವರು ಬೇರೆ ಬೇರೆ ಕಾರಣಕ್ಕಾಗಿ ಲೋಹಿಯಾವಾದದ ಜತೆಗೆ ಲಗತ್ತಿಸಿಕೊಂಡ ಕಾರಣದಿಂದ ಸಂಭವಿಸಿದ ಪರಿಣಾಮಗಳೂ ಬೇರೆ ಬೇರೆಯಾಗಿವೆ. ಅದೊಂದು ಬಹುರೂಪಿಯಾದ ಜಗತ್ತು.

ಲೋಹಿಯಾ ಚಿಂತನೆಗಳು ಕರ್ನಾಟಕದಲ್ಲಿ ಬೆಳೆದ ಬಗೆಯನ್ನು ನಟರಾಜ್‌ಹುಳಿಯಾರ್ ರವರು ಈ ರೀತಿ ವಿವರಿಸುತ್ತಾರೆ. ಸಮಾಜವಾದಿ ಯುವಜನ ಸಭಾದ ನಾಯಕರಾಗಿದ್ದ ಎಂ.ಡಿ.ಎನ್ ನಾಯಕತ್ವದಲ್ಲಿ ಡಾ.ಲಕ್ಷ್ಮೀಪತಿಬಾಬು ಹಾಗೂ ಡಾ.ರಾ.ನ.ವೆಂಕಟಸ್ವಾಮಿ ಎಂಬ ಇಬ್ಬರು ಮೆಡಿಕಲ್ ವಿದ್ಯಾರ್ಥಿಗಳು, ಅಗ್ರಹಾರ ಕೃಷ್ಣಮೂರ್ತಿ, ರವಿವರ್ಮಕುಮಾರ್, ಶೂದ್ರಶ್ರೀನಿವಾಸ್ ಥರದ ಕೆಲವೇ ತರುಣರು ಇಂದಿರಾಗಾಂಧಿಯವರಿಗೆ ಕಪ್ಪು ಬಾವುಟ ತೋರಿಸುವುದು. ವಿಧಾನಸಭೆಯಲ್ಲಿ ಕರಪತ್ರ ಎಸೆಯುವುದು ಮುಂತಾದ ದಿಟ್ಟ ಸಾಂಕೇತಿಕ ಪ್ರತಿಕ್ರಿಯೆಗಳಲ್ಲಿ ಭಾಗಿಯಾಗಿರುತ್ತಿದ್ದುದರ ಹಿಂದೆ ಲೋಹಿಯಾ ಪ್ರಭಾವವಿತ್ತು. ಆ ಕಾಲದಲ್ಲಿ ಶಾಂತವೇರಿ ಗೋಪಾಲಗೌಡರು ವಿರೋಧಪಕ್ಷವೊಂದು ಹೇಗಿರಬೇಕೆಂಬ ಹೊಸ ಮಾದರಿಯನ್ನೇ ಕರ್ನಾಟಕಕ್ಕೆ ಕೊಟ್ಟರು. ಕನ್ನಡ ನಾಡಿನ ಭಾಷಾ ಚಳುವಳಿ, ದಲಿತ ಚಳುವಳಿ, ರೈತ ಚಳುವಳಿ ಮತ್ತು ಈ ಕಾಲದ ಜಾತ್ಯಾತೀತ ಚಳುವಳಿ ಹಾಗೂ ಜಾಗತೀಕರಣ ವಿರೋಧಿ ಚಿಂತನೆ, ಇವೆಲ್ಲದರಲ್ಲಿ ಭಾಗಿಯಾಗಬಲ್ಲ ಸಮಾಜವಾದಿ ಬುದ್ಧಿಜೀವಿಗಳು ಹಾಗೂ ರಾಜಕಾರಣಿಗಳು ಲೋಹಿಯಾ ಸಮಾಜವಾದದ ಮೂಲಕ ಕರ್ನಾಟಕದಲ್ಲಿ ರೂಪುಗೊಂಡರು. ಪ್ರಜಾವಾಣಿಯ ಹಲವಾರು ವರದಿಗಾರರು ಹಾಗೂ ಲಂಕೇಶರ ಪತ್ರಿಕಾ ಬರವಣಿಗೆ, 'ಜನಪ್ರಗತಿ ಪತ್ರಿಕೆ', 'ನೀನಾಸಂ'ನ ರಂಗ ಚಟುವಟಿಕೆ ಹಾಗೂ ಸಂಸ್ಕೃತಿ ಚಿಂತನೆ, 'ಸಂಕ್ರಮಣ', 'ಶೂದ್ರ' ಥರದ ಕಿರು ಪತ್ರಿಕೆಗಳು ಹಾಗೂ ಕಡಿದಾಳು ಶಾಮಣ್ಣನವರ ಗ್ರಾಮಕೇಂದ್ರಿತ ಚಿಂತನೆಯ ಮೂಲಕ ಬೆಳೆದ ಲೋಹಿಯಾವಾದ ಕರ್ನಾಟಕದ ರೈತ ಚಳುವಳಿಯ ಎರಡು ಮುಖ್ಯ ಘಟ್ಟಗಳಲ್ಲಿ ಜನಸಮುದಾಯದವರೆಗೂ ಹಬ್ಬಿತು. ಶಾಂತವೇರಿಗೋಪಾಲಗೌಡ, ಗಣಪತಿಯಪ್ಪ, ಎಂ.ಡಿ.ಎನ್, ಎನ್.ಡಿ.ಸುಂದರೇಶ್ ಥರದ ನಾಯಕರು ಲೋಹಿಯಾವಾದವನ್ನು ರೈತ ಚಳುವಳಿಯ ಜೊತೆಗೆ ಬೆಸೆದರು. ದಲಿತ ಚಳುವಳಿ ತನ್ನ ಆರಂಭ ಘಟ್ಟದಲ್ಲಿ ದೇವನೂರ

ಮಹಾದೇವರಂಥವರ ಮೂಲಕ ಲೋಹಿಯಾ ಸ್ಪರ್ಶವನ್ನು ಪಡೆದದ್ದರಿಂದಲೂ ಅದು ಭಾರತದ ಇತರೆಡೆಗಳಲ್ಲಿನ ದಲಿತ ಚಳುವಳಿಗಿಂತ ಭಿನ್ನವಾಗಲು ಕಾರಣವಾಯಿತು. ಎಂಬತ್ತರ ದಶಕದಲ್ಲಿ ಪದವಿ ಪಠ್ಯಪುಸ್ತಕದಲ್ಲಿದ್ದ ಲೋಹಿಯಾ ಅವರ 'ಸೌಂದರ್ಯ ಮತ್ತು ಮೈಬಣ್ಣ' ಲೇಖನ ಒಂದು ತಲೆಮಾರಿನ ಚಿಂತನೆಯ ಧಾಟಿಯನ್ನೇ ಬದಲಿಸಿದ್ದು ಈಗ ಇತಿಹಾಸ. ಕಿ.ರಂ.ನಾಗರಾಜರಂಥ ಅಧ್ಯಾಪಕರು ಕುಮಾರವ್ಯಾಸನನ್ನು ಗ್ರಹಿಸಲು ಲೋಹಿಯಾರ ಸಾಂಸ್ಕೃತಿಕ ಗ್ರಹಿಕೆಯನ್ನು ಬಳಸುವ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯದ ಹೊಸ ಓದನ್ನೇ ತೆರೆದರು. ಡಿ.ಆರ್.ನಾಗರಾಜರಲ್ಲಿ ಕ್ರಮೇಣ ಮಾರ್ಕ್ಸ್‌ವಾದಿ ಯಾಂತ್ರಿಕ ಗ್ರಹಿಕೆ ಹಿನ್ನೆಲೆಗೆ ಸರಿದು ಜಾತಿ ಪದ್ಧತಿಯ ಕಟುವಾಸ್ತವದ ಗಾಢ ಅರಿವು ಮೂಡಿದ್ದು ಕೂಡ ಲೋಹಿಯಾ ಚಿಂತನೆಯ ಹಿನ್ನೆಲೆಯಲ್ಲೆ. ಬಂಗಾರಪ್ಪನವರು ಜಾರಿಗೆ ತಂದ ಗ್ರಾಮೀಣ ಕೃಪಾಂಕ ಯೋಜನೆಯಲ್ಲಿ ಲೋಹಿಯಾರ ಸೆಲೆಯಿದೆ. ಎಲ್ಲ ಸಾಮಾಜಿಕ ಚಳುವಳಿಗಳೂ ತಮ್ಮ ಕಾವು ಕಳೆದುಕೊಂಡಂತಿದ್ದ ಇಪ್ಪತ್ತನೆಯ ಶತಮಾನದ ಕೊನೆಗೆ ಕರ್ನಾಟಕದಲ್ಲಿ ಹುಟ್ಟಿಕೊಂಡ ಅಂತರ್ಜಾತೀಯ ವಿವಾಹಿತರ ವೇದಿಕೆ 'ಮಾನವ ಮಂಟಪ' ಲೋಹಿಯಾವಾದದ ಮುಖ್ಯ ಆಶಯಗಳಲ್ಲಿ ಒಂದನ್ನು ಕೇಂದ್ರಕ್ಕೆ ತರಲೆತ್ನಿಸಿತು. ಅರವತ್ತರ ದಶಕದಲ್ಲಿ ಅಂಬೇಡ್ಕರ್ ಹಾಗೂ ಲೋಹಿಯಾ ಇಬ್ಬರೂ ರೂಪಿಸಲು ಬಯಸಿದ್ದ ಸಮಾನ ವೇದಿಕೆಯ ಆಶಯ ಕೆ.ಎಸ್.ಪುಟ್ಟಣ್ಣಯ್ಯ ಹಾಗೂ ದೇವನೂರು ಮಹಾದೇವರ ನಾಯಕತ್ವದ 'ಸರ್ವೋದಯ ಕರ್ನಾಟಕ' ಪಕ್ಷದ ಆಶಯಗಳಲ್ಲಿ ಇವತ್ತಿಗೂ ಜೀವಂತವಾಗಿದೆ. ಹಾಗೆಯೇ ಮಂಗ್ಳೂರುವಿಜಯ, ಕಾಳೇಗೌಡನಾಗವಾರ, ಡಿ.ಎಸ್.ನಾಗಭೂಷಣ ತರದವರ ವಿಶ್ಲೇಶಣೆಗಳಲ್ಲಿ, ಲಕ್ಷ್ಮೀನಾರಾಯಣನಾಗವಾರ, ಮಾವಳ್ಳಿ ಶಂಕರ್ ಅವರಂಥ ಹೊಸ ಪೀಳಿಗೆಯ ನಾಯಕರು ಮುನ್ನಡೆಸುತ್ತಿರುವ ದಲಿತ ಸಂಘಟನೆಗಳಲ್ಲಿ ಲೋಹಿಯಾವಾದ ಹೊಸ ರೂಪ ಪಡೆಯುತ್ತಲೇ ಇರುತ್ತದೆ.

ರಹಮತ್ ತರೀಕೆರೆಯವರು ಲೋಹಿಯಾ ಪ್ರಭಾವವು ಕರ್ನಾಟಕದ ವೈವಿಧ್ಯವಲಯಗಳಲ್ಲಿ ರಾಜಕಾರಣ, ವೈದ್ಯಕೀಯ, ನ್ಯಾಯಾಂಗ, ಸಿನಿಮಾ, ಸಾಹಿತ್ಯ, ಸಂಸ್ಕೃತಿ ಚಿಂತನೆ, ಚಳುವಳಿ, ಕೃಷಿ, ರೈತ ಸಂಘಟನೆ, ಪುಸ್ತಕ ಪ್ರಕಾಶನ, ಕಾರ್ಮಿಕ ಚಳುವಳಿ, ಹೀಗೆ ಅನೇಕ ಕ್ಷೇತ್ರಗಳು ಪ್ರಭಾವಿತಗೊಂಡಿರುವುದರಿಂದ ಅದೊಂದು ಬಹುರೂಪಿಯಾದ ಜಗತ್ತು ಎಂದು ಕರೆಯುತ್ತಾರೆ.

ನಟರಾಜ್‌ಹುಳಿಯಾರ್‌ರವರು ಕಾಗೋಡು ಸತ್ಯಾಗ್ರಹದಿಂದ ಆರಂಭಗೊಂಡ ಲೋಹಿಯಾ ಸಂಪರ್ಕ ಇಂದಿಗೂ ಅನೇಕ ಹೋರಾಟಗಳಲ್ಲಿ, ಚಿಂತನೆಗಳಲ್ಲಿ,

ತರುಣಪೀಳಿಗೆಯವರಲ್ಲಿ ಲೋಹಿಯಾವಾದ ಮರು ಹುಟ್ಟು ಪಡೆಯುತ್ತಾ ಜೀವಂತವಾಗಿ ಮುನ್ನಡೆಯುತ್ತಿದೆ ಎನ್ನುತ್ತಾರೆ.

ಕಾಗೋಡು ಸತ್ಯಾಗ್ರಹದ ರೂವಾರಿ ಗಣಪತಿಯಪ್ಪನವರು 'ಲೋಹಿಯಾರ ಭಾಗವಹಿಸುವಿಕೆ ಇಲ್ಲದಿದ್ದರೆ ಕಾಗೋಡು ಸತ್ಯಾಗ್ರಹ ಯಾವ ರೂಪ ಪಡೆಯುತ್ತಿತ್ತೋ. ಏಕೆಂದರೆ ಗೇಣಿರೈತರನ್ನು ನಕಲಿ ಎನ್‌ಕೌಂಟರ್‌ನಲ್ಲಿ ಪೋಲಿಸರು ಕೊಲ್ಲುತ್ತಿದ್ದರು. ಈ ಕಾರಣಕ್ಕೇನೆ ಕಾಗೋಡು ಚಳುವಳಿಯ ಯಶಸ್ಸಿನ ಸಿಂಹಪಾಲು ಲೋಹಿಯಾ ಅವರಿಗೆ ಸಲ್ಲಬೇಕು' ಎನ್ನುತ್ತಾರೆ.

ಟಿಪ್ಪಣಿಗಳು

1. ನಟರಾಜ್ ಹುಳಿಯಾರ್ (ಸಂ) ರಾಮ ಮನೋಹರ ಲೋಹಿಯಾ ಚಿಂತನೆ, ಸಂ: 7 ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008
2. ಡಾ.ದಸ್ತಗೀರ್‌ಸಾಬ್‌ದಿನ್ನಿ: (ಸಂ) ಲೋಹಿಯಾ ಸಾಂಸ್ಕೃತಿಕ ಅನುಸಂಧಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪ್ರಥಮ ಮುದ್ರಣ, 2008.
3. ಎಚ್.ಗಣಪತಿಯಪ್ಪ : 'ನಾ ಕಂಡ ಲೋಹಿಯಾ' (ಲೇಖನ) ಸಾಪ್ತಹಿಕ ಪುರವಣಿ. ಪ್ರಜಾವಣಿ, 21-03-2010.
4. ನಟರಾಜ್ ಹುಳಿಯಾರ್ : 'ಬೇರಿಗಿಳಿದ ಸಮಾಜವಾದ' (ಲೇಖನ) ಸಾಪ್ತಾಹಿಕ ಪುರವಣಿ, ಪ್ರಜಾವಣಿ, 21-03-2010

ಅಧ್ಯಾಯ – 4

ಅನಂತಮೂರ್ತಿ ಯವರ 'ಅವಸ್ಥೆ' ಕಾದಂಬರಿಯಲ್ಲಿ ಕರ್ನಾಟಕದ ಸಮಾಜವಾದಿ ರಾಜಕಾರಣ ಮತ್ತು ಲೋಹಿಯಾ ಪ್ರಭಾವದ ಅಧ್ಯಯನ

'ಅವಸ್ಥೆ' ಕಾದಂಬರಿಯು ರಾಜಕೀಯ ಚಿತ್ರಣವನ್ನು ಕಟ್ಟಿಕೊಡುವ ಇಲ್ಲಿಯವರೆಗಿನ ಕಾದಂಬರಿಗಳಲ್ಲಿ ವಿಶಿಷ್ಟ ಕೃತಿಯಾಗಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆಡಳಿತ ವ್ಯವಸ್ಥೆ ಭ್ರಷ್ಟತೆಯ ಕಡೆ ಚಲಿಸಿದರೆ ಅದಕ್ಕೆ ವಿರುದ್ಧವೆಂಬಂತೆ ಈ ಕಾದಂಬರಿಯಲ್ಲಿನ ಪಾತ್ರಗಳು ಸಮಾಜಕ್ಕೆ ಒಡ್ಡಿಕೊಳ್ಳುತ್ತಾ ಬದುಕುವ ಮತ್ತು ವಿಮುಖವಾಗಿ ಬದುಕುವ ವಿರೋದಾಭಾಸವನ್ನು ಕಾಣುತ್ತೇವೆ. ಗಾಂಧೀಜಿಯವರ ಪ್ರಭಾವದಲ್ಲಿ ಲೋಹಿಯಾ ಬೆಳೆಯುತ್ತಿದ್ದಂತೆ ಮಹೇಶ್ವರಯ್ಯನ ಜೊತೆ ಕೃಷ್ಣಪ್ಪಗೌಡ ಬೆಳೆಯುತ್ತಾನೆ. ಮಹೇಶ್ವರಯ್ಯ ದುರ್ಗಿಯ ಗುಪ್ತ ಭಕ್ತರಾಗಿ ಪೂಜೆ ಮಾಡುವುದನ್ನು ಕೃಷ್ಣಪ್ಪಗೌಡ ನೋಡಿದ್ದ. ನಿರೀಶ್ವರವಾದಿ ಲೋಹಿಯಾ ಗಾಂಧೀಯವರ ಆಧ್ಯಾತ್ಮ – ಅನುಭಾವದ ಗೋಜಿಗೆ ಹೋಗದೆ ಅವರನ್ನು ಒಪ್ಪಿಕೊಂಡಂತೆ ಕೃಷ್ಣಪ್ಪಗೌಡ ಮಹೇಶ್ವರಯ್ಯನನ್ನು ಒಪ್ಪಿಕೊಂಡಿದ್ದ. ಕಡುಕೋಪಿಯಾದ ಕೃಷ್ಣಪ್ಪಗೌಡ ತನ್ನ ರಾಜಕೀಯ ಹಾಗು ವೈಯಕ್ತಿಕ ಬದುಕಿನ ಕ್ಷಣಗಳನ್ನು ಸಿಂಹಾವಲೋಕನದಿಂದ ಅವಲೋಕಿಸುವುದರ ಮೂಲಕ ಕಾದಂಬರಿ ಬೆಳೆಯುತ್ತದೆ.

ಕಾದಂಬರಿಯ ಆರಂಭದಲ್ಲಿಯೇ 'ಅವಸ್ಥೆ' ಪದಕ್ಕಿರುವ ನಾನಾರ್ಥಗಳನ್ನು ಕಾದಂಬರಿಕಾರರು ಸೂಚಿಸಿದ್ದಾರೆ. 'ಅವಸ್ಥೆ' ಎಂದರೆ ಮನುಷ್ಯನ ಇರುವಿಕೆ ಅಥವಾ ಆಗುವಿಕೆಯೂ, ಸಮಾಜದ ಇರುವಿಕೆಯೂ ಆಗಿದೆ. 'ಇನ್ನೂ ಐವತ್ತು ತುಂಬುವುದಕ್ಕೆ ಮುಂಚೆಯೇ ಅವನು ಸಾಯುತ್ತಾ ಮಲಗಿದ್ದಾನೆ.'[1] ಕಾದಂಬರಿಯ ಆರಂಭದ ಈ ಸಾಲು ಸ್ವಾತಂತ್ರ್ಯೋತ್ತರ ರಾಜಕಾರಣದ ರೂಪಕದಂತಿದೆ. ಹಿಂದುಳಿದ ಜಾತಿಯಿಂದ ಬಂದ ಉತ್ಸಾಹಿ ನಾಯಕನೊಬ್ಬ ಪ್ರಾಮಾಣಿಕತೆಯಿಂದ ರಾಜಕೀಯ ವ್ಯವಸ್ಥೆಯನ್ನು ಚಳುವಳಿಗಳ ಮೂಲಕ ಸುಧಾರಿಸ ಹೊರಟು ವಿಫಲವಾಗುವುದು ಈ ಕಾದಂಬರಿ ಮಂಡಿಸುವ ದುರಂತವಾಗಿದೆ. ಕೃಷ್ಣಪ್ಪಗೌಡನಿಗೆ ಬಡಿದ ಪಾರ್ಶ್ವವಾಯು ಪ್ರಾಮಾಣಿಕ ರಾಜಕೀಯ ಕ್ಷೇತ್ರಕ್ಕೆ ಬಡಿದಂತಿದೆ. ಕೃಷ್ಣಪ್ಪಗೌಡ ಚಿಕ್ಕಂದಿನ ನೆನಪುಗಳನ್ನು ಮೆಲಕುಹಾಕುತ್ತಾ ತನ್ನ ಜೀವಮಾನವನ್ನು ಸವೆಸುತ್ತಿರುತ್ತಾನೆ. ತಾನು ಚಿಕ್ಕಂದಿನಲ್ಲಿ ದನಗಳನ್ನು ಮೇಯಿಸುತ್ತಿದ್ದಾಗ ಎಲ್ಲಿಂದಲೋ ಬಂದ ಮಹೇಶ್ವರಯ್ಯ ತನ್ನ ಬದುಕನ್ನು ರೂಪಿಸಿದರು ಅಂದುಕೊಳ್ಳುತ್ತಾನೆ.

ತ್ರಿಕಾಲಜ್ಞಾನಿಯಂತಿದ್ದ ಮಹೇಶ್ವರಯ್ಯ ಒಮ್ಮೊಮ್ಮೆ 'ಭೋ' ಅನ್ನುವನು. ಆಗ ಏನಾದರೂ ಅನಿಷ್ಟ ಸಂಭವಿಸುತ್ತದೆ ಎಂಬ ನಂಬಿಕೆ ಊರಿನವರದಾಗಿತ್ತು. ವಾಸ್ತವವಾಗಿ ಮಹೇಶ್ವರಯ್ಯನಿಗೆ ಭವಿಷ್ಯದಲ್ಲಿ ಒಳ್ಳೆಯದೇ ಕಾಣಿಸುತ್ತಿರಲಿಲ್ಲ. ಆದರೆ ಕೃಷ್ಣಪ್ಪನ ವಿಚಾರದಲ್ಲಿ ಹೀಗಾಗಲಿಲ್ಲ. 'ಮುಂದಿನ ಅನಿಷ್ಟ ಕಂಡು 'ಭೋ' ಅನ್ನುತ್ತಿದ್ದ ಮಹೇಶ್ವರಯ್ಯನ ದುರಂತವೆಂದರೆ ಅವರಿಗೆ ಭವಿಷ್ಯದಲ್ಲಿ ಒಳ್ಳೆಯದು ಕಾಣಿಸುತ್ತಿದುದೇ ತೀರ ಅಪರೂಪ. ಕೃಷ್ಣಪ್ಪನ ಬಗ್ಗೆ ಮಾತ್ರ ಅವರು ಒಮ್ಮೆ ಒಳ್ಳೆಯದನ್ನು ಕಂಡದ್ದುಂಟು.'[2] ಸುತ್ತಲಿನ ಸಮಾಜದಲ್ಲಿನ ಕೊಳಕನ್ನು ಹೋಗಲಾಡಿಸಲು ನವತರುಣನೊಬ್ಬನನ್ನು ಮಹೇಶ್ವರಯ್ಯ ರೂಪಿಸುತ್ತಾನೆ. ಕೃಷ್ಣಪ್ಪಗೌಡ ಮುಂದೊಂದು ದಿನ ರಾಜಕೀಯ ನಾಯಕನಾಗಿ ಈ ವ್ಯವಸ್ಥೆಯನ್ನು ಬದಲಾಯಿಸುವವ ಎಂಬ ಕನಸು ಅವರದ್ದಾಗಿತ್ತು. ಕ್ಷುದ್ರ ಸಮಾಜದಲ್ಲಿ ಬದುಕುವ ಕಲೆಯನ್ನು ಮಹೇಶ್ವರಯ್ಯ ಸಿದ್ಧಿಸಿಕೊಂಡವರು. ಕೃಷ್ಣಪ್ಪಗೌಡವನ್ನು ಓದಿಸಿ ಅವನಲ್ಲಿನ ಒಳಹುಲಿಯನ್ನು ಗುರ್ತಿಸಿ 'ನೀನು ಎಲ್ಲ ಕಷ್ಟ ಎಲ್ಲ ಬವಣೆಪಟ್ಟು ನಿನ್ನ ಊರಲ್ಲೇ ಬೆಳೆಯಬೇಕು,'[3] ಎನ್ನುತ್ತಾರೆ.

ಬದಲಾವಣೆಯ ಮೂಲಭೂತವಾದ ಕ್ರಾಂತಿಯ ಕಲ್ಪನೆಯು ಹುಸಿಯಾಗತೊಡಗಿದೆ ಅಂದುಕೊಳ್ಳುತ್ತಾ ತೀವ್ರ ಆತ್ಮಶೋಧನೆಗೆ ಒಡ್ಡಿಕೊಳ್ಳುವ ಕೃಷ್ಣಪ್ಪಗೌಡನ ದುರಂತ ಸಮಕಾಲೀನ ದುರಂತವೂ ಹೌದು. 'ಕೊಳೆಯುವುದೇ ಜಾಯಮಾನವಾದ ನಿತ್ಯ ಜೀವನದ ಕ್ಷೇತ್ರದಲ್ಲಿ ಪೂರ್ಣ ಶುದ್ಧಿ ಹುಡುಕೋದೇ ಅಸಂಬದ್ಧವಿರಬಹುದೆ ಎಂಬ ಪ್ರಶ್ನೆ ಅವನನ್ನು ಭಾದಿಸಿದ್ದಿದೆ. ಬಜೆಟ್ಟು, ಕಾಮಗಾರಿ, ಲಂಚ, ಭಡ್ತಿ, ವರ್ಗ, ನೌಕರಿ ಇತ್ಯಾದಿಗಳಲ್ಲಿ ಮುಳುಗಿರುವ ರಾಜಕೀಯದಿಂದ ಮೇಲೇಳಲು ಕೃಷ್ಣಪ್ಪ ಸದಾ ಪ್ರಯತ್ನಿಸುತ್ತಾನೆ. ಕ್ರಾಂತಿಯ ಕನಸು ಕಾಣುತ್ತಾನೆ. ಆದರೆ ತನ್ನ ಕ್ರಾಂತಿಕಾರಕತೆ ಕ್ರಮೇಣ ತೇಪೆ ಕೆಲಸವಾಗಿಬಿಟ್ಟಿದೆ.'[4]

ಕೃಷ್ಣಪ್ಪಗೌಡನ ಸ್ವ–ವಿಮರ್ಶೆ, ರಾಜಕೀಯದಲ್ಲಿನ ಅಶುದ್ಧಿಯನ್ನು ಕಂಡು ವ್ಯಕ್ತಪಡಿಸುವ ಕೋಪ ಅದೇ ತನ್ನ ದೌರ್ಬಲ್ಯವಾಗಿರುವುದು ಎಂಬ ಭಾವನೆ ಇವೆಲ್ಲಾ ಅವನ ವೈಚಾರಿಕ ದ್ವಂದ್ವಗಳಾಗಿವೆ. ಖಾಸಗಿ ಜೀವನದಲ್ಲೂ ಸಾರ್ವಜನಿಕ ಜೀವನದಲ್ಲೂ ಭಿನ್ನತೆ ಕಾಣದ ಕೃಷ್ಣಪ್ಪಗೌಡನಿಗೆ ಜೀವನದ ಪ್ರತಿಯೊಂದು ಕ್ಷಣ ಮುಖ್ಯವಾಗಿದೆ ತಾನು ಬರೆದುಕೊಳ್ಳುವ ದಿನಚರಿ ಪುಸ್ತಕ ಅವನಿಗೆ ಸಮಾಧಾನ ನೀಡುತ್ತಿತ್ತು. ಆದರೆ ಪ್ರಸನ್ನಗೊಳಿಸುವ ದಿನಚರಿ ಪುಸ್ತಕವನ್ನು ಸಾವಿತ್ರಮ್ಮ ಒಲೆಗಿಕ್ಕಿದಾಗ ಕೃಷ್ಣಪ್ಪಗೌಡ

ಸಹನೆಯನ್ನು ಕಳೆದುಕೊಂಡು ಕ್ಷುದ್ರತೆಯನ್ನು ಗೆಲ್ಲಲು ಮಹೇಶ್ವರಯ್ಯನಂತೆ ಪೂಜೆಮಾಡುವುದು ಕೃಷ್ಣಪ್ಪನ ಆಂತರಿಕ ಮುಖವನ್ನು ಪ್ರತಿಬಿಂಬಿಸುತ್ತದೆ.

ಜಾತಿ ವಿನಾಶ: ಲೋಹಿಯರ ಜಾತಿವಿನಾಶವನ್ನು ತಾತ್ವಿಕ ದರ್ಶನವಾಗಿ ಒಪ್ಪಿಕೊಂಡ ನವ್ಯ ಲೇಖಕರು ತಮ್ಮ ಕೃತಿಗಳಲ್ಲಿ ಜಾತಿವಿನಾಶವನ್ನು ಒತ್ತಿ ಹೇಳಿದ್ದಾರೆ. 'ಸಂಸ್ಕಾರ', 'ಭಾರತೀಪುರ', ಕಾದಂಬರಿಗಳಲ್ಲಿ ಕಾಣುವ ಜಾತಿವಿನಾಶದ ಆಶಯ 'ಅವಸ್ಥೆ'ಯಲ್ಲೂ ಮುಂದುವರಿದಿದೆ. ಹಿಂದುಳಿದ ಜಾತಿಯಿಂದ ಬಂದ ಕೃಷ್ಣಪ್ಪಗೌಡ ರಾಜಕೀಯದಲ್ಲಿ ಗೌರವ ಸಂಪಾದಿಸುವುದು, ಹಳ್ಳಿಯಲ್ಲಿನ ಮೌಢ್ಯವನ್ನು ತೊಳೆದು ರೈತರನ್ನು ಸಂಘಟಿಸಿ ಜಾತಿ ನಿರ್ಮೂಲನೆಯ ಕ್ರಿಯೆಯಲ್ಲಿ ಮುಂದಾಗುವುದನ್ನು ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಲೋಹಿಯಾರು ಕರೆ ನೀಡಿದ 'ಬ್ರಾಹ್ಮಣರು ಶೂದ್ರರನ್ನು, ಶೂದ್ರರು ಬ್ರಾಹ್ಮಣರನ್ನು ಮೇಲೆತ್ತಬೇಕಾಗಿದೆ' ಸಂದೇಶವನ್ನು ಮಹೇಶ್ವರಯ್ಯ, ಕೃಷ್ಣಪ್ಪಗೌಡನ ಸಂಬಂಧದಲ್ಲಿ ಕಾಣಬಹುದು. ಪಾರಂಪರಿಕ ಸಮಾಜ ಜಾತಿಯ ಹೊರಗಿನ ಚಲನೆಗೆ ಹೇಗೆ ತಡೆಯೊಡ್ಡುತ್ತದೆ ಹಾಗೂ ಯಥಾ ಸ್ಥಿತಿಯನ್ನು ಹೇಗೆ ಕಾಯ್ದುಕೊಳ್ಳುತ್ತದೆ ಎಂಬುದನ್ನು ಅವಸ್ಥೆ ಕಾದಂಬರಿ ವಿಶ್ಲೇಷಿಸುತ್ತದೆ. ಸಾಂಪ್ರದಾಯಿಕ ಸಮಾಜದ ಪ್ರತಿನಿಧಿಯಾದ ಸಾವಿತ್ರಮ್ಮ ಕೃಷ್ಣಪ್ಪಗೌಡನು ಸೌಂದರ್ಯ ಲಹರಿಯನ್ನು ಓದುವುದು ಕಂಡು ಶೂದ್ರರು ಮಂತ್ರ ಹೇಳುವುದೇ'[5]

ಎಂದು ರೇಗುವುದು ಬ್ರಾಹ್ಮಣರ ಸ್ವತ್ತಾಗಿದ್ದ ವೇದ ಪಾರಾಯಣ, ಪಾರುಪತ್ಯೆಯನ್ನು ಹಾಳುಮಾಡಿದರೆ ಶೂದ್ರರಿಗೆ ನಾಶ ಕಟ್ಟಿಟ್ಟ ಬುತ್ತಿ ಎಂಬ ಭಾವನೆ ಜಾತಿಯನ್ನು ಬೇರೂರಿಸುತ್ತಾ ಪೋಷಿಸುತ್ತಾ ಬಂದ ಸಮಾಜದ ಸೂಚಕವಾಗಿದೆ. ದೇವರ ಹೆಸರಿನಲ್ಲಿ ನಡೆಸಿಕೊಂಡು ಬರುತ್ತಿರುವ ಜಾತೀಯತೆಯನ್ನು ತೊಡೆದು ಹಾಕಲು ಕೃಷ್ಣಪ್ಪಗೌಡ 'ಯಾಕ್ರೋ ಈ ಕಲ್ಲುಟಕನ ಪೂಜೆ ಮಾಡ್ಕೊಂಡು ಮಂಕಾಗಿ ಕೂತಿದ್ದೀರಿ. ಅದೊಂದು ಕಲ್ಲು ಅಲ್ವ? ಎತ್ತಿ ಬಿಸಾಕಿ ನಿಮ್ಮನ್ನು ಕಾಡೋ ದೆವ್ವ ಏಜೆಂಟ್ ನರಸಿಂಹಭಟ್ಟ ನೀವು ಗೆಯ್ದಿದ್ದನೆಲ್ಲ ಬಂದು ತಗೊಂಡು ಹೋಗ್ತಾನೆ.'[6] ಎಂದು ವಿವರಿಸಿ ಹೇಳುವುದು, ದೇವರುಧರ್ಮದ ನೆರಳಲ್ಲಿ ಶೋಷಣೆ ನಿರಂತರವಾಗಿ ಮುಂದುವರಿಯುವುದನ್ನು ಸೂಚಿಸುತ್ತದೆ. ನರಸಿಂಹ ದೇವರ ಹೆಸರಿನಲ್ಲಿ ಮಠದ ಏಜೆಂಟ್ ನರಸಿಂಹ ಭಟ್ಟ ತನ್ನ ಅಣ್ಣ ಜೋಯಿಸನನ್ನು ಗೇಣಿಯ ಸಂದಾಯದ ವಸೂಲಿ ನೆಪದಲ್ಲಿ ತೋಟಬಿಡಿಸಿದಂತೆ ಅನೇಕ ರೈತರನ್ನು ಶೋಷಿಸುತ್ತಿರುತ್ತಾನೆ. ನರಸಿಂಹಭಟ್ಟನ ರಕ್ಷಣೆಗೆ ದೇವರು, ಜಾತಿ ಇರುವುದು ಕೃಷ್ಣಪ್ಪಗೌಡ, ಜೋಯಿಸರ ಚರ್ಚೆಯಿಂದ ವೇದ್ಯವಾಗುತ್ತದೆ: 'ಹೇಗೆಂದ್ರೆ

ಜೋಯಿಸರೆ ಈಗ ನೋಡಿ ಕಲ್ಕುಟಕನ್ನ ನಂಬಿಕೊಂಡು ಈ ನಮ್ಮ ಮೂರ್ಖ ಶೂದ್ರ ಜನ ಆ ನರಸಿಂಹ ಭಟ್ಟನಿಗೆ ಹೆದರ್ತಾರೆ ತಮ್ಮ ಐಹಿಕ ಪಾಡಿನಲ್ಲಿ ಏನೂ ಮಾರ್ಪಾಟಾಗಲಿಕ್ಕೆ ಸಾಧ್ಯವಿಲ್ಲ ಅಂದುಕೋತಾರೆ. ಆ ಕುರಿ ಕೋಳೀ ತಿನ್ನೋ ಕಲ್ಕುಟಕನೇ ತಮ್ಮನ್ನ ಉದ್ದಾರ ಮಾಡಬೇಕೂಂತ ತಿಳೀತಾರೆ.'

'ನಿಮ್ಮ ಜನಾನೂ ನಿರಾಕಾರ ನಿರ್ಗುಣ ಬ್ರಹ್ಮನನ್ನು ಅರಿಯೋ ಮಟ್ಟಕ್ಕೆ ಬರಬೇಕೂಂತ ಅನ್ನೋದನ್ನ ನಾನೂ ಒಪ್ತೀನೋ ಕಿಟ್ಟಣ್ಣ. ಧರ್ಮಕರ್ಮಗಳ ಮುಖೇನ ಅವರು ಮೇಲಕ್ಕೆ ಬರಬೇಕೇ ವಿನಹ'–

"ಅದಲ್ಲ ನಾನು ಹೇಳ್ತಿರೋದು ಜೋಯಿಸ್ರೆ – ಕೇಳಿ ನರಸಿಂಹಭಟ್ರನ್ನ ಎದುರಿಸಿ ಅವರು ತನ್ನ ಐಹಿಕ ಬದುಕನ್ನು ಊರ್ಜಿತಗೊಳಿಸಿಕೊಂಡರೆ ಕ್ರಮೇಣ ಈ ಕುರಿಕೋಳಿ ತಿನ್ನೋ ದೆವ್ವಗಳ ಪೂಜೇಂದ ಮುಕ್ತರಾಗ್ತಾರೆ. ಆದ್ರೆ ನರಸಿಂಹಭಟ್ಟನನ್ನ ದಿಕ್ಕರಿಸಿ ನಡಕೊಳ್ಳೋಕೇ ಈ ಕಲ್ಕುಟಕನಲ್ಲಿರೋ ನಂಬಿಕೆ ಅಡ್ಡಬರುತ್ತಲ್ಲ ಹೇಳಿ. ಆದ್ರಿಂದ ನಂಗೆ ಎದ್ದಿರೋ ಪ್ರಶ್ನೆ ಕಲ್ಕುಟಕನನ್ನು ಅವರು ಕಿತ್ತೆಸೆದು, ಅದ್ರಿಂದ ಬಂದ ಧೈರ್ಯದಿಂದ ನರಸಿಂಹ ಭಟ್ಟನ ಡೊಳ್ಳು ಹೊಟ್ಟೇನ ಕರಗಿಸಬೇಕೋ ಅಥವಾ ಎರಡನೇದನ್ನು ಮೊದಲು ಮಾಡಿ ಕಲ್ಕುಟಕನ್ನ ಪೂಜಿಸೋ ಸ್ಥಿತೀಂದ ಮೇಲೇಳಬೇಕೋ...'[7]

ಈ ಚರ್ಚೆಯಲ್ಲಿ ಯಥಾಸ್ಥಿತಿವಾದಿಯಾದ ಜೋಯಿಸರಿಗೆ ಬದಲಾವಣೆ ಏಕಕಾಲಕ್ಕೆ ಇಷ್ಟವಾಗದೆ ಧರ್ಮಕರ್ಮಗಳ ಅಡಿಯಲ್ಲಿ ಕ್ರಮೇಣ ಸಾಗಬೇಕು ಎಂದು ನುಡಿದರೆ ಕೃಷ್ಣಪ್ಪಗೌಡ ಶೂದ್ರರನ್ನು ನೂರಾರು ವರ್ಷಗಳಿಂದ ದೇವರು ಧರ್ಮದ ಹೆಸರಲ್ಲಿ ಉಸಿರುಗಟ್ಟಿಸಿ ಕೊಲ್ಲುತ್ತಿದ್ದೀರಿ, ಅವರದನ್ನು ಸೀಳಿ ತುರ್ತಾಗಿ ಹೊರಬರಬೇಕಿದೆ. ಹಿಂಸೆಯನ್ನು ಎದುರಿಸಲು ಪ್ರತಿಹಿಂಸೆ ಅನಿವಾರ್ಯ ಎಂದು ಕೃಷ್ಣಪ್ಪಗೌಡ ವಾದಿಸುತ್ತಾನೆ. ಬೀರೇಗೌಡ ಎಂಬ ಬಡರೈತನ ಮನೆಗೆ ಜಪ್ತಿಗೆ ಬಂದ ನರಸಿಂಹಭಟ್ಟ ಆತನ ಹೆಂಡತಿ ಮಗೂಗೆಂದು ಕಾಯಿಸುತ್ತಿದ್ದ ಹಾಲನ್ನು ಎತ್ತಿ ಚೆಲ್ಲುತ್ತಾನೆ. 'ಸಾಯ್ತಾ ಇರೋ ಮಗೂಗೇಂತ ಇಟ್ಟ ಹಾಲನ್ನ ಎಸೆಯೋದು ಹೆಚ್ಚು ತಪ್ಪೋ ಅಥವಾ ಅಂಥ ಬ್ರಾಹ್ಮಣನನ್ನ ಪೊರಕೇಲಿ ಹೊಡೆಯೋದೊ? ಕೃಷ್ಣಪ್ಪಗೌಡನ ಪ್ರಶ್ನೆಗೆ ಜೋಯಿಸರು 'ಎರಡೂ ತಪ್ಪು, ಭಟ್ಟ ಅವನು ಮಾಡಿದ ಪಾಪಕ್ಕೆ ನರಕಕ್ಕೆ ಹೋಗ್ತಾನೆ. ಆದರೆ ಅದು ಬ್ರಾಹ್ಮಣ ಜನ್ಮವಲ್ವ? ಅವನನ್ನ ಪೊರಕೇಲಿ ಹೊಡೆಸಿ ನೀನು ಯಾಕೆ ಪಾಪ ಕಟ್ಟಿಕೋಬೇಕು?'[8] ಎನ್ನುವ ಸಮರ್ಥನೆ ಮೇಲ್ಜಾತಿಯಾದ್ದರಿಂದ ದ್ವಿಜರು ಏನು ಮಾಡಿದರೂ ಅದು ಮನ್ನಿಸಲ್ಪಡುತ್ತದೆ; ಆದರೆ

ಕೆಳಜಾತಿಯವರು ತಪ್ಪನ್ನೆಸಗಬಾರದು ಎಂಬ ಮನೋಭಾವ ಪಾರಂಪರಿಕ ಸಮಾಜದ ವಾದದಂತೆ ಕಾಣುತ್ತದೆ. ಉಪನಿಷತ್ತುಗಳನ್ನೆಲ್ಲ ಓದಿದ್ದರೂ ಬಡ ಬ್ರಾಹ್ಮಣನು ಜಾತಿ ಪ್ರತಿಪಾದಕನಾಗಿದ್ದದ್ದು ಕೃಷ್ಣಪ್ಪನಿಗೆ ದುಃಖ ತರಿಸಿತ್ತು. 'ಈ ಮಾಯಾ ಪ್ರಪಂಚದಲ್ಲಿ ಸಿಕ್ಕಿರೋ ತನಕ ಜಾತಿ ಗೀತಿ ಎಲ್ಲ ನಿಜವೇ ಅಲ್ವೇನಪ್ಪ?'[9] ಎನ್ನುವ ಜೋಯಿಸರಿಗೂ 'ಇನ್ನಷ್ಟು ಓದೀಬೇಕು ಗೌಡರೆ ಬ್ರಾಹ್ಮಣರನ್ನು ಆಗಲೇ ಈ ಜಾತಿ ವ್ಯವಸ್ಥೇನ್ನ ನಾಶಮಾಡೋದು ಸಾಧ್ಯ' ಎನ್ನುವ ನಾಗೇಶನಿಗೂ ಒಂದೆರಡು ತಲೆಮಾರಿನ ಅಂತರವಿದೆ. ಸಮಾಜದಲ್ಲಿ ನಿಷ್ಕ್ರಿಯತೆಯನ್ನು ಒಂದು ಬ್ರಾಹ್ಮಣ ಗುಂಪು ಪ್ರತಿಪಾದಿಸಿದರೆ ಮುಂಬರಲಿರುವ ಸಮತಾ ರಾಜ್ಯದ ಕನಸು ಕಾಣುವಂಥ ನಾಗೇಶನಂಥ, ಇನ್ನೊಂದು ದ್ವಿಜರಗುಂಪು ಜಾತಿವಿನಾಶಕ್ಕೆ ನಾಂದಿಹಾಡುತ್ತದೆ. ಜಾತಿ, ಲಿಂಗ ಕುರಿತ ಭೇದಭಾವದ ಬಗ್ಗೆ ಲೋಹಿಯಾ ಚರ್ಚಿಸುತ್ತಾ 'ಭಾರತೀಯರು ಜಗತ್ತಿನಲ್ಲಿಯೇ ಅತ್ಯಂತ ಕಡು ದುಃಖಿಗಳು, ಅವರು ಕಡುಬಡವರಾಗಿರುವುದರ ಜೊತೆಗೆ ಅತ್ಯಂತ ರೋಗಪೀಡಿತರಾಗಿರುವುದು ಕೂಡ ಇದಕ್ಕೆ ಕಾರಣ. ಇದಕ್ಕೆ ಇನ್ನೊಂದು ಮಹತ್ವದ ಕಾರಣವೂ ಇದೆ. ಅದೆಂದರೆ ಇತ್ತೀಚಿನ ಚರಿತ್ರೆಯಲ್ಲಿ ಭಾರತೀಯ ಮನಸ್ಸು ಪಡೆದುಕೊಂಡ ವಿಚಿತ್ರವಾದ ಒಂದು ತಿರುವು.'[10]

ಈ ಪ್ರತ್ಯೇಕತಾ ಮನೋಭಾವವೇ ಭಾರತೀಯರ ಹೀನ ಪರಿಸ್ಥಿತಿಗೆ ಮೂಲಕಾರಣ ಎಂದು ಲೋಹಿಯಾ ವಿವರಿಸುತ್ತಾರೆ.

ಜಾತಿಪದ್ಧತಿ ಈ ನೆಲದಲ್ಲಿ ಮುಂದುವರಿದಿರುವುದನ್ನು ಲಂಕೇಶರು ಚರ್ಚಿಸುತ್ತಾರೆ, 'ಜಾತಿಪದ್ಧತಿಯ ದುರಂತವನ್ನು ಕುರಿತು ಮಾತಾಡುವುದು, ಬರೆಯುವುದು ಈಗ ಸುಲಭವಾಗಿದೆ. ಜಾತಿ ಜಾತೀಯತೆಯನ್ನು ಕುರಿತು ಮಾತಾಡುವಾಗಲೆಲ್ಲ ಹಿಂದಿನ ಕಾಲದಲ್ಲಿ ಇರುತ್ತಿದ್ದ ಭಯ, ಆತಂಕ ಈಗ ಮಾಯವಾಗಿದೆ. ಜಾತಿಯನ್ನು ಕಟ್ಟಿಕೊಂಡೇ ಹುಟ್ಟಿದ ಭಾರತೀಯನನ್ನು ಜಾತಿ ಯಾವ ಯಾವ ರೀತಿಯಲ್ಲಿ ಮುತ್ತಿಕೊಂಡಿರುತ್ತದೆ ಎಂಬುದನ್ನು ಯೋಚಿಸಿದರೆ ಮೇಲಿನ ಮಾತಿನ ಇಂಗಿತ ತಿಳಿಯುತ್ತದೆ. ಊಟ ಪದ್ದತಿಯಿಂದ ದಿನನಿತ್ಯದ ಕ್ರಿಯೆಗಳನ್ನೊಳಗೊಂಡು ವಿವಾಹ ಪದ್ದತಿಯವರೆಗೆ ಹಬ್ಬಿದ ಈ ಜಾತಿ ಪದ್ದತಿ ಮನುಷ್ಯ ಜೀವನದ ಪ್ರತಿಯೊಂದು ಮುಖವನ್ನೂ ಆವರಿಸಿದೆ. ನಮ್ಮ ಆಧುನಿಕ ವಿದ್ಯಾಭ್ಯಾಸದಿಂದಲಾದರೂ ಜಾತೀಯತೆ ಕಡಿಮೆಯಾಗಿ ಜಾತಿಪದ್ದತಿ ಸಡಿಲಗೊಳ್ಳಬಹುದೆಂದು ನಿರೀಕ್ಷಿಸಿದವರಿಗೆ ನಿರಾಶೆಯಾಗಿದೆ. ಯಾಕೆಂದರೆ, ಯಾವುದೇ ಆರೋಗ್ಯವಂತ ಸಮಾಜ ತನ್ನ ಸರ್ವತೋಮುಖ ಏಳಿಗೆಗಾಗಿ, ಸಮಾನತೆಯನ್ನು ಸಾಧ್ಯಗೊಳಿಸುವುದಕ್ಕಾಗಿ ಮಾಡುವ ಮೀಸಲಾತಿ ಕೂಡ ನಮ್ಮ ಅನಾರೋಗ್ಯಕರ ಆರ್ಥಿಕ

ವ್ಯವಸ್ಥೆಯಲ್ಲಿ ಜಾತೀಯತೆಯನ್ನು ಹೆಚ್ಚಿಸಿದಂತೆ ಕಾಣುತ್ತದೆ. ಇದಕ್ಕಿಂತ ಆವೃತ ಸ್ಥಿತಿಯನ್ನು ನೋಡಿದರೆ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿರುವ ಈ ಸಮಾಜದಲ್ಲಿ ಯಾವುದೇ ಉದ್ಯೋಗಕ್ಕಾಗಿ, ಯಾವುದೇ ಆದಾಯಕ್ಕಾಗಿ ಜಾತಿಯ ಸಂಬಂಧಗಳು ಮತ್ತು ವರದಕ್ಷಿಣೆಯ ತರದ ಅನಿಷ್ಟಗಳನ್ನು ನೆಚ್ಚುವ ಘಟ್ಟವನ್ನು ಈ ಸಮಾಜ ತಲುಪಿದೆ. ಜಾತಿಪದ್ಧತಿಯ ನೀಚತನದ ಬಗ್ಗೆ ಸಂಕೋಚ, ಆತಂಕದಿಂದ ಮಾತಾಡುತ್ತಿದ್ದವರೇ ಇವತ್ತು ಈ ಪದ್ಧತಿಯೊಂದು ತಮ್ಮ ವ್ಯಕ್ತಿತ್ವದಿಂದ ಎಲ್ಲೊ ಹೊರಗಡೆ ಇರುವ ದುಷ್ಟತನವೆಂಬಂತೆ, ಅದೊಂದು ಚರ್ಚೆಗೆ ಒಳ್ಳೆಯ ವಿಷಯ ಮಾತ್ರವೆಂಬಂತೆ ನಿರಾಳವಾಗಿ ಮಾತಾಡುವ ವರಸೆ ಕಂಡುಬರುತ್ತಿದೆ. ಜಾತಿಯ ಬಗ್ಗೆ ಇವತ್ತು ಸಿನಿಕತನ, ಮೂರ್ಖತನ, ಹುಂಬತನಗಳೆಲ್ಲ ಒಂದಾಗಿರುವುದರಿಂದಲೇ ಈ ಅನಿಷ್ಟ ಪದ್ಧತಿ ಮುಂದುವರಿಯುತ್ತಲೇ ಇದೆ.'[11]

ಜಾತಿ ಪದ್ಧತಿಯ ಅಕರಾಳ ವಿಕರಾಳ ರೂಪ ಮುಂದುವರಿಯಲು, ಸುಶಿಕ್ಷಿತ ಆರೋಗ್ಯವಂತ ಸಮಾಜ ಹಾಗೂ ಅರ್ಥವ್ಯವಸ್ಥೆಯ ವೈಫಲ್ಯದಿಂದಾಗಿ ಎಂದು ಲಂಕೇಶರು ವಿಶ್ಲೇಶಿಸುತ್ತಾರೆ.

ಕರ್ನಾಟಕ ರಾಜಕಾರಣ ಮತ್ತು ಸಮಾಜವಾದ

ಲೋಹಿಯಾರವರು ಗಾಂಧಿ, ಮಾರ್ಕ್ಸ್‌ನಿಂದ ವಿಭಿನ್ನವಾಗಿ ರೂಪಿಸಿದ ಸಮಾಜವಾದವು ಕರ್ನಾಟದಲ್ಲಿ ಅವರ ಸಂಪರ್ಕದಿಂದಾಗಿ ಬೇರೂರತೊಡಗಿತ್ತು. ಚಳುವಳಿಗಳಲ್ಲಿ ತೊಡಗಿಸಿಕೊಂಡಿದ್ದ ಚಿಂತಕರಿಗೆ, ಸಾಹಿತಿಗಳಿಗೆ ಅವರ ಪ್ರಭಾವ ಸಹಜವಾಗಿತ್ತು. 'ಅವಸ್ಥೆ'ಯ ಕೃಷ್ಣಪ್ಪಗೌಡ ಕ್ರಾಂತಿಕಾರಿ ಆಕರ್ಷಕ ವ್ಯಕ್ತಿ ಅಣ್ಣಾಜಿಯ ಪ್ರಭಾವಕ್ಕೆ ಒಳಗಾದರೂ ಆತನ ಕಮ್ಯುನಿಸ್ಟ್ ತತ್ವ ಸಿದ್ಧಾಂತದ ಬಗೆಗೆ ತನ್ನ ಅನುಮಾನವನ್ನು ವ್ಯಕ್ತಪಡಿಸುತ್ತಾನೆ. ಅಣ್ಣಾಜಿ, ಕೃಷ್ಣಪ್ಪನೊಂದಿಗೆ ಸಂವಾದಿಸುತ್ತಾ ಮಾರ್ಕ್ಸ್‌ನ ಮಾತಿನಿಂದ ಆರಂಭಿಸುತ್ತಾನೆ. "ಈವರೆಗೆ ತಾತ್ವಿಕರು ಪ್ರಪಂಚದ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ, ಆದರೆ ನಮ್ಮ ಕೆಲಸ ಈ ಪ್ರಪಂಚವನ್ನು ಬದಲಿಸುವುದು.'[12] ಬದಲಾವಣೆಯ ಮೂಲಭೂತ ತುರ್ತನ್ನು ಅಣ್ಣಾಜಿ ಒತ್ತಿ ಹೇಳುತ್ತಾನೆ. ಕೃಷ್ಣಪ್ಪ ಅದನ್ನು ಅನುಮಾನಿಸುತ್ತಲೇ 'ಮನುಷ್ಯ ತನ್ನ ಪರಿಸರಾನ್ನ ಮೀರತಾನೆ ಇದನ್ನು ನಾನು ವಾದಿಸಲಾರೆ. ನನ್ನ ಅನುಭವದ ಮಾತು ಇದು. ಆ ವಿಷಯ ಬಿಡು, ಕೂಲಿಕಾರರನ್ನು ರೈತರನ್ನು ನೀನು ಒಟ್ಟು ಮಾಡಿ ಹೋರಾಟಕ್ಕೆ ಹಚ್ಚೋದು ಯಾವ ಪುರುಷಾರ್ಥಕ್ಕೆ?

ಅವರ ಕೂಲಿ ಇನ್ನಷ್ಟು ಹೆಚ್ಚಿ, ಮನೆಗೊಂದು ರೇಡಿಯೋ, ಸ್ಟೈನ್‌ಲೆಸ್ ಪಾತ್ರೆಗಳನ್ನು ಅವರು ಕೊಂಡುಬಿಡುವಂತಾದರೆ ಅವರ ಜೀವನ, ಈ ಪ್ರಪಂಚ ಬದಲಾದಂತೆಯೊ? ಪ್ರತಿ ನಿತ್ಯದ ಬದುಕಿನ ಅದೇ ಕೆಲಸಗಳು, ಅದೇ ಜಂಜಾಟಗಳು, ಅದೇ ತರಲೇ ತಾಪತ್ರಯಗಳು ಹೋಗಿ ಬಿಡ್ತಾವ? ಅವರು ಇನ್ನಷ್ಟು ಆಸೆಬುರುಕರಾಗ್ತಾರೆ – ನಿನ್ನಂಥವರಿಂದ'[13] ಎಂದು ಅಣ್ಣಾಜಿಯನ್ನ ಪ್ರಶ್ನಿಸುತ್ತಿದ್ದ.

ಒಂದು ಪಕ್ಷ ಆಡಳಿತ ನಡೆಸುವ ಜಾಗದಲ್ಲಿ ಮತ್ತೊಂದು ಪಕ್ಷ ಬಂದರೂ ಇದೇ ಮುಂದುವರಿಯುತ್ತದೆ ಎನ್ನುತ್ತಾನೆ ಕೃಷ್ಣಪ್ಪ. 'ಹಾಗಲ್ಲ, ನೀನು ವ್ಯಕ್ತಿವಾದಿಯ ಹಾಗೆ ಮಾತಾಡ್ತಿದ್ದಿ, ತಮ್ಮ ಜೀವನದ ಸುಧಾರಣೆಗಾಗಿ ಬಡವರನ್ನು ಹೋರಾಡೋಕೆ ಸಿದ್ಧ ಮಾಡ್ತೀವಿ – ಅನ್ನು ಈ ಹೋರಾಟ ಅಷ್ಟಕ್ಕೆ ನಿಲ್ಲಲ್ಲ. ನಮ್ಮ ವರ್ಗದ ಜೀವನಮಟ್ಟ ಹೆಚ್ಚಿಸಿಕೊಳ್ಳೊ ಆಸೆಬುರುಕತನಕ್ಕೂ ಅವರ ಆಸೆಗೂ ಮೂಲಭೂತ ವ್ಯತ್ಯಾಸವಿದೆ. ಅವರ ಆಸೆ ಚಲನಶೀಲ, ಅವರ ಆಸೆ ಹೆಚ್ಚುತ್ತ ಹೋದಂತೆ ಈ ಪ್ರಪಂಚದ ಸ್ವರೂಪಾನೇ ಬದಲಾಗಬೇಕಾಗಿ ಬರುತ್ತೆ. ಅವರ ದುಡಿಮೆಯೇ ಈ ಸಮಾಜದ ಸ್ಥಿತಿಗೂ ಗತಿಗೂ ದ್ರವ್ಯ ಅನ್ನೋದನ್ನ ಒಪ್ಪಿಕೊಂಡಿದ್ದಿ ತಾನೆ? ನಮ್ಮ ಪುರುಷಾರ್ಥಗಳಿಗೆಲ್ಲ ಮೂಲ ಈ ದುಡಿಮೆ. ಆದರೆ ಈ ದುಡಿಮೆಯ ಲಾಭ ಹೋಗೋದು ಬಂಡವಾಳಶಾಹಿಗೆ. ಶೋಷಣೇನೇ ಈ ವ್ಯವಸ್ಥೆಗೆ ಆಧಾರ. ಬಡವರು ಶೋಷಣೆಗೂ ಒಳಗಾಗ್ತಾರೆ; ಬರ್ತಾ ಬರ್ತಾ ತಮ್ಮ ಕೈಯಿಂದ ಬೆಳೆದದ್ದಕ್ಕೂ ತಮಗೂ ಸಂಬಂಧಾನೇ ಇಲ್ಲವೆನ್ನೋದನ್ನ ಅರೀತಾರೆ. ಮನುಷ್ಯನಿಂದಲೇ ಮನುಷ್ಯನಿಗೆ ಇವೆಲ್ಲ ಆಗ್ತಿರೋದಂತ ಅರ್ಥವಾಗ್ತ ಹೋದ ಹಾಗೆ ತನ್ನ ನಿತ್ಯಜೀವನಾನ್ನ ಶುಷ್ಕವಾಗಿ ಮಾಡೋ ವ್ಯವಸ್ಥೆನೇ ಬದಲಾಗಬೇಕು, ಸುಧಾರಣೆಗಳಿಂದ ಇದು ಸಾಧ್ಯವಾಗದು ಅನ್ನೋದನ್ನ. ಅರೀತಾರೆ. ಮೇಲಿನ ವರ್ಗದ ನಮ್ಮಂಥ ಕೆಲವರಿಗೆ ಅದು ಬುದ್ಧಿಪೂರ್ವಕವಾಗಿ ಅರ್ಥವಾದರೆ ರೈತರಿಂದ ಹುಟ್ಟಿಬಂದ ನಿನ್ನಂಥ ಸೂಕ್ಷ್ಮ ಮನಸ್ಸಿನವರಿಗೆ ಅದು ಅನುಭವದಿಂದ ಗೊತ್ತಾಗತ್ತೆ. ನಿನ್ನಂಥವರು ಅದನ್ನು ಉಳಿದವರಲ್ಲಿ ಬಿಡುತ್ತೀರಿ. ಹಾಗೇ ಕ್ರಾಂತಿ ಆಗತ್ತೆ, ನಾವಾಗ ಬೇಕೂಂತ ಬಯಸೋದ್ರಿಂದ ಮಾತ್ರ ಕ್ರಾಂತಿಯಾಗತ್ತೆ ಅನ್ನೋದು ವ್ಯಕ್ತಿವಾದವಾಗಿಬಿಡತ್ತೆ. ತನ್ನ ಕೋಳಿ ಕೂಗಿದ್ರಿಂದ ಬೆಳಗಾಯ್ತು ಅಂತ ತಿಳಿಯೋ ಮುದುಕಿ ಕಥೆ ಹಾಗೆ ಅದು. ಕ್ರಾಂತಿಯಾಗತ್ತೆ ಅನ್ನೋದು ಸಮಾಜದ ಚಲನೆಯ ನಿಯಮ, ಅದನ್ನ ತ್ವರಿತಗೊಳಿಸೋ ವೇಗವರ್ಧಕಗಳು, ಅಥವಾ ಸೂಲಗಿತ್ತಿಯವರು ನಾವು.'[14]

ಅಣ್ಣಾಜಿಯ ಈ ವಿಶ್ಲೇಷಣೆಯಲ್ಲಿ ಮಾರ್ಕ್ಸ್‌ವಾದದ ಬಂಡವಾಳಶಾಹಿ ಸಿದ್ಧಾಂತದ ವಿಶ್ಲೇಷಣೆಯನ್ನ ಕಾಣಬಹುದು. ವ್ಯವಸ್ಥೆಯ ಸುಧಾರಣೆಯಲ್ಲದೆ ಸಂಪೂರ್ಣ ವ್ಯವಸ್ಥೆಯ ಬದಲಾವಣೆಯಾಗಬೇಕು. ಬದಲಾವಣೆಗೆ ಚಾಲನೆ ನೀಡಬೇಕಾದವರು ನಾವು ಎಂದು ಅಣ್ಣಾಜಿ ವಿವರಿಸುತ್ತಾನೆ. ಅಣ್ಣಾಜಿ ಸ್ವತಃ ಮಾರ್ಕ್ಸ್‌ವಾದಿ ಕಮ್ಯುನಿಸ್ಟನಾದರೂ 'ನಮ್ಮ ದೇಶದ ಕಮ್ಯುನಿಸ್ಟರು ಬಂಜೆಯರು'[15] ಎನ್ನುತ್ತಾನೆ. ರೈತರವನಾದ್ದರಿಂದ ನೂರಾರು ಜನರನ್ನು ನಿನ್ನ ಜೊತೇಲಿ ತಗೊಂಡು ಹೋಗಬಲ್ಲೆ ಅಂತ ತಿಳಿದಿದ್ದೀನಿ. ಹೋಗಬಲ್ಲೆ ಅಲ್ಲ ಹೋಗಲೇ ಬೇಕಾಗುತ್ತೆ. ಇದು ಸೈಂಟಿಫಿಕ್ ಸತ್ಯ. ವ್ಯಕ್ತಿವಾದಿಯಾದರೆ ನಿನ್ನ ಸ್ವಭಾವ ಫ್ಯಾಸಿಸ್ಟ್ ಆಗ್ತಾ ಹೋಗತ್ತೆ. ಆದ್ರಿಂದ ನೀನು ಮಾಸ್‌ಮ್ಯಾನ್ ಆಗಬೇಕು. ವರ್ಗ ಹೋರಾಟದ ಮುಂಚೂಣಿಯಲ್ಲಿ ನಿನ್ನಂಥವರು ನಿಲ್ಲಬೇಕು. ಕಮ್ಯುನಿಸ್ಟರನ್ನು ಮರೆತುಬಿಡು. ಈ ನೆಲದ ಸಾರವನ್ನು ಹೀರಿದ, ಈ ಕ್ಷುದ್ರ ಚರಿತ್ರೇನ್ನ, ಹಾಗೇ ವೈಭವವನ್ನು ಅರ್ಥಮಾಡಿಕೊಂಡ ಒಂದು ಹೊಸ ಕ್ರಾಂತಿಕಾರಿ ಪಕ್ಷಾನ್ನ ಈ ದೇಶದಲ್ಲಿ ನಾವು ಕಟ್ಟಬೇಕು...'[16] ಎನ್ನುತ್ತಾನೆ ಅಣ್ಣಾಜಿ.

ಕಮ್ಯುನಿಸ್ಟರು ನೆಲದಲ್ಲಿ ನಿಂತು ನೋಡದೆ ರಷ್ಯಾ ಮತ್ತು ಚೈನಾದ ಕಡೆ ಮುಖಮಾಡಿರುವುದನ್ನ ಲೋಹಿಯಾ ಟೀಕಿಸುತ್ತಾರೆ. ಈ ದೃಷ್ಟಿಯಿಂದ ಹೊಸ ಸೈದ್ಧಾಂತಿಕ ಪಕ್ಷವೊಂದನ್ನು ಲೋಹಿಯಾ ರೂಪಿಸುತ್ತಿದ್ದುದ್ದನ್ನು ಅದರ ಸಂಘಟನೆ ಕೆಳಮಟ್ಟದಿಂದ ರೂಪಿತವಾಗಬೇಕೆಂಬುದನ್ನು ಇಲ್ಲಿ ಕಾಣಬಹುದಾಗಿದೆ. ಲೋಹಿಯಾರು ರೂಪಿಸುತ್ತಿದ್ದ ಸಮಾಜವಾದ ಕರ್ನಾಟಕ ರಾಜಕೀಯದಲ್ಲಿ ಪ್ರವೇಶಿಸುವ ರೀತಿಯನ್ನು ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ.

ಲೈಂಗಿಕ ಜಗತ್ತು ಮತ್ತು ಸಮಾಜವಾದಿ ನೈತಿಕತೆಯ ಪರಿಕಲ್ಪನೆ

ಪಾರಂಪರಿಕ ಸಮಾಜ ಹೆಣ್ಣನ್ನು ಸರಕಿನ ಕ್ರಯ – ವಿಕ್ರಯ ಮಾಡಿಕೊಳ್ಳುವಂತೆ ರೂಢಿಸಿಕೊಂಡು ಬಂದಿರುವುದನ್ನು ಲೋಹಿಯಾ ಒಪ್ಪುವುದಿಲ್ಲ. ಬದಲಿಗೆ ಹೊಸ ಸಮಾಜವಾದೀ ನೈತಿಕತೆಯನ್ನ ರೂಪಿಸುತ್ತಾರೆ: 'ಇಂದು ಭಾರತ ವಿಕೃತಗೊಂಡಿದೆ. ಕಾಮಕ್ಕೆ ಸಂಬಂಧಿಸಿದಂತೆ ಭಾರತೀಯರು ಎಷ್ಟೆಲ್ಲ ಪಾವಿತ್ರ್ಯದ ಮಾತಾಡಿದರೂ ಮದುವೆ ಹಾಗೂ ಕಾಮಕುರಿತ ವಿಚಾರಗಳಲ್ಲಿ ಮಾತ್ರ ಅವರು ಅತ್ಯಂತ ಕೊಳಕರಾಗಿಯೇ ಉಳಿದಿದ್ದಾರೆ.'[17] ಭಾರತಕ್ಕೆ ಅಂಟಿದ ರೋಗಕ್ಕೆ ಕಾರಣ 'ಜಾತಿ ಮತ್ತು ಲಿಂಗ ಭೇದ' ಕಾರಣ ಎಂದು ಲೋಹಿಯಾ ವಿವರಿಸುತ್ತಾರೆ. ವೇಶ್ಯೆಯನ್ನು ನೋಡುವ ದೃಷ್ಟಿಕೋನ ಈ ಸಮಾಜದಲ್ಲಿ

ಕ್ರೂರವಾಗಿದೆ. ಗೌರಿಯ ತಾಯಿ ಅನುಸೂಯಾಬಾಯಿ ಮಂಡಿ ವ್ಯಾಪಾರಿ ನಂಜಪ್ಪನ ಜೊತೆ ಸಂಬಂಧ ಬೆಳೆಸುವುದು ಅನೈತಿಕವಲ್ಲ. ಗಂಡು ಸಹಜವಾಗಿ ಅನೇಕ ಹೆಂಗಸರನ್ನು ಕೂಡುವುದಾದರೆ ಹೆಣ್ಣಿಗೆ ಅದು ಸಾಧ್ಯವಾಗಬಾರದೇ? ಎಂದು ಅವಸ್ಥೆಯ ನಿರೂಪಣಾ ಧ್ವನಿ ವಿವರಿಸುತ್ತದೆ. ಗೌರಿಯನ್ನು ಸೂಳೆಯಮಗಳೆಂದೇ ಆಕೆಯ ಸಹಪಾಠಿಗಳು ಕಾಣುವುದು. ಕೃಷ್ಣಪ್ಪನ ಹೆಸರು ಸೇರಿಸಿ ಗೋಡೆ ಮೇಲೆ ಅಶ್ಲೀಲವಾಗಿ ಬರೆಯುವುದು ಸಮಾಜ ರೋಗಗ್ರಸ್ತವಾಗಿರುವುದರ ದುರಂತವಾಗಿದೆ. 'ವಿವಾಹದ ಚೌಕಟ್ಟಿನೊಳಗೇ ಹುಟ್ಟಿದ ಅರ್ಧ ಡಜನ್ ತಂಟೆಕೋರ ಮಕ್ಕಳಿಗಿಂತ ವಿವಾಹದ ಚೌಕಟ್ಟಿನಾಚೆಗೆ ಹುಟ್ಟಿದ ಒಂದು ಮಗು ಎಷ್ಟೋ ಪಾಲು ಸಭ್ಯವಾಗಿರುತ್ತದೆನ್ನುವುದರಲ್ಲಿ ನನಗಂತೂ ಅನುಮಾನವಿಲ್ಲ.'[18]

ಲೋಹಿಯಾರು ಮಂಡಿಸುವ ನೈತಿಕತೆ ಇದು ಅವಸ್ಥೆಯಲ್ಲಿ ಬಿಂಬಿತವಾಗಿದೆ.. 'ಲೈಂಗಿಕ ಮೌಲ್ಯಗಳನ್ನು ಕುರಿತ ಕ್ಷುದ್ರ ಸಂಗತಿಗಳ ವಿರುದ್ಧ ತರುಣ ತರುಣಿಯರು ಬಂಡೇಳಲು ಇದು ಸಕಾಲ. ಲೈಂಗಿಕ ನೀತಿಸಂಹಿತೆಯಲ್ಲಿ ಎರಡೇ ಎರಡು ಅಕ್ಷಮ್ಯ ಅಪರಾಧಗಳಿವೆ ಎಂಬುದು ಮಾತ್ರ ಅವರಿಗೆ ನೆನಪಿರಲಿ. ಒಂದು, ಅತ್ಯಾಚಾರ, ಎರಡು ಸುಳ್ಳು ಹೇಳುವುದು, ಅಥವಾ ಕೊಟ್ಟ ಮಾತಿಗೆ ತಪ್ಪುವುದು. ಮೂರನೆಯ ಅಪರಾಧವೂ ಒಂದಿದೆ. ಅದೆಂದರೆ, ಇನ್ನೊಬ್ಬರಿಗೆ ನೋವುಂಟು ಮಾಡುವುದು. ಈ ಕುರಿತು ಸಾಧ್ಯವಾದಷ್ಟು ಅವರು ಎಚ್ಚರವಹಿಸಬೇಕು.'[19]

ಲೋಹಿಯಾರ ಈ ಸಮಾಜವಾದೀ ನೈತಿಕತೆ ಅನಸೂಯಾಬಾಯಿ, ಗೌರಿದೇಶಪಾಂಡೆ, ಲೂಸಿನಾ, ಉಮೆ, ಪಾತ್ರಗಳಲ್ಲಿ ಕಾಣಬಹುದಾಗಿದೆ. ಬಂಡವಾಳಶಾಹಿ ವರ್ಗ ಹೆಣ್ಣನ್ನು ಸ್ವತ್ತೆಂದು ಭಾವಿಸುತ್ತದೆ ಎಂದು ಅಣ್ಣಾಜಿ ಕೃಷ್ಣಪ್ಪನಿಗೆ ವಿವರಿಸುತ್ತಾನೆ. ಅಣ್ಣಾಜಿ ಉಮೆಯನ್ನು ಕೂಡವಾಗ, ಉಮೆಗಾಗಲೀ, ಅಣ್ಣಾಜಿಗಾಗಲೀ, ಪಾಪಪ್ರಜ್ಞೆ ಬಾಧಿಸುವುದಿಲ್ಲ. 'ಪೂರ್ಣಸೆರಗು ಹೊದ್ದು, ದೊಡ್ಡ ಕುಂಕುಮವಿಟ್ಟು ಮೂಗುಬೊಟ್ಟನ್ನಿಟ್ಟ ಮೂಗನ್ನು ಚೂರು ತಗ್ಗಿಸಿ ಕಾಫಿ ಹಿಡಿದು ನಿಂತ ಉಮೆಯನ್ನು ನೋಡಿ ಕೃಷ್ಣಪ್ಪನಿಗೆ ಇನ್ನೂ ಹೆಚ್ಚಿನ ಆಶ್ಚರ್ಯವಾಯಿತು. ಪಾಪಪ್ರಜ್ಞೆಯಿಂದ ನರಳದೆ ಸಾಮಾಜಿಕ ಕಟ್ಟುಗಳನ್ನು ಹೆಣ್ಣು ಮೀರಬಲ್ಲಳು ಹಾಗಾದರೆ.'[20] ಸಮಾಜದ ನಿರ್ಬಂಧಗಳನ್ನು ಹೆಣ್ಣು ಮೀರಲು ಸಾಧ್ಯ ಎಂಬುದನ್ನು ಕೃಷ್ಣಪ್ಪ ತಿಳಿಯುತ್ತಾನೆ.

'ಈವರೆಗೆ ಸಮಾಜ ಸೃಷ್ಟಿಸಿದ ಎಲ್ಲ ಉತ್ಪಾದನಾ ಸಂಬಂಧಗಳೂ ಮನುಷ್ಯನ ಸ್ವಾತಂತ್ರ್ಯವನ್ನು ಮಿತಗೊಳಿಸುವಂಥವು. ಉದಾಹರಣೆಗೆ ಗಂಡು ಹೆಣ್ಣಿನ ಸಂಬಂಧ ನೋಡುವ ಉಳಿದ ಪದಾರ್ಥಗಳಂತೆಯೇ ಹೆಣ್ಣು ಕೂಡ ಒಂದು ಸ್ವತ್ತಾಗಿದೆ. ಆದ್ದರಿಂದಲೇ ಇದು ಸ್ವಂತದ ಹೆಣ್ಣು ಇದು ಪರ ಹೆಣ್ಣು ಎಂದು ವಿಂಗಡಣೆಗಳ ಮುಖಾಂತರ ತನ್ನ ಸ್ವತ್ತನ್ನು ಕಾಯ್ದುಕೊಳ್ಳುವ ವ್ಯವಸ್ಥೆಯನ್ನು ಮನುಷ್ಯ ಫ್ಯೂಡಲ್ ಪದ್ಧತಿಯಲ್ಲೂ ಕ್ಯಾಪಿಟಲಿಸ್ಟ್ ಪದ್ಧತಿಯಲ್ಲೂ ಮಾಡಿಕೊಂಡಿದ್ದಾನೆ. ಈ ಎಲ್ಲ ಪದ್ಧತಿಗಳೂ ಮನುಷ್ಯನ ಸಹಜ ವಿಕಾಸವನ್ನು ತಡೆಗಟ್ಟುತ್ತವೆ. ಹಾಗೆಯೇ ನಮ್ಮ ಈ ಲಿಬಿಡೊ– ಈ ನಮ್ಮ ಕಾಮ ಜೀವನ ಅನೈಸರ್ಗಿಕವಾದ ಕಟ್ಟುಪಾಡುಗಳಿಗೆ ಒಳಗಾಗುತ್ತದೆ. ಕೊರತೆಯ ಆಧಾರದ ಮೇಲೆ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ನಿಂತಿದೆ. ಕೃತಕವಾದ ಕೊರತೆ ಮತ್ತು ಶೋಷಣೆ ಇದು ಕಾಮ ಜೀವನಕ್ಕೂ ಅನ್ವಯಿಸುತ್ತದೆ. ಈಗ ನೋಡಿ ಸಮೃದ್ಧಿಯಲ್ಲಿ ಮನುಷ್ಯನ ಹೊಟ್ಟೆಬಟ್ಟೆ ವಸತಿ ವಿರಾಮಗಳ ಅಗತ್ಯಗಳು, ಸಾಂಸ್ಕೃತಿಕ ಅಗತ್ಯಗಳು, ಪೂರೈಕೆಯಾಗುತ್ತ ಹೋದಂತೆ ಮನುಷ್ಯನ ಅಂತಿಮವಾದ ಬಿಡುಗಡೆಗೆ ಅವನು ಸಿದ್ಧನಾಗುತ್ತಾನೆ. ತಮ್ಮನ್ನು ತೀವ್ರವಾದ ನೋವು ಸಂಕಟಗಳಿಗೆ ಗುರಿಮಾಡುವ ಕಾಮಜೀವನಕ್ಕೆ ಸಂಬಂಧಪಟ್ಟ ನಿಷೇಧಗಳನ್ನು ಹರಿದು ಗಂಡು ಹೆಣ್ಣು ಬಿಡುಗಡೆ ಪಡೆಯುತ್ತಾರೆ. ಮದುವೆಯಾದವಳಲ್ಲಿ ಮಾತ್ರ ಅದೂ ನಿಯಮಕ್ಕನುಸಾರವಾಗಿ ಈ ದೇಹ ಕೆಲವೇ ಬಗೆಯ ಸುಖಗಳನ್ನು ಪಡೆಯಬಹುದೆಂಬ ಅಡಚಣೆಗಳು ಮಾಯವಾಗುತ್ತವೆ. ಆಸ್ತಿಯ ಅಗತ್ಯ ವರ್ಗರಹಿತ ಸಮಾಜದಲ್ಲಿ ಮಾಯವಾದಂತೆ ಆಗ ಇಡೀ ದೇಹವೂ ಬಿಡುಗಡೆ ಹೊಂದಿ ಸುಖದ ಬುಗ್ಗೆಯಾಗುತ್ತದೆ. ಈ ಸುಖದ ಸಾಧನೆಯೇ ಮನುಷ್ಯನಿಗೆ ನೈತಿಕತೆಯನ್ನು ತರುತ್ತದೆ. ತಾನು ಭೋಗಿಸುವುದು ಅತ್ಯಂತ ಅಮೂಲ್ಯವಾದ್ದು, ಸ್ವತಂತ್ರವಾದ್ದು ಎನ್ನುವ ಧೋರಣೆಗಿಂತ ದೊಡ್ಡ ನೈತಿಕತೆ ಎಲ್ಲಿದೆ?'[21]

ಅಣ್ಣಾಜಿಯ ಈ ವಿಶ್ಲೇಷಣೆಯಲ್ಲಿ ಫ್ಯೂಡಲ್ ಸಮಾಜ ಹೇಗೆ ಹೆಣ್ಣನ್ನು ನಿಯಂತ್ರಿಸಿದೆ ಎಂಬುದರ ಚರ್ಚೆಯಾಗಿದೆ. ಮಾರ್ಕ್ಸ್‌ವಾದೀ ಕಮ್ಯುನಿಸ್ಟನಾದ್ದರಿಂದ ಅಣ್ಣಾಜಿಗೆ ಹೆಣ್ಣನ್ನು ಒಂದು ಭೋಗವಸ್ತುವಾಗಿ ಸಮಾಜ ನೋಡುತ್ತದೆ ಎಂಬುದನ್ನು ನಿರಾಕರಿಸಲಾಗುವುದಿಲ್ಲ. 'ಒಬ್ಬ ಹುಡುಗಿಗೆ ತಾಯಿಯಾಗುವ ಆಸೆ ಇಲ್ಲದೇ ಇರಬಹುದು ಅನ್ನೋದನ್ನ ನೀವು ಒಪ್ಪಿಕೋತೀರ?'[22] ಎಂದು ಪ್ರಶ್ನಿಸುವ ಗೌರಿ ದೇಶಪಾಂಡೆ, ನಾನು ಮದುವೇಂದ್ರೆ ದ್ವೇಷಿಸ್ತೇನೆ'[23] ಎನ್ನುವ ಲೂಸಿನಾ ಸಮಾಜವಾದೀ ನೈತಿಕತೆಯ ಉತ್ತಮ ನಿದರ್ಶನ.

ಹಿಂದೂ – ಮುಸ್ಲಿಂ ಸಂಬಂಧ

‘ಇಂದು ಹೈದ್ರಾಬಾದ್‌ನಲ್ಲಿ ಹಿಂದೂ ಹಾಗೂ ಮುಸಲ್ಮಾನರು ಒಗ್ಗೂಡಿ ಸಾವಿರಗಟ್ಟಲೆಯಾಗಿ ಅಷ್ಟೇ ಏಕೆ, ಲಕ್ಷಾಂತರ ಎನ್ನೋಣ ಯಾವುದೋ ಬೇಡಿಕೆಯ ಈಡೇರಿಕೆಗಾಗಿ ನಗರದಲ್ಲಿ ಮೂರ್ನಾಲ್ಕು ಮೈಲುದ್ದ ಮೆರವಣಿಗೆ ಹೊರಟರೆ ಆಂಧ್ರ ಪ್ರದೇಶದಲ್ಲಿ ಮಾತ್ರವಲ್ಲ, ಇಡೀ ಭಾರತದಲ್ಲೇ ಮಿಂಚಿನ ಸಂಚಾರವಾಗುತ್ತದೆ.’[24] ಇದು ಲೋಹಿಯಾರು ಹಿಂದೂ–ಮುಸ್ಲಿಂರ ಸಹೋದರತ್ವವನ್ನು ಕುರಿತು ಚರ್ಚಿಸುತ್ತಾ ಹೇಳಿರುವ ಮಾತು.

ಈ ಹಿನ್ನೆಲೆಯಲ್ಲಿ ಈ ಕಾದಂಬರಿಯಲ್ಲಿ ಹಿಂದೂ ಮತ್ತು ಮುಸ್ಲಿಂ ಸಂಬಂಧವನ್ನು ನೋಡಬಹುದಾಗಿದೆ. ‘ಕೃಷ್ಣಪ್ಪ ಮತ್ತು ರೆಹಮಾನರ ಸ್ನೇಹ ದಟ್ಟವಾದ್ದಕ್ಕೊಂದು ಹಿನ್ನೆಲೆಯಿದೆ. ಮೂರುವರ್ಷಗಳ ಹಿಂದೆ ಚಿಕ್ಕಮಗಳೂರಿನಲ್ಲಿ ಒಂದು ಗಲಭೆಯಾಯಿತು. ಮುಸ್ಲಿಮರು ಗಣಪತಿಯ ಮೆರವಣಿಗೆ ತಮ್ಮ ಮಸೀದಿಯ ಎದುರು ಪ್ರಾರ್ಥನೆಯ ಸಮಯದಲ್ಲಿ ಗದ್ದಲ ಮಾಡಿಕೊಂಡು ಬರುವುದನ್ನು ಕಲ್ಲೆಸೆದು ಪ್ರತಿಭಟಿಸಿದರು. ಇದಕ್ಕೆ ಪ್ರತೀಕಾರವಾಗಿ ಮುಸ್ಲಿಮರ ಗುಡಿಸಲುಗಳಿಗೆ ಬೆಂಕಿ ಹಚ್ಚಲಾಯಿತು. ಮಸೀದಿಯಲ್ಲಿ ಮದ್ದು ಗುಂಡುಗಳನ್ನು ಬಚ್ಚಿಟ್ಟಿದ್ದಾರೆಂದು ಗಲಭೆ ಬೇರೆ ಬೇರೆ ಕಡೆಗಳಲ್ಲೂ ನಡೆಯಿತು. ಎಷ್ಟೋ ಜನರು ಇದರಿಂದ ಸತ್ತರು. ಪೇಟೆಯ ದಾರಿಯಲ್ಲೆ ಮುಸ್ಲಿಂ ದಂಪತಿಗಳು ತಮ್ಮ ನಾಲ್ಕು ಮಕ್ಕಳ ಜೊತೆಗೆ ಬರುತ್ತಿದ್ದ ಕಾರೊಂದನ್ನು ನಡು ಹಗಲಲ್ಲಿ ನಿಲ್ಲಿಸಿ, ಕಾರಿನ ಮೇಲೆ ಪೆಟ್ರೋಲ್ ಸುರಿದು ಅವರನ್ನು ನಡುಬೀದಿಯಲ್ಲೇ ಸುಡಲಾಯಿತು. ಖೊರಾನಿನ ಪ್ರತಿಗಳನ್ನು ಚೌಕದಲ್ಲಿ ಬೆಂಕಿಗೆ ಎಸೆಯಲಾಯಿತು.’[25]

ಮತಾಂಧತೆ ಅತಿರೇಕಕ್ಕೆ ಹೋದಾಗ ಎಲ್ಲರೂ ಹೇಗೆ ಅನುಮಾನದಿಂದ ನೋಡುತ್ತಾರೋ ಹಾಗೆಯೇ ಪರಸ್ಪರ ದ್ವೇಷಾಸೂಯೆಗಳಿಂದಲೂ ನೋಡುತ್ತಾರೆ. ಮತಾಂಧತೆಯ ಕ್ರೌರ್ಯ ಅರಿವಾಗುವುದು ಅದು ಉಂಟುಮಾಡುವ ಭೀಕರ ಪರಿಣಾಮದಲ್ಲಿ. ಮಾನವೀಯತೆಗೆ ಕಿವಿಕೊಡುವ ಸಜ್ಜನ ಮಾತ್ರ ನಿಷ್ಠುರವಾಗಿ ಸತ್ಯ ನುಡಿಯಬಲ್ಲ ಎಂಬುದನ್ನು ಕೃಷ್ಣಪ್ಪನಲ್ಲಿ ಕಾಣಬಹುದಾಗಿದೆ. ‘ಮುಸ್ಲಿಮರು ಹೇಗೂ ಆಳುವ ಪಕ್ಷಕ್ಕೆ ಓಟು ಕೊಡುವಾಗ ನಾವು ಈ ರೀತಿ ಹೇಳಿಕೆಕೊಟ್ಟು ಹಿಂದೂಗಳ ಓಟನ್ನು ಕಳೆದುಕೊಳ್ಳುವುದು ಮೂರ್ಖತನವಲ್ಲವೆ’[26] ಎಂದು ಪಕ್ಷದವರೆ ಕೃಷ್ಣಪ್ಪನನ್ನು ಟೀಕಿಸಿದಾಗ ಜನರಿಗೆ ಅಪ್ರಿಯವಾಗುವ ಧೈರ್ಯವಿಲ್ಲದವನು ರಾಜಕೀಯ ನಾಯಕನಾಗಲಾರ’[27] ಎಂದು

ಕೃಷ್ಣಪ್ಪ ವಾದಿಸುತ್ತಾನೆ. ಮತಾಂಧತೆ ಒಂದು ಧರ್ಮವಲ್ಲ, ಎಲ್ಲಾ ಧರ್ಮಗಳಲ್ಲಿರುವಂತೆ ಹಿಂದೂ-ಇಸ್ಲಾಂ ಧರ್ಮದಲ್ಲೂ ಇದೆ. ಮತಾಂಧತೆಯನ್ನು ಮೀರಿದ ಸ್ನೇಹ ಕೃಷ್ಣಪ್ಪ ಅಬ್ದುಲ್ ರೆಹಮಾನ್‌ನದಾಗಿತ್ತು.

ಚಳುವಳಿ ರಾಜಕಾರಣ ಮತ್ತು ಅಧಿಕಾರ ರಾಜಕಾರಣ

'ಪಕ್ಷವೊಂದು ಅಧಿಕಾರ ರಾಜಕಾರಣದ ಭಾಗವಾದಾಗಲೂ ಚಳುವಳಿ ರಾಜಕಾರಣವನ್ನು ಬಿಟ್ಟುಕೊಡಬಾರದು ಎಂಬುದು ಲೋಹಿಯಾ ನಿಲುವಾಗಿತ್ತು. ಉತ್ತರಪ್ರದೇಶದಲ್ಲಿ ಸಮಾಜವಾದಿ ಪಕ್ಷ ಅಧಿಕಾರದಲ್ಲಿದ್ದಾಗ, ಅದರ ವಿರುದ್ಧವೇ ಅವರು ಚಳುವಳಿ ಹೂಡಿದ್ದರು. ಪಕ್ಷ ರಾಜಕಾರಣಕ್ಕಿಂತ ಅಧಿಕಾರ ರಾಜಕಾರಣಕ್ಕಿಂತ ಚಳುವಳಿ ರಾಜಕಾರಣಕ್ಕೆ ಲೋಹಿಯಾ ಮಹತ್ವ ನೀಡಿದ್ದನ್ನು ಕಾಣಬಹುದಾಗಿದೆ. ಆಧುನಿಕ ಭಾರತದಲ್ಲಿ ಚಳುವಳಿಗಳು, ಹೋರಾಟಗಳ ಜೊತೆ ಜೊತೆಗೇ ಇದ್ದು ಅವನ್ನು ರೂಪಿಸಿದ ಚಿಂತಕರಲ್ಲಿ ಬಾಬಾಸಾಹೇಬ ಅಂಬೇಡ್ಕರ್ ಅವರನ್ನು ಬಿಟ್ಟರೆ, ಆಮಟ್ಟದ ಬೌದ್ಧಿಕ ಸಿದ್ಧತೆ ಹಾಗೂ ಬೌದ್ಧಿಕ ಪರಿಶ್ರಮ ಕಂಡುಬರುವುದು ಲೋಹಿಯಾ ಅವರಲ್ಲಿಯೇ ಎನ್ನಿಸುತ್ತದೆ.'[28]

ತಮ್ಮ ಜೀವಮಾನವಿಡೀ ಚಳುವಳಿ ಹೋರಾಟಗಳಲ್ಲಿ ಲೋಹಿಯಾ ಕಳೆಯುತ್ತಾ ಬಂದಿರುವುದನ್ನು ಕಾಣಬಹುದಾಗಿದೆ.

ಲಾಹೋರ್ ಜೈಲಿನಲ್ಲಿ ಲೋಹಿಯಾ ಹಿಂಸೆಯನ್ನು ಅನುಭವಿಸಲು ಯೋಗದ ಮೊರೆ ಹೊಕ್ಕರೆ, ಕೃಷ್ಣಪ್ಪಗೌಡ ವಾರಂಗಲ್ ಜೈಲಿನಲ್ಲಿ ದೇವಿ ಪೂಜೆಯನ್ನು ಮಾಡಿ ಹಿಂಸೆಯನ್ನು ಗೆಲ್ಲುವಂತೆ ಕಾಣುತ್ತಾನೆ. ಅಣ್ಣಾಜಿ ಹೇಳುತ್ತಿದ್ದ ಮಾರ್ಕ್ಸ್‌ನ ವಿಶ್ಲೇಷಣೆ ಕೃಷ್ಣಪ್ಪನಿಗೆ ಹೆಚ್ಚು ಅರ್ಥವಾಗತೊಡಗುತ್ತದೆ. ಅಣ್ಣಾಜಿಯ ಜೊತೆ ಚರ್ಚಿಸುವಂತೆ ಕಲ್ಪಿಸಿಕೊಳ್ಳುತ್ತಾನೆ. 'ಸಮಾಜ ಹಿಂಸೆಯ ಮೇಲೆ ನಿಂತಿದೆ. ಇವೆಲ್ಲ ಕೇಂದ್ರೀಕೃತವಾಗಿ ಪೋಲಿಸ್ ಸಂಸ್ಥೆಯಾಗಿದೆ. ವೈಯಕ್ತಿಕವಾಗಿ ಈ ಪೋಲಿಸರನ್ನು ದ್ವೇಷಿಸಿ ಏನು ಪ್ರಯೋಜನ? ಸಿಸ್ಟಮ್ ಹೇಗೆ ಕೆಲಸಮಾಡುತ್ತದೆಂದು ತಿಳಿದು ಅದನ್ನು ಬದಲು ಮಾಡಬೇಕು. ಹೀಗೆ ಬದಲು ಮಾಡುವವರು ರೈತರು, ಕೂಲಿಗಾರರು.'[29] ಮಾರ್ಕ್ಸ್‌ನ ಬಂಡವಾಳಶಾಹಿ ಸಿದ್ಧಾಂತದ ವಿಶ್ಲೇಷಣೆ ಜಗತ್ತಿನ ಮೇಲೆ ಪ್ರಭಾವ ಬೀರಿದಂತೆ ಕೃಷ್ಣಪ್ಪನ ಮೇಲೂ ಪ್ರಭಾವ ಬೀರುತ್ತದೆ. ನಮ್ಮ ಮುಂದಿರುವುದು ಜಗತ್ತನ್ನು ಬದಲಿಸುವ ಕೆಲಸ ಎಂಬುದನ್ನು ಆತ ಒಪ್ಪುತ್ತಾನೆ. ಮಾರ್ಕ್ಸ್‌ವಾದ, ಕಮ್ಯುನಿಸಂ ಬಗ್ಗೆ ವಾಸ್ತವವಾಗಿ ಅನುಮಾನಗಳಿದ್ದರೂ ಅವುಗಳ ತಾತ್ವಿಕ ಪ್ರಣಾಲಿಯನ್ನ ಬಿಡಲಾಗುವುದಿಲ್ಲ. ಕಮ್ಯುನಿಸ್ಟರನ್ನು

ನಕ್ಸಲರು ಎಂದು ಕರೆಯುವುದನ್ನು ಯು.ಆರ್.ಅನಂತಮೂರ್ತಿಯವರು ಇತ್ತೀಚಿನ ಲೇಖನದಲ್ಲಿ 'ಈ ಯುವಕ ಯುವತಿಯರನ್ನು ಶಿಕ್ಷಿಸಲೆಂದೇ ನಾವು ಕಟ್ಟಿಕೊಂಡಿರುವ ನಕ್ಸಲ್ ಪದವನ್ನು ಬಿಟ್ಟು ಬಿಡೋಣ, ನಕ್ಸಲರು ಹಲವು ಬದಲಾವಣೆಗಳಿಗೆ ತಮ್ಮೊಳಗೆ ನಡೆದ ತಾತ್ವಿಕ ಘರ್ಷಣೆಗಳಿಗೂ ಒಳಗಾಗಿ ಬದಲಾಗಿದ್ದಾರೆ. ಅದೊಂದು ರಾಜಕೀಯ ಸಿದ್ಧಾಂತವಾಗಿ ರೂಪ ತಾಳುತ್ತ ಇದೆ. ಅವರನ್ನು ಸುಳ್ಳು ಎನ್‌ಕೌಂಟರ್‌ಗಳಲ್ಲಿ ಕೊಂದು ಅವರ ವೈಚಾರಿಕತೆಯನ್ನೇ ಹತ್ತಿಕ್ಕುವುದು ಸಾಧ್ಯವಿಲ್ಲ. ಆ ಸಿದ್ಧಾಂತಕ್ಕೆ ವಿರೋಧವಾದ ನಮ್ಮ ಹೊಸ ಸಮಾಜದ ಕಾಣ್ಕೆಯನ್ನು ರೂಪಿಸಿಕೊಳ್ಳಬೇಕು. ಕಾಲಕ್ಕೆ ಎದುರಾಗುವುದು ಹೀಗೆ, ಇದು ನಾಗರಿಕ ಸಮಾಜದ ಸತತವಾದ ಅಗತ್ಯ, ಅಮೆರಿಕಾವು ಎಲ್ಲರಿಗಿಂತ ಮುಂಚೆ ಬ್ರಿಟನ್ನಿನಿಂದ ಬಿಡುಗಡೆಯಾಗುವ ಕ್ರಾಂತಿಯನ್ನು ಮಾಡಿತು. ಆಮೇಲೆ ಅದೇ ಇಡೀ ಜಗತ್ತನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವ ದುರಾಸೆಯ ದೇಶವಾಯಿತು. ಫ್ರಾನ್ಸ್, ರಷ್ಯಾ, ಚೀನಾ ಈ ದೇಶಗಳಲ್ಲೂ ಕ್ರಾಂತಿಯ ಹಿಂದಿದ್ದ ಉದ್ದೇಶವನ್ನು ಬಲವಾದ ರಾಷ್ಟ್ರವಾಗಬೇಕೆಂಬ ಉದ್ದೇಶಕ್ಕೆ ಬಲಿಕೊಡಲಾಯಿತು. ಆದ್ದರಿಂದ ಇಂತಹ ಸಾಮಾಜಿಕ ತಳಮಳದ ಪ್ರಶ್ನೆಗಳನ್ನು ರಾಷ್ಟ್ರಕ್ಕೆ ರಾಕ್ಷಸ ಬಲ ತರುವ ದೃಷ್ಟಿಯಿಂದ (ಹಿಂದೆ ಜರ್ಮನಿ, ರಷ್ಯಾ ಮತ್ತು ಈಗ ಚೀನಾ ಮಾಡುವಂತೆ) ಲಾ ಅಂಡ್ ಆರ್ಡರ್‌ನ ಪ್ರಶ್ನೆಯಾಗಿ ಮಾತ್ರ ನೋಡಿ ಹತ್ತಿಕ್ಕುವುದು ಸಾಧ್ಯವಿಲ್ಲ; ಸಾಧುವೂ ಅಲ್ಲ. ಹಲವು ವರ್ಷಗಳಿಂದ ಅಹಿಂಸಾತ್ಮಕವಾಗಿ ಹೋರಾಡುತ್ತಿರುವ ಮೇಧಾಪಾಟ್ಕರ್ ನಮ್ಮ ಗಮನಕ್ಕೆ ಯಾಕೆ ಬಂದಿಲ್ಲ? ಅವರು ಉಪವಾಸ ಕೂರುತ್ತಾರೆ. ನರ್ಮದಾ ಅಣೆಕಟ್ಟಿನ ಎತ್ತರದಿಂದಾಗಿ ಮುಳುಗಿ ಹೋಗುವ ಗಿರಿಜನರ ಹಿತಕ್ಕಾಗಿ ಪ್ರವಾಹದಲ್ಲಿ ನಿಂತು ಹೋರಾಡುತ್ತಾರೆ. ಹೋರಾಡುವಾಗ ಶಿಸ್ತಿನಿಂದ ಕೂತು ಹಾಡುತ್ತಾರೆ. ತಮ್ಮ ಉದ್ವೇಗವನ್ನು ಗಾಂಧಿ ಮಾರ್ಗದಲ್ಲಿ ಸೂಚಿಸುತ್ತಾರೆ. ಆದರೆ ಯಾರೋ ಕೆಲವರು ಬಂದೂಕು ಹಿಡಿದು ಹೋರಾಡುತ್ತಾರೆ ಎಂದು ತಿಳಿದೊಡನೆಯೇ ನಾವು ಎಚ್ಚರಾಗುತ್ತೀವಿ. ಕಾನೂನುಬದ್ಧವಾದ ಆಕ್ರೋಶದ ದನಿ ಸಂವಿಧಾನ ಬದ್ಧರಾದ ನಮಗೆ ಕೇಳದೇ ಹೋದರೆ, ಹಿಂಸಾತ್ಮಕ ಹೋರಾಟ ಮಾತ್ರ ಪರ್ಯಾಯವಾಗಿ ಕಾಣುವುದಕ್ಕೆ ಚರಿತ್ರೆಯ ಉದ್ದಕ್ಕೂ ಪುರಾವೆಗಳು ಇಲ್ಲವೆ? ಈ ವಿಚಾರ ಕ್ರಮಕ್ಕೆ ಆಡಳಿತಾತ್ಮಕವೇ ಆದ ಸಮರ್ಥನೆ ದೊರೆತದ್ದು ಹೈದರಾಬಾದ್‌ನಲ್ಲಿ ಒಂದು ಉಪಕುಲಪತಿಯ ಆಯ್ಕೆ ಮಾಡುವ ಸಮಿತಿಯ ಸದಸ್ಯನಾಗಿ ನಾನು ಹೋದಾಗ. ಹಿರಿಯ ಅಧಿಕಾರಿಯೊಬ್ಬರು ಚಹಾದ ಜೊತೆ ಮಾತಿಗೆ ಸಿಕ್ಕರು. ನಿಮ್ಮಲ್ಲಿ ಗಿರಿಜನರ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಾಧ್ಯವಾಗಿದೆಯೇ ಎಂದು ಕೇಳಿದೆ. ಅದಕ್ಕವರು ಸರಳವಾಗಿ ಇದೊಂದು ಸರ್ವವಿದಿತ ಸತ್ಯ ಎನ್ನುವಂತೆ 'ಎಲ್ಲ ಕಡೆಯೂ

ಸಾಧ್ಯವಾಗಿಲ್ಲ ಆದರೆ ಎಲ್ಲೆಲ್ಲಿ ನಕ್ಸಲರು ಪ್ರಬಲರಾಗಿದ್ದಾರೋ ಅಲ್ಲೆಲ್ಲಾ ಗಿರಿಜನರಿಗೆ ಸರ್ಕಾರ ಕೆಲವು ಸಹಾಯಗಳನ್ನು ಮಾಡಬೇಕಾಗಿ ಬಂದಿದೆ.' ಅಂದರೆ ನಮ್ಮ ಪ್ರಜಾತಂತ್ರ ಬಂದೂಕಿಗೆ ಉತ್ತರಿಸುತ್ತದೆ. ಆದರೆ ಗಾಂಧಿ ಪ್ರೇರಿತರಾದ ಸತ್ಯಾಗ್ರಹಕ್ಕೆ ಅಲ್ಲ, ಮೇಧಾ ಪಾಟ್ಕರ್ ಜೊತೆ ಗಂಭೀರವಾಗಿ ತೊಡಗಿಕೊಂಡಿರುವ ಲೇಖಕಿ ಅರುಂಧತಿ ರಾಯ್ ಅವರಿಗೂ ಹೀಗೆಯೇ ಅನ್ನಿಸಿರಬಹುದು. ಆದರೆ ಹೀಗೆ ಅನ್ನಿಸುವುದು ದುರದೃಷ್ಟ.'[30]

ಹಿಂಸೆಯನ್ನು ಕೊನೆಗಾಣಿಸಲು ಹಿಂಸೆಯನ್ನೇ ಅವಲಂಬಿಸಿದ ಒಂದು ಗುಂಪು. ಹಿಂಸೆಯ ವಿರುದ್ಧ ಅಹಿಂಸೆಯ ಹೋರಾಟ ಮತ್ತೊಂದು ಗುಂಪು, ಆರ್ಥಿಕಾಭಿವೃದ್ಧಿಯ ನೆಪದಲ್ಲಿ ಕೋಟಿಗಟ್ಟಲೆ ಜನರನ್ನ ಹಿಂಸಿಸಿ ಕೆಲವೇ ಮಂದಿ ಸುಖಾಪೇಕ್ಷೆಯಿಂದ ಬದುಕುವುದರ ಆರ್ಥಿಕ ಚಿತ್ರಣ ಕ್ರೂರವಾದುದು. ಹಿಂಸೆಯನ್ನು ಕೊನೆಗಾಣಿಸಲು ಸಂಘಟಿತ ಹಿಂಸೆಯೊಂದೇ ಪರಿಹಾರವಾದರೆ, ಅದರ ಬುನಾದಿಯ ಮೇಲೆ ರಚಿತವಾದ ಹೊಸ ವ್ಯವಸ್ಥೆಯು ಹಿಂಸೆಯನ್ನೇ ಅವಲಂಬಿಸಿ ನಿಂತಿರುತ್ತದೆ. ಆದ್ದರಿಂದ ಅನಂತಮೂರ್ತಿಯವರು 'ಗಾಂಧಿಯ ಧ್ಯಾನದ ಬೆಳಕಿನಲ್ಲಿ ಮಾರ್ಕ್ಸ್'ನನ್ನು ಕಾಣುತ್ತಾರೆ. ಇದು ಅವಶ್ಯಕವೂ ವಾಸ್ತವವೂ ಆಗಿದೆ.

'ಅವಸ್ಥೆ' ಕುರಿತ ವಿಮರ್ಶೆಗಳ ಒಂದು ನೋಟ

ಕಿ.ರಂ.ನಾಗರಾಜರ ಪ್ರಕಾರ 'ನಮ್ಮ ಬದುಕನ್ನು ಆವರಿಸಿರುವ ಮುಖ್ಯ ಸಂವೇದನೆಗಳನ್ನು ಮುಖಾಮುಖಿಗೊಳಿಸುವುದು ಮತ್ತು ಸ್ವಗತದ ನೆಲೆಗಳಲ್ಲಿ ಶೋಧನೆಗೆ ಗುರಿಪಡಿಸುವುದು ಈ ಕಾದಂಬರಿಯ ವೈಶಿಷ್ಟ್ಯವಾಗಿದೆ. ರಾಜಕಾರಣದ ನೆಲೆಯಲ್ಲಿ ನಿಂತು ತನ್ನ ವ್ಯಕ್ತಿಗತ ಬದುಕಿನ ಸಮಾಹಿತ ಸ್ಥಿತಿಯನ್ನು ದಟ್ಟವಾಗಿ ಒಪ್ಪುವ ಕೃಷ್ಣಪ್ಪಗೌಡ ನಮ್ಮ (ಸಾಂಸ್ಕೃತಿಕ) ಬದುಕಿನ ದ್ವಂದ್ವಗಳನ್ನು ತಿಳಿದವನು. ಹೀಗಾಗಿ ಅವನ ಅದಮ್ಯ ಜೀವನೋತ್ಸಾಹದ ಸೆಲೆ ಊನಗೊಂಡ ದೇಹದ ಮಧ್ಯೆಯೂ ಚಿಗುರುವಂಥದ್ದು. ಕುಟುಂಬ ಜೀವನ, ರಾಜಕೀಯ ಜೀವನ ಮತ್ತು ಅವನ ಬಯಕೆ ನೆನಪುಗಳ ನೆಲೆಗಳು ಮನುಷ್ಯ ವ್ಯಕ್ತಿತ್ವದ ಎಲ್ಲ ಘರ್ಷಣೆಯನ್ನು ಒಳಗೊಳ್ಳುವಂತೆಯೇ ನಮ್ಮ ಸದ್ಯತನದ ಎಲ್ಲ ಕಂಪನಗಳನ್ನು ತನ್ನ ಕಕ್ಷೆಗೆ ಗುರಿಪಡಿಸಿಕೊಳ್ಳುತ್ತದೆ. ಅಲ್ಲದೆ ಮನುಷ್ಯನ ಬಹಿರ್ ಆವರಣದ ಪ್ರಕ್ರಿಯೆ ಮತ್ತು ಒಳತೋಟಿಯಲ್ಲಿನ ಪ್ರಕ್ರಿಯೆಗಳಿಗೆ ಇಲ್ಲಿನ ಎಲ್ಲ 'ವ್ಯಕ್ತಿಗಳು' ಮನೋಮಾದರಿಗಳಾಗುತ್ತಾರೆ. ಒಂದು ಸಾಮಾಜಿಕ ಸ್ಥಿತ್ಯಂತರದ ವಿಭಿನ್ನ 'ಅವಸ್ಥೆ' ಗಳಿಗೆ ಇಲ್ಲಿನ ನಡಾವಳಿಗಳು – ಸ್ಪಷ್ಟವೂ–ಅರ್ಥಸಂದಿಗ್ಧವೂ ಆದ ನೆಲೆಗಳನ್ನು ಸೃಷ್ಟಿಸುತ್ತವೆ.

ಕಾದಂಬರಿಯಲ್ಲಿನ ಸೃಷ್ಟಿಗೊಳ್ಳುವ ತಾತ್ವಿಕ ಸಂಘರ್ಷದ ನೆಲೆ ಒಂದು ವಾಗ್ವಾದವನ್ನು ನಿರ್ಮಾಣ ಮಾಡುವುದರಿಂದ ಸಮಸ್ಯೆಗಳನ್ನು ದಿನನಿತ್ಯದ ವಿವರಗಳಲ್ಲಿ ಶೋಧಿಸುವ ಪ್ರಯತ್ನ ನಡೆಯುತ್ತದೆ. ದೈನಂದಿನ ವಿವರಗಳು ಏಕೆ ಮುಖ್ಯವಲ್ಲ? ಎಂಬ ಪ್ರಶ್ನೆಯೊಂದಿಗೆ ಕಾದಂಬರಿಯಲ್ಲಿನ ಕೃಷ್ಣಪ್ಪಗೌಡ ತನ್ನ 'ದಿನಚರಿ ಪುಸ್ತಕದಲ್ಲಿ ಇವನ್ನು ಬರೆಯುವಾಗ ಕೃಷ್ಣಪ್ಪಗೌಡ ತಳೆಯುವ ವಿಭಿನ್ನ ನಿಲುವುಗಳು ಕಾದಂಬರಿಯ ಆಶಯವನ್ನು ನಿಚ್ಚಳಗೊಳಿಸುವಂತಿದೆ. ಕಡೆಗೆ ದಿನಚರಿ ಸುಟ್ಟು ಭಸ್ಮವಾಗುವ ಸಂದರ್ಭವೂ ಇಲ್ಲಿದೆ. ಕೃಷ್ಣಪ್ಪಗೌಡನ ವೈಯಕ್ತಿಕ ಪಾತಳಿಯ ಮತ್ತು ಸಾಮಾಜಿಕ ಪ್ರಕ್ರಿಯೆಯ ಸಾಕ್ಷಾತ್ ನೆಲೆಗಳು ಇಂಥ ದ್ವಂದ್ವಾತ್ಮಕ ಮನುಷ್ಯ ಸ್ವರೂಪದ ಮೇಲೆ ಬೆಳಕು ಚೆಲ್ಲುತ್ತದೆ. ಎಂಥದೇ ತಾತ್ವಿಕ ನೆಲೆಯಲ್ಲಿ ನಿಂತರೂ ದೈನಂದಿನ ನಡಾವಳಿಯಲ್ಲಿ ಮನುಷ್ಯನ ತೊಡಗುವಿಕೆಯೇ ಸಂಸ್ಕೃತಿಯ ಸಂಘರ್ಷದ ನಿರ್ಧಾರಕ ಅಂಶಗಳೆನ್ನುವಂತೆ – ಈ ಎರಡೂ ಪ್ರಪಂಚಗಳನ್ನು ಎಂದರೆ ದೈನಂದಿನ ನಡಾವಳಿಯಲ್ಲಿ ಮನುಷ್ಯನ ತೊಡಗುವಿಕೆಯೇ ಸಂಸ್ಕೃತಿಯ ಸಂಘರ್ಷದ ನಿರ್ಧಾರಕ ಅಂಶಗಳೆನ್ನುವಂತೆ – ಈ ಎರಡು ಪ್ರಪಂಚಗಳನ್ನು ಎಂದರೆ ದೈನಂದಿನ ನಡಾವಳಿ ಪ್ರಪಂಚ ಮತ್ತು ತೀವ್ರತೆಯನ್ನು ಬಯಸುವ ಮತ್ತೊಂದು ಹಂತ ಕಾದಂಬರಿಯ ಸರಣಿಯ ಮುಖ್ಯ ಅಂಗ. ಕೃಷ್ಣಪ್ಪಗೌಡ ಮತ್ತು ಅಣ್ಣಾಜಿ ಇವರ ನಡುವಣ ಸಂಬಂಧ ಮುಕ್ತ ಮತ್ತು ಗುಪ್ತ ಬದುಕಿನ ನೆಲೆಗಳನ್ನು ಪ್ರತಿಬಿಂಬಿಸುವಂತಿದೆ. ಕೃಷ್ಣಪ್ಪಗೌಡನಲ್ಲಿ ರಹಸ್ಯವಿಸ್ಮಯದ ನೆಲೆಯನ್ನು ಸದಾ ಜಾಗೃತಕ್ಕೆ ತರುವ ಮಹೇಶ್ವರಯ್ಯ, ಬೈರಾಗಿಯ ನಿಗೂಢ ವ್ಯಕ್ತಿತ್ವದಲ್ಲೇ ಪ್ರಕಟಗೊಳ್ಳುವ ಹಿಂಸ್ರಕ ಮತ್ತು ಮಾನವೀಯತೆಯ ಮುಖಗಳು. ಗೌರಿ ದೇಶಪಾಂಡೆ, ಅಣ್ಣಾಜಿಯ ಸಾವಿನಿಂದ ತತ್ತರಿಸುವ ಉಮೆ, ಜೀವನ ಚರಿತ್ರೆಯನ್ನು ಬರೆದುಕೊಳ್ಳುವ ನಾಗೇಶ, ನಾಗರಾಜ, ಕೃಷ್ಣಪ್ಪಗೌಡನ ಹೆಂಡತಿ ಸೀತ ಇವರೆಲ್ಲರೂ ಮನುಷ್ಯನ ಬದುಕಿನ ಗೂಢ ನೆಲೆಗಳನ್ನು ಮತ್ತು ಪ್ರಕಟಗೊಳ್ಳುವ ಬಹಿರಂಗದ ನೆಲೆಗಳನ್ನು ಪ್ರತಿನಿಧಿಸುತ್ತಾರೆ. ಕಾದಂಬರಿಯನ್ನು ಓದಿದ ಮೇಲೆ ಅಚ್ಚೊತ್ತಿ ನಿಲ್ಲುವ ಚಿತ್ರಗಳು–ಪ್ರಧಾನ ಅನುಭವದಿಂದ ಉಂಟಾಗಬೇಕಾಗುವ ಪರಿಣಾಮದಿಂದ ಬೇರ್ಪಡಿಸಲೂಬಹುದು ಇಲ್ಲವೇ ಅವಸ್ಥಾಂತರದ ಪ್ರಕ್ರಿಯಾತ್ಮಕ ನೆಲೆಗೆ ತರಲೂ ಬಹುದು. ಎದ್ದು ಕಾಣುವ ಚಿತ್ರಗಳು ಒಂದು ಪ್ರತ್ಯೇಕ ಘಟಕವೆನಿಸಿದರೂ ಅವುಗಳ ಕ್ರೌರ್ಯ, ದರ್ಪಗಳ ಅಮಾನುಷ ಪ್ರಪಂಚದ ಈ ಚಿತ್ರಣ ಸಮಕಾಲೀನ ಇರುವಿಕೆಗೆ ಕಾದಂಬರಿಕಾರ ರೂಪಿಸಿರುವ ಬಹುಮುಖ ರೂಪಕವಾಗಿದೆ.'

ಡಿ.ಆರ್.ನಾಗರಾಜರ ಪ್ರಕಾರ 'ರಾಜಕೀಯ ಮತ್ತು ಧಾರ್ಮಿಕತೆಗಳೆರಡೂ ವಸ್ತುವಾಗಿರುವ ಈ ವಿಶಿಷ್ಟ ಕಾದಂಬರಿಯಲ್ಲಿ ರಾಜಕೀಯಾನುಭವದ ಬಗ್ಗೆ ಅಪಾರ ತಾರತಮ್ಯ ಪ್ರಜ್ಞೆ, ಸೂಕ್ಷ್ಮ ತಿಳಿವಳಿಕೆ ಕಾಣುತ್ತೇವೆ. ಅಂದರೆ ರಾಜಕೀಯ ವ್ಯಕ್ತಿಗಳಲ್ಲಿ ಖೋಟಾ ಯಾರು, ಸಾಚಾ ಯಾರು ಎಂದು ಹೇಳುವಲ್ಲಿ, ರಾಜಕೀಯ ವ್ಯಕ್ತಿಗಳ ಆಂತರಿಕ ಒತ್ತಡಗಳನ್ನು ಗ್ರಹಿಸುವಲ್ಲಿ ಅನಂತಮೂರ್ತಿ ಯಶಸ್ವಿಯಾಗಿದ್ದಾರೆ. ಆದರೆ ಧರ್ಮ ಬಂದಾಗ ಮುಗ್ಧತೆ ಆವರಿಸಿ, ಖೋಟಾ ಯಾರು, ಸಾಚಾ ಯಾರು ತಿಳಿಯುವುದೇ ಇಲ್ಲ. ಈ ಸಮಸ್ಯೆ ಅವರ ವೈಚಾರಿಕ ಜಗತ್ತಿಗೂ ಹಲವಾರು ಸಾರಿ ಆವರಿಸುತ್ತದೆ.'

ಜಿ.ಎಸ್.ಆಮೂರರ ಪ್ರಕಾರ 'ಕನ್ನಡದಲ್ಲಿ ರಾಜಕೀಯ ವಸ್ತುವನ್ನಾಧರಿಸಿದ ಹಲವಾರು ಕಾದಂಬರಿಗಳು ಬಂದಿದ್ದರೂ ನಿಜವಾಗಿಯೂ 'ರಾಜಕೀಯ' ಎಂದು ಕರೆಯಬಹುದಾದ ಎಂದರೆ ರಾಜಕೀಯ ಶಕ್ತಿಗಳನ್ನು, ರಾಜಕೀಯ ಪ್ರೇರಣೆಗಳನ್ನು, ರಾಜಕೀಯ ಕ್ರಿಯೆಗಳನ್ನು ಅನಾವರಣಗೊಳಿಸಬಲ್ಲ ಕೃತಿಗಳು ತೀರ ವಿರಳ. ಇವುಗಳಲ್ಲಿ ನನಗೆ 'ಅವಸ್ಥೆ' ಮುಖ್ಯವೆನಿಸಿದೆ. ಜನತೆಯ ಮಧ್ಯದಿಂದಲೇ ಬಂದ ಸೋಶಿಯಲಿಸ್ಟ್ ನಾಯಕ ಕೃಷ್ಣಪ್ಪ ಎದುರಿಸುವ ನೈತಿಕ ಹಾಗೂ ರಾಜಕೀಯ ಸಮಸ್ಯೆಗಳನ್ನು 'ಅವಸ್ಥೆ' ತುಂಬ ಯಥಾರ್ಥವಾಗಿ ಗ್ರಹಿಸಿದೆ. ಇದೊಂದು ಸಮಕಾಲೀನ ರಾಜಕೀಯದ ಸಂಕೀರ್ಣ ಚಿತ್ರವಾಗಿದೆ.'

ಎನ್.ರಾಮಚಂದ್ರ ಉಡುಪ ಅವರ ಪ್ರಕಾರ 'ಅನಂತಮೂರ್ತಿಯವರ ಸೃಜನಶೀಲ ಶೋಧನೆಗೆ ಒಳಪಡುವ ರಾಜಕೀಯ ತೀರ ಭಿನ್ನವಾದದ್ದು. ಅದು ಆಧುನಿಕ ಮನುಷ್ಯನ ಸರ್ವಸ್ವವನ್ನು ವ್ಯಾಪಿಸುವಷ್ಟು ವಿಶಾಲ ಹರವು ಉಳ್ಳದ್ದು, ಅವನನ್ನು ರೂಪಿಸುವಷ್ಟು ಶಕ್ತಿಯುತವಾದದ್ದು, ಒಂದು ಕಾಲದಲ್ಲಿ ಧರ್ಮಕ್ಕಿಂತ ಸರ್ವವ್ಯಾಪ್ತಿತ್ವ ಈ ರಾಜಕೀಯಕ್ಕಿದೆ. ನಮ್ಮ ಸಂಸ್ಕೃತಿಯ ಅಂತಃಸತ್ವ ರಾಜಕೀಯವಾಗಿಯೂ ವ್ಯಕ್ತವಾಗಬೇಕಾದ ಚಾರಿತ್ರಿಕ ಅನಿವಾರ್ಯವನ್ನು ಸಾಹಿತ್ಯಿಕ ಚೌಕಟ್ಟಿನಲ್ಲಿ ಇಟ್ಟು ನೋಡುವ ಪ್ರಯತ್ನ ಮಾಡಿದವರು ಅನಂತಮೂರ್ತಿ. ಅವರ ಪ್ರಮುಖ ಕಾದಂಬರಿಗಳಾದ 'ಭಾರತೀಪುರ' ಮತ್ತು 'ಅವಸ್ಥೆ'ಯಲ್ಲಿ ಸಂಸ್ಕೃತಿಗಿರುವ ಈ ಒತ್ತಡಗಳನ್ನು ಸೃಜನಶೀಲವಾಗಿ ಎದುರಿಸುವ ಪ್ರಯತ್ನ ಇದೆ.

'ಅವಸ್ಥೆ' ನಮ್ಮ ರಾಜಕೀಯ ಸಂಸ್ಕೃತಿಯ ಇತಿಮಿತಿಗಳನ್ನು ತಳಮಟ್ಟ ಶೋಧಿಸುವ ಹಂಬಲವುಳ್ಳ ಕೃತಿ. ಕೃಷ್ಣಪ್ಪ ಪ್ರತಿನಿಧಿಸುವ ರಾಜಕೀಯ ಪರಿಸರ ಅತ್ಯಂತ

ವೈವಿಧ್ಯಮಯವಾದ ಜೀವನ ಧೋರಣೆಗಳಿಂದ ಶ್ರೀಮಂತಗೊಂಡದ್ದಾಗಿದೆ. ಕಾದಂಬರಿಯ ಕೇಂದ್ರ ಲಕ್ಷ್ಯವನ್ನು ಈ ಪರಿಸರವೇ ನಿಯಂತ್ರಿಸುತ್ತದೆ. ಈ ಪರಿಸರದ ಬೇರೆ ಬೇರೆ ಪದರುಗಳನ್ನು ಅವಲೋಕಿಸುವುದರ ಮೂಲಕ ಕೃಷ್ಣಪ್ಪನ ಹಾಗೂ ಕಾದಂಬರಿಯ ಪ್ರಮುಖ ಸೆಳೆತಗಳ ದರ್ಶನವಾಗಲು ಸಾಧ್ಯವಿದೆ.'

ಸಿ.ಎನ್.ರಾಮಚಂದ್ರನ್‌ರ ಪ್ರಕಾರ 'ರಾಜಕೀಯ ಕಾದಂಬರಿಯ ನೆಲೆಯಲ್ಲಿ 'ಅವಸ್ಥೆ' ಎಲ್ಲಾ ರಾಜಕೀಯ ಪ್ರಣಾಲಿಗಳ ಆಳದಲ್ಲಿ ಹುದುಗಿರತಕ್ಕ ದುರಂತ ಸತ್ಯದ ಬಗ್ಗೆ ಹೀಗೆ ಹೇಳುತ್ತದೆ. ಒಂದು ವ್ಯವಸ್ಥೆಯನ್ನು ಒಪ್ಪಿಕೊಂಡು ಅದರೊಳಗಿನಿಂದಲೇ ಅದನ್ನು ಬದಲಾಯಿಸಲು ಮಾಡುವ ಯತ್ನ ಅಲ್ಪಸ್ವಲ್ಪ ಯಶಸ್ವಿಯಾದರೂ ಕೊನೆಗೆ ವ್ಯವಸ್ಥೆಯನ್ನೇ ಮತ್ತೂ ಭದ್ರಪಡಿಸುತ್ತದೆ. ಇದಕ್ಕೆ ಬದಲಾಗಿ ವ್ಯವಸ್ಥೆಯ ಹೊರಗೆ ನಿಂತು ಅದರ ಬದಲಾವಣೆಗೆ ಪ್ರಯತ್ನಿಸಿದರೆ ಆಗಬಹುದಾದ ಅಲ್ಪಸ್ವಲ್ಪ ಬದಲಾವಣೆಯೂ – ವ್ಯವಸ್ಥೆಯನ್ನು ಒಪ್ಪಿಕೊಳ್ಳದೇ ಇರುವುದರಿಂದ – ಸಾಧ್ಯವಾಗುವುದಿಲ್ಲ. ಅಕಸ್ಮಾತ್ ಕಾಲದೇಶ ಕೂಡಿಬಂದು ಹೊರಗಿನಿಂದಾದ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿ ಒಂದು ವ್ಯವಸ್ಥೆ ಅಸ್ತಿತ್ವಕ್ಕೆ ಬರುತ್ತದೆ. ಹಾಗಿರುವಾಗ ವ್ಯವಸ್ಥೆಯಲ್ಲಿ ವ್ಯವಸ್ಥಾತೀತ ಸ್ಥಿತಿಯನ್ನು ತರುವುದು ಹೇಗೆ? ಅದು ಸಾಧ್ಯವಿದೆಯೇ? ಈ ತಾತ್ವಿಕ ಹಿನ್ನೆಲೆಯಲ್ಲಿ ನಾವು ಕಾದಂಬರಿಯ ಪಾತ್ರಗಳನ್ನು, ಘಟನೆಗಳನ್ನು ನೋಡಿದಾಗ ಅವುಗಳಲ್ಲಿ ಒಂದು ಅಪೂರ್ವ ವಿನ್ಯಾಸ ಕಾಣುತ್ತದೆ.

1) ಇರುವ ವ್ಯವಸ್ಥೆಯನ್ನು ಬಲಪಡಿಸಿ ಅದರಿಂದ ಲಾಭ ಪಡೆಯುತ್ತಿರುವವರು (ಮುಖ್ಯಮಂತ್ರಿ, ವೀರಪ್ಪ, ಚೆನ್ನವೀರಯ್ಯ ಮುಂತಾದವರು);

2)ವ್ಯವಸ್ಥೆಯನ್ನು ನಿರಾಕರಿಸಿ ಹೊರಗಿನಿಂದ ಅದನ್ನು ನಾಶಮಾಡಲು ಯತ್ನಿಸುತ್ತಿರುವವರು (ಅಣ್ಣಾಜಿ, ನಾಗರಾಜ ಇತ್ಯಾದಿ);

3) ವ್ಯವಸ್ಥೆಯನ್ನು ಒಪ್ಪಿಕೊಂಡು ಅದರೊಳಗಿನಿಂದಲೇ ಅದನ್ನು ಉತ್ತಮಗೊಳಿಸಲು ಯತ್ನಿಸುತ್ತಿರುವವರು (ಕೃಷ್ಣಪ್ಪ, ಗೌರಿದೇಶಪಾಂಡೆ ಮತ್ತು ಗೋಪಾಲರೆಡ್ಡಿ) ಮತ್ತು

4) ಕೊನೆಯದಾಗಿ ವ್ಯವಸ್ಥೆಗೂ ತಮಗೂ ಸಂಬಂಧವೇ ಇಲ್ಲದಂತೆ ಅದರಂಚಿನಲ್ಲಿರುವವರು (ಬೈರಾಗಿ, ಮಹೇಶ್ವರಯ್ಯ, ಹನುಮನಾಯ್ಕ, ಕೃಷ್ಣಪ್ಪನ ತಾಯಿ ಇತ್ಯಾದಿ).

ವ್ಯವಸ್ಥೆಯೊಡನಿರುವ ಈ ಅನೇಕ ಸಮೀಕರಣಗಳಲ್ಲಿ ಕೃತಿ ಕೆಲವನ್ನು ಸಂಪೂರ್ಣ ನಿರಾಕರಿಸಿ, ಕೆಲವನ್ನು ಕೇವಲ ಆಶ್ಚರ್ಯದಿಂದ ಕಂಡರೆ ಮತ್ತೆ ಕೆಲವನ್ನು ಅಪರಿಹಾರ್ಯವಾಗಿ ಕೆಲವು ಶರತ್ತುಗಳೊಡನೆ ಒಪ್ಪಿಕೊಳ್ಳುತ್ತದೆ. ಆಧುನಿಕ ಸಮಾಜ – ರಚನೆಗಳನ್ನು ಹಾಗೂ ವ್ಯವಸ್ಥೆಗಳನ್ನು ಅತ್ಯಂತ ಕಾಳಜಿಯಿಂದ ನಿಷ್ಠುರವಾಗಿ ಶೋಧಿಸುವ, ಪರೀಕ್ಷಿಸುವ ಕೆಲವೇ ಸಾಹಿತ್ಯ ಕೃತಿಗಳಲ್ಲಿ 'ಅವಸ್ಥೆ' ಮುಖ್ಯವಾದುದು.'

ಕೆ.ವಿ.ಸುಬ್ಬಣ್ಣ ಅವರ ಪ್ರಕಾರ 'ಹಿಂದುಳಿದ ಜಾತಿಯ ಬಡಗೇಣಿದಾರ ಕುಟುಂಬದಲ್ಲಿ ಹುಟ್ಟಿದ ಕೃಷ್ಣಪ್ಪನು ತಂದೆಯನ್ನು ಕಳೆದುಕೊಂಡು ತಾಯಿಯ ಜತೆ ಚಿಕ್ಕಪ್ಪನ ಮನೆಯಲ್ಲಿ ಪರದೇಶಿಯಾಗಿ ಬಾಲ್ಯವನ್ನು ಕಳೆದ. ಅವನನ್ನು ದನಕಾಯುವ ಕೆಲಸಕ್ಕೆ ಹಚ್ಚಿದ್ದರು. ಕಾಡು ಹೊಳೆ ಹಕ್ಕಿಗಳು ಅವನಿಗೆ ಪ್ರಿಯವಾದವು. ಮಧ್ಯೆ, ಕೆಳಜಾತಿ ಮತ್ತು ಬಡತನಗಳಿಂದ ಆಗಾಗ ಅವಮಾನ ಅನುಭವಿಸಬೇಕಾದಾಗ ಆತನ ರೊಚ್ಚು ಕೆರಳುತ್ತಿತ್ತು. ಊರಿನ ಬ್ರಾಹ್ಮಣ ಮೇಷ್ಟ್ರರೊಬ್ಬರು ಈತನ ಮೇಲೆ ಪ್ರೀತಿಯಿಟ್ಟುಕೊಂಡು ಅಷ್ಟಿಷ್ಟು ವಿದ್ಯೆಯ ಸಂಸ್ಕಾರ ಕೊಟ್ಟರು. ಮುಂದೆ ಮಹೇಶ್ವರಯ್ಯನೆಂಬ, ಅವಧೂತನಂತಿದ್ದ ಸದಾ ಸಂಚಾರಿ ವಿಲಕ್ಷಣ ವ್ಯಕ್ತಿಯು ಇವನನ್ನು ಕರೆದೊಯ್ದು ಜಿಲ್ಲಾ ಪಟ್ಟಣ ಶಿವಮೊಗ್ಗದಲ್ಲಿ ವಿದ್ಯಾಭ್ಯಾಸ ದೊರಕುವಂತೆ ಮಾಡಿದ. ಅಲ್ಲಿ ಕೂಡ, ಹೊರಗಿನ ಅವಮಾನ ಕ್ಷುದ್ರದೇವತೆಗಳನ್ನು ಗೆದ್ದು ತನ್ನ ಆಂತರ್ಯವನ್ನು ಕ್ಷುದ್ರವಾಗದ ಹಾಗೆ ಬಚಾಯಿಸಿಕೊಳ್ಳುವ ಆಂತರಿಕ ಸಾಧನೆಯೇ ಅವನ ಮುಖ್ಯ ಕಾಳಜಿಯಾಯಿತು. ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಮೈಸೂರು ಸ್ವಾತಂತ್ರ್ಯ ಚಳುವಳಿ (1947)ಯು ಪ್ರಾರಂಭವಾಯ್ತು. ಕೃಷ್ಣಪ್ಪನು ಕಾಲೇಜು ಬಿಟ್ಟು ಚಳುವಳಿಯಲ್ಲಿ ಧುಮುಕಿ ಚಲಾವಣೆಯ ಹೆಸರಾದ. ಈ ಕಾಲದಲ್ಲಿ ಆತನಿಗೆ ಅಣ್ಣಾಜಿ ಎಂಬೊಬ್ಬ ಕಮ್ಯುನಿಸ್ಟ್ ಕ್ರಾಂತಿಕಾರಿಯ ಮತ್ತು ಕುಲೀನವಲ್ಲದ ಕುಟುಂಬದ ಗೌರಿಯೆಂಬ ಸಹಪಾಠಿಯ ಒಡನಾಟ ಬೆಳೆಯಿತು. ಗೌರಿಯು ಈತನ ವ್ಯಕ್ತಿತ್ವಕ್ಕೆ ನೈತಿಕ ಸ್ಥೈರ್ಯ ತಂದುಕೊಟ್ಟಳು. ಅಣ್ಣಾಜಿ ತುಂಬ ಆಕರ್ಷಕನಾಗಿದ್ದ ಆದರೆ, ರಾಜಕೀಯ ಚಟುವಟಿಕೆಗಳ ಬಹಿರಂಗ ಕ್ರಿಯೆಯೇ ಎಲ್ಲಕ್ಕೂ ಪರಿಹಾರವೆಂಬ ಆತನ ಸಿದ್ಧಾಂತದಲ್ಲಿ, ಕ್ಷುದ್ರತೆಯನ್ನು ಮೀರಬೇಕೆಂಬ ತನ್ನ ಆಂತರಿಕ ಹಂಬಲಕ್ಕೆ ಸ್ಥಾನವಿರಲಿಲ್ಲ. ಕೆಲದಿನಗಳಲ್ಲಿ ಅಣ್ಣಾಜಿಯನ್ನು ಬಂಧಿಸಿ ವಾರಂಗಲ್ಲಿಗೆ ಒಯ್ದರು. ಕಳವಳಗೊಂಡ ಕೃಷ್ಣಪ್ಪನು ಅಲ್ಲಿ ಹೋಗಿ ವಿಚಾರಿಸುವಾಗ, ಈಗಾಗಲೇ ಪೋಲಿಸರು ಆತನನ್ನು ಅಮಾನುಷವಾಗಿ ಕೊಂದು ಹಾಕಿದ್ದಾರೆನ್ನುವುದು ಗೊತ್ತಾಗುತ್ತದೆ.

ಕೃಷ್ಣಪ್ಪನು ಕ್ರೋಧತಪ್ತನಾಗಿ ಪೋಲೀಸು ಠಾಣೆಯಲ್ಲಿ ಅಧಿಕಾರಿಗಳ ಮೇಲೆ ಏರಿ ಹೋಗಿ ಬಂಧಿತನಾಗುತ್ತಾನೆ. ಅಲ್ಲಿ, ಅಣ್ಣಾಜಿಯ ರಹಸ್ಯಗಳು ಈತನಿಂದ ದೊರಕಬಹುದೆಂದು ಈತನಿಗೆ ಚಿತ್ರಹಿಂಸೆ ಕೊಡುತ್ತಾರೆ. ಅಂತೂ ಕೊನೆಯಲ್ಲಿ ಮಹೇಶ್ವರಯ್ಯನ ಪ್ರಯತ್ನಗಳಿಂದ ಹೇಗೋ ಪಾರಾಗಿ ಬರುತ್ತಾನೆ. ಈಗ ಆತನಿಗೆ, ರಾಜಕೀಯ ವ್ಯವಸ್ಥೆಯ ಕ್ರೌರ್ಯವೆಂಥದೆಂಬುದು ಅರಿವಾಗುತ್ತದೆ. ತತ್‌ಕ್ಷಣದಲ್ಲಂತೂ ರಾಜಕೀಯ ಕ್ರಿಯೆಯೇ ಪರಿಹಾರ ಎನ್ನಿಸಿ ಊರಿಗೆ ಮರಳುತ್ತಾನೆ. ಹಳ್ಳಿಯ ಗೇಣಿ ರೈತರನ್ನು ಸಂಘಟಿಸಿ ಚಳುವಳಿ ನಡೆಸುತ್ತಾನೆ. ಈ ಚಳುವಳಿಯಿಂದಾಗಿ ಜನಪ್ರಿಯ ರಾಜಕೀಯ ನಾಯಕನಾಗಿ ರೂಪುಗೊಳ್ಳುತ್ತಾನೆ. ತನ್ನದೇ ಸಮಾಜವಾದಿ ಪಕ್ಷದ ವತಿಯಿಂದ ಚುನಾವಣೆಗೆ ನಿಂತು, ಆಡಳಿತ ಪಕ್ಷವನ್ನು ಸೋಲಿಸಿ ರಾಜ್ಯ ವಿಧಾನಸಭೆಗೆ ಆಯ್ಕೆಯಾಗುತ್ತಾನೆ. ವಿಧಾನಸಭೆಯಲ್ಲಿ ವಿರೋಧ ಪಕ್ಷದವನಾಗಿ ಕೃಷ್ಣಪ್ಪನ ವರ್ಚಸ್ಸು ಬೆಳೆಯುತ್ತದೆ. ಮತ್ತೊಂದು ಚುನಾವಣೆಯಲ್ಲೂ ಸುಲಭವಾಗಿ ಆಯ್ಕೆಗೊಳ್ಳುತ್ತಾನೆ. ಈತನ ಅಸಾಧಾರಣ ಜನಪ್ರಿಯತೆಯಿಂದಾಗಿ ಆಡಳಿತಪಕ್ಷದವರೂ ಭಯದಿಂದ ಈತನನ್ನು ಗೌರವಿಸುವಂತಾಗುತ್ತದೆ. ಬಹಿರಂಗ ಹೋರಾಟ ಮತ್ತು ಆಂತರಿಕ ಶೌಚಗಳೆರಡರ ಬಗೆಯೂ ಸಮಾನವಾದ ನಿಷ್ಠೆಯನ್ನಿಟ್ಟುಕೊಂಡು ಅಸಾಧಾರಣವಾದ ವ್ಯಕ್ತಿತ್ವವನ್ನು ರೂಢಿಸಿಕೊಳ್ಳುತ್ತಲೆ, ನಡು ನಡುವೆ, ಮಾನವ ದೌರ್ಬಲ್ಯಗಳಿಗೆ ಬಲಿಯಾಗಿ ಕೆಲವು ಕಾಲ ಹೆಂಡ ಹೆಣ್ಣುಗಳ ಲಂಪಟನೂ ಆಗಿ, ತನ್ನ ಖ್ಯಾತಿಯ ಉತ್ತುಂಗದಲ್ಲಿ, ಇನ್ನೂ ಐವತ್ತರ ವಯಸ್ಸು ದಾಟುವ ಮೊದಲೇ ಪಾರ್ಶ್ವ ರೋಗ ಬಡಿದು ಹಾಸಿಗೆ ಹಿಡಿಯುತ್ತಾನೆ. ಪಾರ್ಶ್ವ ಪೀಡೆಯಿಂದ ಕೃಷ್ಣಪ್ಪನು ನಿಧಾನವಾಗಿ ಎಚ್ಚತ್ತುಕೊಳ್ಳುತ್ತಿರುವ ಹಾಗೆ, ರಾಜ್ಯದ ರಾಜಕೀಯದಲ್ಲಿ ಅನಿರೀಕ್ಷಿತ ಬೆಳವಣಿಗೆಗಳಾಗುತ್ತವೆ. ಒಂದು ಹಂತದಲ್ಲಿ, ಎಲ್ಲ ವಿರೋಧ ಪಕ್ಷಗಳ ಏಕೈಕ ನಾಯಕನಾಗಿ ಈತನೇ ಮುಖ್ಯಮಂತ್ರಿಯಾಗಬೇಕೆಂಬ ಸೂಚನೆ ಬರುತ್ತದೆ. ಜನಹಿತಕ್ಕಾಗಿ ಆ ಜವಾಬ್ದಾರಿಯನ್ನು ಒಪ್ಪಿಕೊಳ್ಳಲೇಬೇಕೆಂಬುದು ಕೃಷ್ಣಪ್ಪನ ಅನುಯಾಯಿಗಳ ಒತ್ತಾಯ. ಅವರೆಲ್ಲರೂ ಮುಖ್ಯವಾಗಿ ತಮತಮಗೆ ದೊರಕುವ ಮುಂದಿನ ಸ್ಥಾನಗಳ ಮೇಲೆ ಕಣ್ಣಿಟ್ಟವರೇ. ಆದರೆ ಕೃಷ್ಣಪ್ಪನು ಮಾತ್ರ ಮುಖ್ಯಮಂತ್ರಿ ಪದವಿಯ ಬಗ್ಗೆ ಚಿಂತಿಸುವ ಬದಲು, ಈ ರಾಜಕೀಯ ಕ್ರಿಯೆಗಳ ರೂಕ್ಷತೆಯಲ್ಲಿ ತಾನೂ ಸೂಕ್ಷ್ಮವಾಗಿ ಭ್ರಷ್ಟತೆಯೊಳಕ್ಕೆ ಇಳಿದು ಹೋಗುತ್ತಿದ್ದೇನಲ್ಲ ಅಂತ ಚಿಂತಿಸತೊಡಗುತ್ತಾನೆ. ಅಷ್ಟರಲ್ಲಿ ಹಿಂದಣ ರಾತ್ರಿ ಒಬ್ಬ ಹುಡುಗಿಯ ಮೇಲೆ ಕ್ರೂರ ಅತ್ಯಾಚಾರವೂ ನಡೆದು ಆಕೆ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಬರುತ್ತದೆ. ಅತ್ಯಾಚಾರದಲ್ಲಿ ಭಾಗಿಯಾದ ಇಬ್ಬರು ಹುಡುಗರಲ್ಲಿ ಒಬ್ಬನು ತನ್ನ ತೀರ ಹತ್ತಿರದ ರಾಜಕೀಯ ಅನುಯಾಯಿಯ ಮಗನೇ

ಎಂಬ ಗುಮಾನಿಯೂ ಬರುತ್ತದೆ. ಆ ಕ್ಷಣದಲ್ಲಿ ಕೃಷ್ಣಪ್ಪನು ಮುಖ್ಯಮಂತ್ರಿ ಪದವಿಯ ಯೋಚನೆಯನ್ನು ತಳ್ಳಿಬಿಟ್ಟು ತನ್ನ ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತಾನೆ. ಈಗ ಪುನಃ ತನ್ನ ಸಮೀಪಕ್ಕೆ ಬಂದು ಕೆಲದಿನ ಜತೆಗಿದ್ದು ಸಂಪ್ರಾಣಗೊಳಿಸಿಕೊಟ್ಟ ಬಾಲ್ಯದ ಗೆಳತಿ ಗೌರಿಯ ಸನ್ನಿಧಿಯಲ್ಲಿ ಹೀಗೆ ನಿರ್ಧರಿಸುತ್ತಾನೆ: ಕೊಂಚ ಗುಣವಾಗುತ್ತೇನೆ, ಊರಿಗೆ ಮರಳುತ್ತೇನೆ, ಹೋಗಿ ಅಸಂಘಟಿತರಾಗಿರುವ ದಲಿತರನ್ನು ಸಂಘಟಿಸುತ್ತೇನೆ, ಬಾಲ್ಯದ ದಿನಗಳ ಆ ಹೊಳೆಗುಡ್ಡಕಾಡುಗಳಲ್ಲಿ ಆಗ ಕಂಡು ಬೆರಗುಪಟ್ಟ ಬಣ್ಣ ಬಣ್ಣದ ಹಕ್ಕಿಗಳನ್ನು ಮತ್ತೆ ಕಂಡು ಪುನರುಜ್ಜೀವಗೊಳ್ಳುತ್ತೇನೆ. ಅಂತ 'ಅವಸ್ಥೆ'ಯಲ್ಲಿ ಮಹೇಶ್ವರಯ್ಯನೂ ಅಣ್ಣಾಜಿಯೂ ಕೃಷ್ಣಪ್ಪನನ್ನು ರೂಪಿಸುತ್ತಾರೆ. ನಾರಾಯಣ ಗುರುವೂ ಮಾರ್ಕ್ಸ್‌ವಾದವೂ ಕೂಡಿ ಹೊಸ ಕೇರಳದ ಸಂವೇದನೆಯನ್ನು ರೂಪಿಸಿದ ಥರ.'

ಒಟ್ಟಾರೆ ಈ ಎಲ್ಲ ವಿಮರ್ಶೆಗಳನ್ನು ಗಮನಿಸಿದಾಗ ಸಮಾಜವಾದಿ ನೋಟಕ್ರಮದಿಂದ ವಿವರಿಸಿದ ವಿಮರ್ಶಾಕ್ರಮ ಕೆಲವೆನ್ನಬಹುದು. ಸಮಾಜವಾದಿಗಳಾದ ಕಿ.ರಂ.ನಾಗರಾಜ, ಕೆ.ವಿ.ಸುಬ್ಬಣ್ಣ, ಡಿ.ಆರ್.ನಾಗರಾಜರ ವಿಮರ್ಶೆಗಳು ಈ ಮಾದರಿಯವು. ಕಿ.ರಂ.ನಾಗರಾಜರು ಪ್ರತಿನಿತ್ಯದ ಪ್ರತಿಕ್ಷಣಗಳು ಮುಖ್ಯ ಎಂದು ಕಾದಂಬರಿಯ ಅನ್ವೇಷಣಾ ಕ್ರಮವನ್ನು ವಿವರಿಸಿದರೆ ಡಿ.ಆರ್.ನಾಗರಾಜರು ಕಾದಂಬರಿಕಾರರ ತಾತ್ವಿಕ ಹಿನ್ನೆಲೆಯನ್ನು ವಿವರಿಸುತ್ತಾರೆ. ಜಿ.ಎಸ್.ಆಮೂರ, ಎನ್.ರಾಮಚಂದ್ರ ಉಡುಪ, ಸಿ.ಎನ್.ರಾಮಚಂದ್ರನ್, ಕಾದಂಬರಿಯ ವಸ್ತು ಹಾಗೂ ಅದು ಒಳಗೊಳ್ಳುವ ಸಾಮಾಜಿಕ ಆಯಾಮವನ್ನು ವಿವರಿಸಿದರೆ ಕೆ.ವಿ.ಸುಬ್ಬಣ್ಣನವರು ಕಾದಂಬರಿಯ ರಾಜಕೀಯ ಚಿತ್ರಣ ಮತ್ತು ಅದು ಕಟ್ಟಿಕೊಡುವ ನಮ್ಮ ಸುತ್ತಣ ಬದುಕನ್ನು ವಿಶ್ಲೇಷಿಸಿದ್ದಾರೆ. ಈ ಎಲ್ಲಾ ವಿಮರ್ಶೆಗಳು ಕಾದಂಬರಿಯ ತೂಕವನ್ನು ಹೆಚ್ಚಿಸಿವೆ. ಆದರೆ ಈ ವಿಮರ್ಶೆಗಳು ಗಮನಿಸದಿರುವ ಒಂದು ಅಂಶವನ್ನು ನೋಡುವುದಾದರೆ ಕೃಷ್ಣಪ್ಪ ವಾರಂಗಲ್ ಜೈಲಿನಲ್ಲಿ ಕ್ರೂರವಾಗಿ ಹಿಂಸೆಯನ್ನು ಅನುಭವಿಸುತ್ತಿದ್ದಂಥ ಸಂದರ್ಭದಲ್ಲಿ 'ಕಣ್ಣು ತೆರೆದಾಗ ಇಡೀ ಅಂಗಳದಲ್ಲಿ ಏನೋ ಮೃದುವಾಗಿ ಬಿರಿದುಕೊಳ್ಳಲು ಸಿದ್ಧತೆ ನಡೆಯುತ್ತಿದೆ ಎನ್ನಿಸುವಂತಿತ್ತು. ಕುರ್ಚಿ ಅಲ್ಲೇ ಇತ್ತು, ತ್ರೀ ಎಕ್ಸ್ ರಮ್ಮಿನ ಬಾಟಲಿ ಗ್ಲಾಸುಗಳೂ ಇದ್ದವು. ದೀಪಗಳನ್ನೆಲ್ಲ ಆರಿಸಿದ್ದರೂ ಅವು ಅಸ್ಪಷ್ಟವಾಗಿ ಕನಸಿನಲ್ಲಿ ಎಂಬಂತೆ ಕಾಣುತ್ತಿದ್ದವು. ಆಕಾಶದಲ್ಲಿ ಸ್ಫುಟವಾದ ನಕ್ಷತ್ರಗಳು ಮಂದವಾಗುತ್ತ ಹೋದವು. ಚಿಲಿಪಿಲಿ ಶಬ್ದ, ಏನೋ ಫಲವತ್ತಾಗುತ್ತಿರುವುದರ ಸೂಚನೆ, ಕೃಷ್ಣಪ್ಪ ದೀರ್ಘವಾಗಿ ಉಸಿರೆಳೆದುಕೊಂಡ, ಒಂದುದೊಡ್ಡ ಸುಖ ತನಗೀಗ ಸಿಗುತ್ತದೆ ಎಂಬ ಆಶ್ವಾಸನೆ ಕೊಡುವಂಥ ವಾಸನೆಯನ್ನು ಗಮನಿಸಿದ. ಈ ಅಂಗಳದಲ್ಲಿ ಬೆಳೆದಿದ್ದ

ಒಂದು ಗುಂಪು ಚೆಂಡು ಹೂವಿನ ಗಿಡಗಳು ಕಂಡವು. ಅಂಗಳದಲ್ಲಿ ಬೆಳೆದುಕೊಂಡ ಒಂದೊಂದು ಕಾಡು ಗಿಡವನ್ನೂ ಕೃತಜ್ಞತೆಯಿಂದ ನೋಡುತ್ತ ಬಿರಿಯುವ ಮುಹೂರ್ತಕ್ಕಾಗಿ ಕಾದ.'[31] ಈ ಭಾಗ ವೈಕಂ ಮಹಮದ್ ಬಷೀರ್ ಬರೆದಿರುವ 'ಗೋಡೆಗಳು' ಕಥೆಯನ್ನು ನೆನಪಿಸುತ್ತದೆ. ಬದುಕಿನ ಚೈತನ್ಯವನ್ನು ಪಡೆಯುವ ಕ್ರಮ ಲೋಹಿಯಾ ಅವರ 'ಯೋಗದಲ್ಲಿ ಒಂದು ಅಧ್ಯಾಯ' ಲೇಖನದ ಪ್ರಭಾವದಿಂದಲೂ ರೂಪುಗೊಂಡಿದೆ. ಎಂತಹ ಕ್ರೂರ ಹಿಂಸೆಯಲ್ಲೂ ಮನಸ್ಸು ಚೈತನ್ಯದ ಚಿಲುಮೆಯನ್ನು ಕಳೆದುಕೊಳ್ಳದಿರುವ ಈ ಶಕ್ತಿ ತಮ್ಮೊಳಗಿದ್ದುದನ್ನು ಲೋಹಿಯಾ ಲಾಹೋರ್ ಸೆರೆಮನೆಯಲ್ಲಿ ಬಂಧಿತರಾದಾಗ ಗುರುತಿಸಿಕೊಳ್ಳಲೆತ್ನಿಸುತ್ತಾರೆ. ಕೃಷ್ಣಪ್ಪಗೌಡನ ಈ ಅನುಭವ ಲೋಹಿಯಾ ಬರಹದ ರೂಪಕ ರೂಪದಂತಿದೆ.

ಟಿಪ್ಪಣಿಗಳು

1. ಯು.ಅರ್.ಅನಂತಮೂರ್ತಿ: 'ಅವಸ್ಥೆ'; ಅಕ್ಷರ ಪ್ರಕಾಶನ, ಹೆಗ್ಗೋಡು, ನಾಲ್ಕನೇ ಮುದ್ರಣ 2004, ಪುಟ: 9
2. ಅದೇ ಪುಟ : 11
3. ಅದೇ ಪುಟ : 12
4. ಅದೇ ಪುಟ : 14
5. ಅದೇ ಪುಟ : 18
6. ಅದೇ ಪುಟ : 91
7. ಅದೇ ಪುಟ : 92
8. ಅದೇ ಪುಟ : 98
9. ಅದೇ ಪುಟ : 99
10. ಅದೇ ಪುಟ : 99
11. ನಟರಾಜ್ ಹುಳಿಯಾರ್ : (ಸಂ) ರಾಮಮನೋಹರ ಲೋಹಿಯಾ ಚಿಂತನೆ ಸಂಪುಟ 7, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008.
12. ಹಸನ್ ನಯೀಂ ಸುರಕೋಡ : (ಅನು) 'ಜಾತಿ ಪದ್ಧತಿ' ಮುನ್ನುಡಿ, ಪಿ.ಲಂಕೇಶ್ ಪತ್ರಿಕೆ ಪ್ರಕಾಶನ, 1986.
13. ಪುಟ : 28
14. ಅದೇ ಪುಟ

15. ಪುಟ : 28, 29
16. ಪುಟ : 30
17. ಅದೇ
18. ನಟರಾಜ್ ಹುಳಿಯಾರ್ (ಅನು) ಜಾತಿ, ಲಿಂಗ ಕುರಿತ ಪ್ರತ್ಯೇಕತೆ, 'ಸ್ವಾತಂತ್ರ್ಯದ ಅಂತರ್ಜಲ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 1996.
19. ಅದೇ
20. ಅದೇ
21. 'ಅವಸ್ಥೆ' ಪುಟ: 55
22. ಪುಟ 55,56
23. ಪುಟ 49
24. ಪುಟ, 109
25. ನಟರಾಜ್ ಹುಳಿಯಾರ್ (ಸಂ) ರಾಮಮನೋಹರ ಲೋಹಿಯಾ ಚಿಂತನೆ (ಸಂ:7)
26. ಅವಸ್ಥೆ ಪುಟ : 131
27. ಅದೇ
28. ಅದೇ
29. ಪುಟ : 71
30. ಯು.ಆರ್.ಅನಂತಮೂರ್ತಿ (ಲೇಖನ) ಬುಧವಾರ 23, ಜೂನ್ 2010, ಪ್ರಜಾವಾಣಿ.
31. ಪುಟ : 81
32. ಜಿ.ಎಸ್.ಶಿವರುದ್ರಪ್ಪ (ಸಂ) ಸಾಹಿತ್ಯವಾರ್ಷಿಕ : ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, 1978.
33. ಅಗ್ರಹಾರ ಕೃಷ್ಣಮೂರ್ತಿ (ಸಂ) ಸಂಸ್ಕೃತಿ ಕಥನ : ಡಿ.ಆರ್.ನಾಗರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಾಶನ, 2006.
34. ಜಿ.ಎಸ್.ಆಮೂರ: ಸಾತ್ವಿಕ ಪಥ, ಪ್ರಿಯದರ್ಶಿನಿ ಪ್ರಕಾಶನ, 1995.
35. ಟಿ.ಪಿ.ಅಶೋಕ (ಸಂ) ಕೆ.ವಿ.ಸುಬ್ಬಣ್ಣ 'ಆಯ್ದ ಬರಹಗಳು', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1992
36. ಮುರಳೀಧರ ಉಪಾಧ್ಯ ಹಿರಿಯಡಕ (ಸಂ) ಯು.ಆರ್.ಅನಂತಮೂರ್ತಿ (ಜೀವನ ಹಾಗೂ ಕೃತಿಗಳ ಸಮೂಹಶೋಧ) ಕರ್ನಾಟಕ ಸಂಘ, ಪುತ್ತೂರು, 2000.
37. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004.

ಅಧ್ಯಾಯ : 5

ಪೂರ್ಣಚಂದ್ರ ತೇಜಸ್ವಿಯವರ 'ಚಿದಂಬರ ರಹಸ್ಯ' ಲೋಹಿಯಾ ತಾತ್ವಿಕತೆಯ ಹಿನ್ನೆಲೆಯಲ್ಲಿ ಒಂದು ನೋಟ

ಬದಲಾವಣೆಗೆ ಅಗತ್ಯವಾದ ಮೂಲಭೂತ ಕ್ರಾಂತಿಯನ್ನು ಒಡಲಲ್ಲಿರಿಸಿಕೊಂಡು 'ಚಿದಂಬರ ರಹಸ್ಯ' ಕಾದಂಬರಿ ಆರಂಭವಾಗುತ್ತದೆ. "ಒಟ್ಟಿನಲ್ಲಿ ಕ್ರಾಂತಿ ಆಗಬೇಕಪ್ಪಾ.!"[1] ಆರಂಭದ ಈ ಸಾಲು ಸಮಾಜದಲ್ಲಿನ ಎಲ್ಲಾ ಸಮಸ್ಯೆಗಳಿಗೂ ಕ್ರಾಂತಿಯೊಂದೇ ಪರಿಹಾರ ಎನ್ನುವ ಸೂಚನೆಯಂತಿದೆ. ಒಂದು ವ್ಯವಸ್ಥೆಯನ್ನು, ಆರೋಗ್ಯವಂತ ಸಮಾಜವನ್ನು ನಿರ್ಮಿಸಬೇಕಾದರೆ ಶಿಕ್ಷಕವರ್ಗ ಮಹತ್ವದ ಪಾತ್ರ ಎಂಬುದು ಡಾ॥ರಾಮಚಂದ್ರನ ಪಾತ್ರದಿಂದ ತಿಳಿದುಬರುತ್ತದೆ. ಕೃಷ್ಣಪ್ಪಗೌಡ, ಸುಲೇಮಾನ್‌ಬೇರಿ ಇವರ ನಡುವಿನ ದ್ವೇಷದ ರಾಜಕಾರಣಕ್ಕೆ ಇಡೀ ಒಂದು ಜನಪದ ಹಾಳಾದರೆ, ಕತೆಗಾರ ಜಯರಾಂನಿಗೂ ಹಾಳಾಗಿ ಹೋಗಲಿ ಎನ್ನುವಷ್ಟು ವ್ಯಗ್ರತೆ ಹುಟ್ಟುವುದು ಸಮಕಾಲೀನ ದುರಂತವಾಗಿದೆ. ಸಂಶೋಧನ ಕೇಂದ್ರದ ಪಾಟೀಲರ ವಿಜ್ಞಾನದ ವಿಚಾರಪರತೆ ಯಂತ್ರ ತಂತ್ರ ಮಾಟಮಂತ್ರಗಳಲ್ಲಿ ಹುದುಗುವುದು, ಸಂಶೋಧನೆಯಲ್ಲಿ ನಿರಾಸಕ್ತಿ ಮೂಡುವಂತಾಗುವುದು ಇಂದು ಸಂಶೋಧನ ಸಂಸ್ಥೆಗಳಿಗೆ ಒದಗಿರುವ ದುರಂತ ಚಿತ್ರಣವಾಗಿದೆ. ತೇಜಸ್ವಿಯವರು 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಕಲನದ ಮುನ್ನುಡಿಯಲ್ಲಿ ಲೋಹಿಯಾ ತತ್ವಚಿಂತನೆ ತಮ್ಮ ಬರವಣಿಗೆ ಮೇಲೆ ಪ್ರಭಾವ ಬೀರಿರುವುದನ್ನು ಹೇಳಿದ್ದಾರೆ, ಹಾಗೆಯೇ ಒರಿಜಿನಲ್ ಚಿಂತಕ ಎಂದು ಕರೆದಿದ್ದಾರೆ. ಲೋಹಿಯಾ ಅವರ ತಾತ್ವಿಕತೆಯ ಹಿನ್ನೆಲೆಯಲ್ಲಿ ಚಿದಂಬರ ರಹಸ್ಯ ಕಾದಂಬರಿಯನ್ನು ಪರಿಶೀಲಿಸಬಹುದಾಗಿದೆ.

ಸಮಾಜವಾದಿ ಪ್ರಜ್ಞೆ ಮತ್ತು ಹೊಸತಲೆಮಾರು: ಸಮಾಜವಾದೀ ಯುವಜನಸಭಾದಿಂದಾಗಿ ಅನೇಕ ಯುವಕರು ಪ್ರಭಾವಿತರಾಗಿ ಬದಲಾವಣೆಗೆ ಇಳಿದ ರೀತಿಯಂತೆ ತೇಜಸ್ವಿಯವರು ಈ ತರುಣ ಗುಂಪನ್ನು ಸೃಷ್ಟಿಸಿದ್ದಾರೆ. ರಾಮಪ್ಪ, ಚಂದ್ರ, ಜೋಸೆಫ್ ಅಂಗಾರ, ರಮೇಶ, ರಫಿ, ಈ ಪುಟ್ಟ ತರುಣಗುಂಪು ಸಮಾಜವಾದಿ ಪ್ರಜ್ಞೆಯನ್ನು ತಮಗರಿವಿಲ್ಲದೆಯೇ ಬೆಳೆಸಿಕೊಳ್ಳುತ್ತ ರೂಪುಗೊಳ್ಳುತ್ತಿರುವ ಹೊಸತಲೆಮಾರಾಗಿದೆ. ತಮ್ಮ ಸುತ್ತಲಿನ ಕ್ಷುದ್ರ ವ್ಯವಸ್ಥೆಯನ್ನು ಬದಲಾಯಿಸಲು ಕ್ರಾಂತಿ ಒಂದೇ ಪರಿಹಾರ ಎಂದು ಈ ಹುಡುಗರು ನಂಬುತ್ತಾರೆ. ರಾಮಚಂದ್ರನ ಉಪನ್ಯಾಸದಿಂದ ಕ್ರಮೇಣ ಕೆಸರೂರಿನ ಸಮಾಜ ಹಾಳಾಗಲು ರಾಜಕಾರಣಿಗಳು, ಅಧಿಕಾರಶಾಹಿ ಸರ್ಕಾರ, ತಹಶೀಲ್ದಾರ, ಬಿಡಿಓ, ಡಿಸಿ, ಸಂಪನ್ನ

ಶ್ರೀಮಂತರು, ಬಡ್ಡಿ ವಸೂಲಿ ಮಾರ್ವಾಡಿಗಳು ಎಂದು ಈ ಹುಡುಗರು ತಿಳಿಯುತ್ತಾರೆ. ಈ ತರುಣ ಗುಂಪಿನಂತೆ ಕಾಲೇಜಿನ ಸಮಾರಂಭಗಳಲ್ಲಿ ಸ್ವಾಗತಗೀತೆ ಹಾಡುವ ವನಜಾಕ್ಷಿ, ಪಾಟೀಲರನ್ನು ಪ್ರಶ್ನಿಸುವ ಶಾಮಲ, ಮನೆಯಲ್ಲಿನ ಅಶಾಂತಿಯಿಂದಾಗಿ ಸಂಪತ್ತಿನ ಮೇಲೆ ತಿರಸ್ಕಾರ ಹೊಂದುವ ಜಯಂತಿ ಹೊಸ ತಲೆಮಾರಿಗೆ ಸೇರಿದವರಾಗಿದ್ದಾರೆ. ದೇಶದಲ್ಲಿ ಏನನ್ನಾದರೂ ಮಾಡಲು ಸಾಧ್ಯವಾದರೆ ಅದು ಯುವಕರಿಂದಾಗಿಯೇ ಸಾಧ್ಯ ಎಂದು 'ರಾಜಕೀಯದ ಮಧ್ಯೆ ಬಿಡುವು' ಪುಸ್ತಕದಲ್ಲಿ ಲೋಹಿಯಾ ಹೇಳಿದಂತೆ ಈ ತರುಣ ಗುಂಪು ಬದಲಾವಣೆಗೆ ತೀವ್ರವಾಗಿ ತುಡಿಯುತ್ತದೆ.

ಜಾತಿವಿನಾಶ : ಲೋಹಿಯಾರ ಪ್ರಧಾನ ಚಿಂತನಾಧಾರೆ ಜಾತಿವಿನಾಶ. 'ಜಾತಿ ಹಾಗೂ ಸ್ತ್ರೀಯರನ್ನು ಕುರಿತ ಪ್ರತ್ಯೇಕತಾವಾದೀ ಮನೋಭಾವವೇ ಭಾರತೀಯ ಚೇತನದ ಈ ಅಧೋಗತಿಗೆ ಮೂಲಕಾರಣ ಎಂಬುದು ನನ್ನ ದೃಢನಂಬಿಕೆ. ಸಾಹಸವನ್ನೂ ಆನಂದವನ್ನೂ ಸೃಷ್ಟಿಸುವ ಸಾಮರ್ಥ್ಯವನ್ನೇ ಕೊಲ್ಲಬಲ್ಲ ಶಕ್ತಿ ಈ ಪ್ರತ್ಯೇಕತಾವಾದಿ ಮನಸ್ಥಿತಿಗಿದೆ'[2] ಎಂದಿದ್ದರು ಲೋಹಿಯಾ.

ಜಾತಿವಿನಾಶವನ್ನು ಸಂಘಟಿಸುತ್ತಾ ಲೋಹಿಯಾರು 'ದಲಿತ, ಹಿಂದುಳಿದ ಪಂಗಡಗಳಿಂದ ಸ್ತ್ರೀಯರು, ಶೂದ್ರರು, ಹರಿಜನರು, ಆದಿವಾಸಿಗಳು, ಹಾಗೂ ಮತೀಯ ಅಲ್ಪ ಸಂಖ್ಯಾತರೊಳಗಿನ ಹಿಂದುಳಿದ ಜಾತಿಯವರಿಗೆ ರಾಜಕೀಯ ಪಕ್ಷಗಳು, ರಾಷ್ಟ್ರೀಯ ಅರ್ಥವ್ಯವಸ್ಥೆ ಹಾಗೂ ಸರಕಾರಿ ಸೇವೆಯಲ್ಲಿ ಆದ್ಯತೆಯ ಅವಕಾಶಗಳನ್ನು ನೀಡತಕ್ಕದ್ದು. ಅಂತರ್ಜಾತಿ ಇಲ್ಲವೆ ಅಂತರ್ಪಂಗಡ ಮದುವೆಯಾದವರಿಗೆ ಸರಕಾರಿ ಸೇವೆಯಲ್ಲಿ ಮೀಸಲಾತಿ ಕಡ್ಡಾಯವಾಗಬೇಕು.' ಆಗಲಾದರೂ ಜಾತಿವಿನಾಶ ಸಾಧ್ಯ ಎಂದು ಒತ್ತಾಯಿಸುತ್ತಾರೆ. ದೀರ್ಘಕಾಲದಿಂದ ಭಾರತವನ್ನು ಜಡತ್ವಕ್ಕೆ ನೂಕಿರುವ ಈ ಜಾತಿಪದ್ಧತಿಯ ಮೇಲೆ ಎಷ್ಟೇ ಪ್ರಹಾರ ನಡೆದರೂ ಅದು ಮುಂದುವರಿದುಕೊಂಡು ಬಂದಿರುವುದನ್ನು ಲೋಹಿಯಾ ಖಂಡಿಸಿ, ಈ ರೋಗ ನಿರ್ಮೂಲನೆಗೆ ಯುವಸಮುದಾಯ ಮುಂದೆ ಬಂದು ಹೋರಾಡಬೇಕೆಂದು ಆಶಿಸುತ್ತಾರೆ. ಚಿದಂಬರ ರಹಸ್ಯದ ರಾಮಪ್ಪ, ಚಂದ್ರ, ಜೋಸೆಫ್ ಅಂಗಾರ, ರಮೇಶ, ರಫಿ ಜಾತಿವಿನಾಶ ಕಾರ್ಯಕ್ರಮ ಹಾಕಿ ವಿಫಲರಾಗುತ್ತಾರೆ. 'ಜೋಸೆಫ್ ಅಂಗಾರ ಕೊಂಚ ಕಪ್ಪಗೆ ಕುಳ್ಳಗಿದ್ದ, ಈತನ ಕೂದಲು ನೀಗ್ರೋಗಳ ಕೂದಲಿನಂತೆ ಗುಂಗುರು ಸುತ್ತಿಕೊಂಡಿತ್ತು. ಕನ್ನಡ ಜಿಲ್ಲೆಯವನಾದ ಈತನ ಪೂರ್ವಿಕರು ಯಾರೋ ಹೊಲೆಯರ ಜಾತಿಯಿಂದ ಮತಾಂತರಗೊಂಡಿದ್ದರಿಂದಲೇ ಈತನ ತಂದೆ ರೋಡ್ರಿಕ್ಸರ ತೋಟದಲ್ಲಿ ರೈಟರಾಗಲು

ಸಾಧ್ಯವಾಗಿದ್ದು. ಇಲ್ಲದಿದ್ದರೆ ಇಂದಿಗೂ ಅಂಗಾರನಿಗೆ ಈ ಮೂವರ ಮಧ್ಯೆ ಸಮಾನಸ್ಕಂಧನಂತೆ ಆತ್ಮಾಭಿಮಾನದಿಂದ ಕೂರಲು ಸಾಧ್ಯವಾಗುತ್ತಿರಲಿಲ್ಲ.'[3]

ಪಾರಂಪರಿಕ ಸಮಾಜ ಹೇಗೆ ಆತ್ಮಗಳನ್ನು ಕಲುಷಿತವಾಗುವಂತೆ ಮಾಡಿದೆ ಎಂಬುದನ್ನು ಈ ವಿವರಗಳಿಂದ ತಿಳಿಯಬಹುದಾಗಿದೆ. ಜಾತಿಯ ಜಡತ್ವವನ್ನು ಕುರಿತು ಲೋಹಿಯಾ ಚರ್ಚಿಸುತ್ತಾ 'ಒಬ್ಬ ಮುಖ್ಯ ಕಾರ್ಯದರ್ಶಿಯ ಸೊಸೆ ಲಂಡನ್ನಿನ ರೆಸ್ಟೋರೆಂಟಿನಲ್ಲಿ ಪರಿಚಾರಿಕೆಯಾಗಿರುವ ಸಂಗತಿಯನ್ನು ಭಾರತದ ಸಮಾಜವಾದಿಗಳೂ ಕೂಡ ಅರಗಿಸಿಕೊಳ್ಳುವುದು ಕಷ್ಟ. ಉಚ್ಚ ಜಾತಿಗಳಿಗೆ ಸೇರಿದವರಾಗಿದ್ದರೆ ಈ ದೇಶದ ಸ್ತ್ರೀ ಪುರುಷರು ದೈಹಿಕ ಕೆಲಸಕ್ಕಿಂತ ಭಿಕ್ಷೆ ಬೇಡುವುದೇ ಮೇಲೆಂದುಕೊಂಡಾರು. ಜಾತಿ ವ್ಯವಸ್ಥೆ ಹಾಗೂ ಅದರ ರೂಢಿಗಳು ಒಂದೆಡೆ, ಹಾಗೂ ಇನ್ನೊಂದೆಡೆ ವರಮಾನದಲ್ಲಿನ ದೊಡ್ಡ ವ್ಯತ್ಯಾಸ – ಇವೆರಡೂ ಈ ದೇಶದ ಸಾಮಾಜಿಕ ಜಡತೆಗೆ ಹೊಣೆಯಾಗಿವೆ.'[4] ಭಾರತದ ಸಂದರ್ಭದಲ್ಲಿ ಈ ವ್ಯತ್ಯಾಸ ಎಷ್ಟು ದೊಡ್ಡ ಪ್ರಮಾಣದಲ್ಲಿದೆ ಎಂಬುದನ್ನು ಮನಗಾಣಬಹುದಾಗಿದೆ. ಚಲನೆರಹಿತ ಸಮಾಜದಲ್ಲಿ ಹೊಸತನ ಶುದ್ಧಿ ಕಾಣಲು ಅಸಾಧ್ಯವೆನ್ನಬಹುದು. 'ಈತನಕ ಆಗಿರುವ ಸುಧಾರಣಾವಾದಿ ಆಂದೋಲನಗಳೆಲ್ಲವನ್ನೂ ಸನಾತನ ಹಿಂದೂ ವ್ಯವಸ್ಥೆ ಆಪೋಶನ ತೆಗೆದುಕೊಂಡಿದೆ. ಹಾಗೂ ಜಾತಿವಾದದ ಭಯಂಕರ ರೂಪ ಈಗಲೂ ಉಳಿದು ನಿಂತಿದೆ. ಇದು ಕೊಳೆತು ಎಷ್ಟೊಂದು ಆಳಕ್ಕೆ ಇಳಿದಿದೆಯೆಂದರೆ, ಇದರ ಮೇಲೆ ದೊಡ್ಡ ಕಲ್ಲನ್ನು ಹಾಕಿದರೂ ಅದು ಈ ಕೊಳೆ ಕೆಸರಿನ ಗರ್ಭದಲ್ಲಿಳಿದು ಎಲ್ಲಿಗೆ ಹೋಗುತ್ತದೆ ಎಂದು ತಿಳಿಯುವುದೇ ಇಲ್ಲ. ಎಲ್ಲಿಯತನಕ ಈ ಆಳದಲ್ಲಿನ ಕೊಳೆ–ಕೆಸರೆಲ್ಲ ಒಣಗಿ ಶುದ್ಧವಾಗುವುದಿಲ್ಲವೋ ಅಲ್ಲಿಯತನಕ ಭಾರತದಲ್ಲಿ ಈ ಜಾತಿ ಪದ್ಧತಿ ನಾಶವಾಗುವುದಿಲ್ಲ.'[5]

ಜಾತಿಪದ್ಧತಿಯ ವಿಕೃತ ರೂಪ ಇನ್ನೂ ಉಳಿದುಕೊಂಡು ಬಂದಿರುವುದಕ್ಕೆ ಹಿಂದೂ ಧರ್ಮ ಕಾರಣ ಎಂದು ಲೋಹಿಯಾ ವ್ಯಾಖ್ಯಾನಿಸುತ್ತಾರೆ.

ವರ್ಗ ಮತ್ತು ಜಾತಿ ಸಂಬಂಧ : "ಜಾತಿಯನ್ನು ವರ್ಗದಿಂದ ಬೇರ್ಪಡಿಸುವಂಥದು ಯಾವುದೆಂದರೆ ಜಾತಿಗಳ ಪರಸ್ಪರ ಸಂಬಂಧದಲ್ಲಿ ನುಸುಳಿ ಬಂದಿರುವ ಚಲನೆಯಿಲ್ಲದ ಸ್ಥಿತಿ, ಮೇಲ್ಮಟ್ಟದ ಜಾತಿಯೊಳಕ್ಕೆ ಪ್ರವೇಶಿಸಲಾರದ ವ್ಯಕ್ತಿಯ ಚಲನರಾಹಿತ್ಯ; ಅಂತಸ್ತಿನಲ್ಲಾಗಲೀ, ಆದಾಯದಲ್ಲಾಗಲೀ ಮೇಲಕ್ಕೇರಲು ಇಡೀ ಜಾತಿಯೊಂದಕ್ಕೆ

ಅಸಾಧ್ಯವಾಗುವ ಚಲನರಾಹಿತ್ಯ. ವರ್ಗ ಎಂದರೆ ಚಲನ ಸಾಮರ್ಥ್ಯವುಳ್ಳ ಜಾತಿ; ಜಾತಿ ಎಂದರೆ ಚಲನರಹಿತವಾದ ವರ್ಗ,'[6]

ವರ್ಗ ಚಲನೆಯುಳ್ಳದ್ದಾದರೆ ಜಾತಿ ಚಲನೆಯಿಲ್ಲದ್ದಾಗಿದೆ. ಯೂರೋಪಿನಲ್ಲಿ ಜಾತಿ ಪ್ರಾಮುಖ್ಯತೆಗಿಂತ ವರ್ಗಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡುತ್ತಾರೆ. ಭಾರತದ ಸಂದರ್ಭದಲ್ಲಿ ಜಾತಿಯ ಬೇರುಗಳು ಹೆಚ್ಚು ಕ್ರಿಯಾಶೀಲವಾಗಿರುತ್ತವೆ. ಆದರೆ ಜಾತ್ಯತೀತಗೊಂಡ ಹುಡುಗರ ನಡುವೆ ಜಾತಿಸೂಚಕ ಪದಗಳ ಬೈಯ್ಗುಳಗಳೆಲ್ಲ ವಿನೋದವಾಗಿ ಕಂಡುಬರುತ್ತವೆ. ಇಂಗ್ಲಿಷ್‌ಗೌಡನ ಪುಕ್ಕಲುತನವನ್ನು ಕಂಡು ರಮೇಶ "ತುತ್! ಈ ಗೌಡ ಸೂಳೇಮಕ್ಕಳ ಹಣೇಬರಾನೇ ಹಿಂಗೆ, ಗುಳ್ಳೇನರಿ ಸೂಳೇ ಮಕ್ಳು"[7] ಎಂದು ಬೈಯುವುದು ಜಾತೀಯತೆ, ಮತೀಯತೆಯನ್ನು ಪ್ರಜ್ಞೆಯಿಂದ ಮೀರಿದವರಿಗೆ ಮಾತ್ರ ಸಾಧ್ಯ ಎಂದು ತಿಳಿಯಬಹುದಾಗಿದೆ. ಕೆಲಸ ಇಲ್ಲದೆ ಪೋಲಿಯಾಗಿ ಸುತ್ತುತ್ತಿದ್ದ ಮಾಯಿ ಇದ್ದಕ್ಕಿದ್ದ ಹಾಗೆ ಹರಿಜನ ಕೇರಿಯ ಧಾರ್ಮಿಕ ವ್ಯಕ್ತಿಯಾಗಿ ರೂಪುಗೊಳ್ಳುವುದು ಪ್ರಸ್ತುತ ಸಂದರ್ಭದಲ್ಲಿ ರಾತ್ರೋರಾತ್ರಿ ಒಬ್ಬ ಜಗದ್ಗುರುವಿನ ಅವತಾರವನ್ನು ನೆನಪಿಸುವಂತಿದೆ.

ಹಿಂದೂ ಮತ್ತು ಮುಸ್ಲಿಂ ಸಂಬಂಧಗಳು: 'ಯಾವುದೇ ದೇಶದ ಎಲ್ಲ ಅಲ್ಪಸಂಖ್ಯಾತರು ಎಲ್ಲಿಯವರೆಗೆ ಸುಖಿಯಾಗಿರಲಾರರೋ ಅಲ್ಲಿಯವರೆಗೆ ಯಾವ ದೇಶವೂ ಸುಖಿಯಾಗಿರಲಾರದು. ಇಂದು ಹಿಂದೂಗಳು, ಮುಸಲ್ಮಾನರು ಇಬ್ಬರೂ ಬದಲಾಗಬೇಕಿದೆ. ಎರಡೂ ಕೋಮಿನವರ ಮನಸ್ಸುಗಳು ಕೆಟ್ಟು ಹೋಗಿವೆ. ಮನಸ್ಸುಗಳನ್ನು ಬೆಸೆಯುವ ದಾರಿ ಯಾವುದು? ಒಂದೆಡೆ ಹಿಂದೂಗಳ ಮನಸ್ಸಿನಲ್ಲಿ ಮುಸಲ್ಮಾನರ ಬಗ್ಗೆ ಬಲವಾದ ಸಂದೇಹ, ಅಪನಂಬಿಕೆ ಇದೆ. ಕಳೆದ ಹಲವಾರ ವರ್ಷಗಳಿಂದಲೂ ಸೈನ್ಯ ಮುಂತಾದ ಖಾತೆಗಳ ಮಾತು ಒತ್ತಟ್ಟಿಗಿರಲಿ, ಆಡಳಿತದ ಯಾವುದೇ ಖಾತೆಗಳಲ್ಲಿ ಮುಸಲ್ಮಾನರಿಗೆ ಎಷ್ಟು ಪ್ರಮಾಣದಲ್ಲಿ ಉನ್ನತ ಹುದ್ದೆಗಳು ಸಿಗಬೇಕಾಗಿದ್ದವೋ ಅಷ್ಟು ಸಿಕ್ಕಿಲ್ಲ ಎನ್ನುವ ಸಂಗತಿಯನ್ನು ನಾವು ಅಲ್ಲಗಳೆಯಲಾಗದು.'[8]

ಭಾರತದ ಸಂದರ್ಭದಲ್ಲಿ ಜಾತಿ, ಮತದ ಪ್ರಶ್ನೆಯನ್ನೆತ್ತಿಕೊಂಡು ಸಣ್ಣ ಮಾತಾಡಿದರೂ ಗುಂಪು ಘರ್ಷಣೆಗೆ ದಾರಿ ಮಾಡಿಕೊಡುತ್ತದೆ. ಹೀಗೆ ಹಿಂದೂ ಮತ್ತು ಮುಸ್ಲಿಂರ ನಡುವಿನ ಸಂಬಂಧವನ್ನು ಕುರಿತಂತೆ ಲೋಹಿಯಾ ಹಲವಾರು ಸೂಕ್ಷ್ಮ ಒಳನೋಟಗಳನ್ನು ಬೀರುತ್ತಾರೆ. 'ಸುಲೇಮಾನ್‌ಯೂಸುಫ್‌ಬೇರಿ ಕೆಸರೂರಿಗೆ ಆಗಮಿಸಿದ್ದು ಒಣ ಮೀನು ಮಾರಾಟಮಾಡಲು. ಆತ ಕೆಲವೇ ವರ್ಷಗಳಲ್ಲಿ ಕೆಸರೂರಿನ

ಕೋಟ್ಯಾಧಿಪತಿಯಾಗಿದ್ದು ಮಾತ್ರ ಯಾರಿಗೂ ತಿಳಿಯದ ಸಂಗತಿಯಾಗಿತ್ತು. ಸುಲೇಮಾನ್ ಬೇರಿ ಕಳ್ಳಸಾಗಾಣಿಕೆ, ಲಂಚ, ಅರಣ್ಯನಾಶ ಮುಂತಾದ ಅನೇಕವನ್ನು ನಡೆಸಿದ್ದರೂ ಕೆಸರೂರಿನ ಜನರ ತಲೆಗೆ ಇವ್ಯಾವು ತಾಗಿಯೇ ಇರಲಿಲ್ಲ. ಆದರೆ ಸುಲೇಮಾನ್ ಬೇರಿಯ ಅಪಾಯ ಅವರಿಗೆ ತಟ್ಟಲಾರಂಬಿಸಿದ ರೀತಿಯೇ ಬೇರೆ. ಸುಲೇಮಾನ್ ಬೇರಿ ಹೋದಹೋದಲ್ಲೆಲ್ಲಾ ತನ್ನ ಕಡೆಯ ಜನಗಳಿಗೆ ಕೆಲಸ ಕೊಡುತ್ತಿದ್ದ. ಎಲ್ಲೆಲ್ಲಿ ಯಾವ್ಯಾವ ಕಂಟ್ರಾಕ್ಟು ಹಿಡಿಯಲಿ, ಎಲ್ಲೆಲ್ಲಿ ಇದ್ದಿಲು ಮಾಡಲು ಅರಣ್ಯದ ಕೂಪು ಮಾಡಲಿ ಅಲ್ಲೆಲ್ಲ ನೂರಾರು ಕೇರಳ ಬೇರಿಗಳು ಬಂದು ಬೀಡುಬಿಡುತ್ತಿದ್ದರು. ಅವರು ಹಾಕಿದ ವಠಾರದ ಜಾಗಗಳನ್ನೆಲ್ಲಾ ಸುಲೇಮಾನ್ ಬೇರಿ ತಹಶೀಲ್ದಾರರು ರೆವಿನ್ಯೂ ಇನ್‌ಸ್ಪೆಕ್ಟರು ಸರ್ವೇಯರುಗಳು ಇವರೆನ್ನೆಲ್ಲಾ ಹಿಡಿದು ಲಂಚದ ಬುಟ್ಟಿಗೆ ಬೀಳಿಸಿ ಅವರಿಗೇ ಮಂಜೂರಾಗುವಂತೆ ಮಾಡುತ್ತಿದ್ದ. ಈ ದೊಡ್ಡ ದೊಡ್ಡ ಸಾಬರ ವಠಾರಗಳನ್ನು ನೋಡುತ್ತಿದ್ದಂತೆಯೆ ಕೆಸರೂರಿನ ಜನರ ಕಣ್ಣು ಕೆಂಪಾಗತೊಡಗಿತು. ಮಸೀದಿಗಳೆದ್ದು ಮೈಕುಗಳ ಕೂಗಾಟ ಆರಂಭವಾದೊಡನೆ ಸುಲೇಮಾನ್ ಬೇರಿಯ ಉದ್ದೇಶ ಅರ್ಥವಾಗತೊಡಗಿತು. ಬೇರಿ ಹಣ ಧರ್ಮ ರಾಜಕೀಯಗಳನ್ನೆಲ್ಲಾ ಒಂದರೊಳಗೊಂದು ಸೇರಿಸಿ ಬಲವರ್ಧನೆ ಮಾಡಿಕೊಳ್ಳತೊಡಗಿದ.'[9]

ಕೆಲವು ವರ್ಷಗಳ ಹಿಂದೆ ಬಡವ್ಯಾಪಾರಿಯಂತೆ ಬಂದ ಸುಲೇಮಾನ್‌ಬೇರಿ ಸ್ವಂತ ಹಡಗುಗಳ ಮೂಲಕ ರಫ್ತು ವ್ಯಾಪಾರ ಮಾಡುವಷ್ಟು ಪ್ರಭಾವಶಾಲಿಯಾಗಿ ಬೆಳೆದದ್ದರಲ್ಲಿ ಆತನ ಕಾಳದಂಧೆಗಳ ಮುಖವನ್ನು ಕಾಣಬಹುದಾಗಿದೆ. ಬೇರಿ ಹಣ, ಧರ್ಮ, ರಾಜಕೀಯವನ್ನು ಬೆಸೆದು ಆಧುನಿಕ ರಾಜಕಾರಣದ ವಿಷಬೀಜವನ್ನು ಬಿತ್ತುತ್ತಿರುವುದನ್ನು ಕಾದಂಬರಿ ಸೂಚಿಸುತ್ತದೆ. ಬೇರಿಗೆ ಪ್ರತಿಸ್ಪರ್ಧಿಯಾಗಿ ರಾಮಾಚಾರಿ ತನ್ನ ಹಿತಸಾಧನೆಗೆ ಮುಸ್ಲಿಂರ ಮೇಲೆ ಹಗೆ ಸಾಧಿಸುತ್ತಾನೆ. 'ಆಚಾರಿಯದು ಮಹಾಪ್ರಳಯಾಂತಕ ತಲೆ ಅವನನ್ನು ತಲೆಬಿಸಿ ಆಚಾರಿ ಎಂದೇ ಎಲ್ಲಾ ಕರೆಯುತ್ತಿದ್ದರು. ಆಚಾರಿಯ ಕುತಂತ್ರ ಬುದ್ಧಿಗಾಗಿ ಹೆದರಿಯೇ ಬಹುವಚನದಲ್ಲಿ ಅವನನ್ನು ಮಾತಾಡಿಸುತ್ತಿದ್ದರು. ಆಚಾರಿಗೆ ಕಚ್ಚೆ ಹರಕು ಬುದ್ಧಿ ಇಲ್ಲದಿದ್ದರೆ ಅವನು ಈ ವೇಳೆಗಾಗಲೇ ಸುಲೇಮಾನ್ ಬೇರಿಯನ್ನು ಮೀರಿಸುವಂತ ಕುಳವಾಗಿರುತ್ತಿದ್ದ. ಆದರೆ ಅವನಿಗೆ ಪ್ರಪಂಚದಲ್ಲಿ ಹೆಂಗಸಿನ ಸೊಂಟ ಒಂದನ್ನು ಬಿಟ್ಟು ಇನ್ಯಾವುದಕ್ಕೂ ಆಸೆಯಾಗಲೀ ಬೆಲೆಯಾಗಲಿ ಇರಲಿಲ್ಲ. ಎಲ್ಲಾ ತೋಟ ಮನೆ ಕಾರು ಇತ್ಯಾದಿಗಳನ್ನು ಪರಿತಪಿಸುತ್ತಾ ಇರಬೇಕಾದರೆ, ಆಚಾರಿ ಅರವತ್ತರ ಮುದಿತನದಲ್ಲೂ ಅತ್ತ ಕಿಂಚಿತ್ ಲಕ್ಷ್ಯ ಹರಿಸದೆ ಸಂತೆಯಿಂದ ಹಿಡಿದು ಜಾತೆಗಳವರೆಗೆ

ಹೆಂಗಸರನ್ನು ಹುಡುಕಿಕೊಂಡು ಮೂಸುತ್ತ ತಿರುಗುತ್ತಿದ್ದ. ಅವನ ಕೂದಲು ಬೆಳ್ಳಗಾಗಿರುವುದೊಂದನ್ನು ಬಿಟ್ಟರೆ ಅವನ ಸಣಕಲು ದೇಹದ ಮೇಲೆ ಮತ್ಯಾವುದೇ ವೃದ್ಧಾಪ್ಯದ ಚಿನ್ಹೆಗಳಿರಲಿಲ್ಲ. ಅವನಿಗೆ ಒಂದೊಂದು ಹೆಂಗಸರ ಸಹವಾಸವೂ ಒಂದೊಂದು ಹೊಸ ಹೊಸ ಸಾಹಸಯಾನ. ಒಂದೊಂದು ಹೆಂಗಸೂ ಒಂದೊಂದು ಬಗೆಯ ವಿನೂತನ ಅನುಭವವನ್ನು ದಯಪಾಲಿಸುವ ಅಗಾಧ ಭೂಖಂಡವಿದ್ದಂತೆ.'[10]

ಬೇರಿಗೆ ಕೆಸರೂರಿನ ಅರಣ್ಯ ಆತನ ದುರಾಸೆಯನ್ನು ತಣಿಸುವ ಚಿನ್ನದ ಖಂಡವಾದರೆ ಆಚಾರಿಗೆ ಕೆಸರೂರು ಅತನ ತೆವಲು ತೀರಿಸಿಕೊಳ್ಳುವ ತಾಣವಾಗುತ್ತದೆ. ಬೇರಿ ಮತ್ತು ಆಚಾರಿಯ ನಡುವಿನ ತಿಕ್ಕಾಟದಿಂದಾಗಿ ಮತೀಯ ವಿಷ ಲಂಟಾನದಂತೆ ಹಬ್ಬುತ್ತಾ ಹೋಗುತ್ತದೆ. ಬೇರಿಯ ಥೈಲಿಗಟ್ಟಲೆ ಹಣ ನೋಡಿ ಕಾಡು ನಾಶ ಮಾಡಲು ಪರವಾನಗಿ ಕೊಟ್ಟ ಮಂತ್ರಿಗಳಿಂದ ಲಂಟಾನ ಅಭೇದ್ಯವಾಗಿ ಹಬ್ಬುತ್ತಾ ಹೋಗುತ್ತದೆ. 'ಲಂಟಾನದಂಥ ಮಾಯಾವಿ ರಾಕ್ಷಸನೇ ಇಲ್ಲ. ಗಿಡವನ್ನು ಬೇರು ಸಮೇತ ಕಿತ್ತೊಗೆದರೆ ಅಲ್ಲೇ ಬೇರು ಕೊಡುತ್ತದೆ. ಕಡ್ಡಿ ಮುರಿದೆಸೆದರೆ ಅದೇ ಬೇರು ಕೊಟ್ಟು ಚಿಗುರೊಡೆಯುತ್ತದೆ. ಹಕ್ಕಿಗಳು ಬೀಜ ತಿಂದು ಹಿಕ್ಕಿ ಹಾಕಿದರೆ ಅಲ್ಲೆ ಮೊಳಕೆ ಒಡೆಯುತ್ತದೆ. ಬಳ್ಳಿಯಂತೆ ಮರಕ್ಕೆ ಹಬ್ಬುತ್ತದೆ. ಪೊದೆಯಂತೆ ಸ್ವತಂತ್ರವಾಗಿ ನಿಂತು ಬೆಳೆಯುತ್ತದೆ. ಲಂಟಾನದ ಈ ಭಯಾನಕ ಜಿಗ್ಗು ಏಲಕ್ಕಿಯ ಕುತ್ತಿಗೆ ಹಿಸುಕಿ ಕಾಡನ್ನೆಲ್ಲಾ ಆಕ್ರಮಿಸಿತು. ಕೆಸರೂರಿನ ಜನ ಇದರ ವಿರಾಟ್ ರೂಪವನ್ನು ಕಂಡು ಕಂಗಾಲಾದರು. ಬೇರಿ ಕೆಲಸದ ದೂರಗಾಮಿ ಪರಿಣಾಮಗಳನ್ನು ಅವರು ಊಹಿಸಿರಲಿಲ್ಲ. ಆದರೆ ದುರ್ದೈವದ ಸಂಗತಿ ಎಂದರೆ ಇದು ಅಲ್ಲಿಗೇ ನಿಲ್ಲುವಂಥದಾಗಿರಲಿಲ್ಲ.'[11]

ಬೇರಿಯ ಮತೀಯವಾದದ ವಿಷದಿಂದಾಗಿ ಮುಂದೆ ಕೆಸರೂರೇ ಲಂಟಾನದ ಹೊಗೆಗೆ ಉಸಿರುಕಟ್ಟಿ ನಾಶಹೊಂದುತ್ತದೆ. ಕೆಸರೂರಿನ ಏಲಕ್ಕಿಗೆ ಕೆಸರೂರಿನ ಸಂಸ್ಕೃತಿಗೆ ಒಟ್ಟಿಗೆ ರೋಗ ತಗುಲಿದೆ ಎನ್ನುವುದನ್ನು ಪಾಟೀಲರು ಅಂಗಾಡಿಗೆ ವಿವರಿಸುತ್ತಾರೆ: 'ಇಲ್ಲೆಲ್ಲಾ ಸುತ್ತುಮುತ್ತಾ ಕೇರಳದ ಬ್ಯಾರಿಗಳ ವಠಾರ ಬೆಳೆದಿದೆ. ಎಲ್ಲಾ ಸುಲೇಮಾನ್ ಬ್ಯಾರಿ ಕೈಕಳಗೆ ಕೆಲಸ ಮಾಡೋದು. ಆತನೊಬ್ಬ ಪ್ರಖ್ಯಾತ ಕಳ್ಳಸಾಗಣಿಕೆದಾರ. ಎಲ್ಲಾ ಕೆಸರೂರಿನ ಮುನಿಸಿಪಾಲಿಟಿ, ಗ್ರಾಮಪಂಚಾಯ್ತಿ, ತಾಲ್ಲೂಕು ಬೋರ್ಡು ರಾಜಕಾರಣದ ಪಾತ್ರಧಾರಿಗಳು. ಈಗ ಅವನು ಅವರಿಗೆ ಒಂದು ಮಸೀದಿ ಕಟ್ಟಿಸಿದ್ದಾನೆ. ದಿನಾ ಅಲ್ಲಾ ಹೋ ಅಕ್ಬರ್ ಅಂತ ಕಿವಿಗಡಚಿಕ್ಕುವಂತೆ ಕೂಗ್ತಾರೆ. ಪೈಗಂಬರ್ ಕಾಲದಲ್ಲಿ ಮೈಕ್ ಇತ್ತೋ ಏನೋ, ಕೇಳ ಹೋದರೆ ಖುರಾನ್ ಪ್ರಕಾರ ಮಾಡ್ತಿದೀವಿ, ಅಂತಾರೆ ಅವರ ಹೋರಾಟಕ್ಕೆ,

ರಾಜಕಾರಣಕ್ಕೆ ಮಸೀದಿ ಸಂಕೇತ. ರಾಜಕಾರಣಕ್ಕೆ ಮತಧರ್ಮ ಹೇಗೆ ಉಪಯೋಗಿಸ್ಕೊಬೇಕಂತ ಆತ ಚೆನ್ನಾಗಿ ಬಲ್ಲ. ಅವನು ಮಸೀದಿ ಕಟ್ಟಿ ಆರ್ಭಟ ಆರಂಭಿಸೋದಕ್ಕೂ ಇಲ್ಲಿನ ಕನ್ನಡಿಗರಿಗೆ, ಹಿಂದೂಗಳಿಗೆ ಎಚ್ಚರ ಆಯ್ತು. ನಮ್ಮ ಸಂಶೋಧನ ಕೇಂದ್ರದಲ್ಲಿ ಸುಮಾರು ಜನ ಹಾರುವರು, ಲಿಂಗಾಯಿತರು, ಒಕ್ಕಲಿಗರು, ಹಿಂದೂವಾದಿಗಳಿದ್ದಾರೆ. ನಮ್ಮ ಸಂಶೋಧನ ಕೇಂದ್ರದ ಬೇಲಿಯೊಳಗೊಂದು ಮುರುಕಲು ಗುಡಿ ಇತ್ತು. ಅದನ್ನು ಉದ್ಭವ ವೆಂಕಟೇಶ್ವರ ಸ್ವಾಮಿ ಅಂತ ನಾಮಕರಣ ಮಾಡಿದರು. ಕೇರಳದ ಸಾಬರ ಕೊಬ್ಬು ಅಡಗಿಸ್ತೀವೆ ಅಂತ ಅವರು ಮೈಕ್ ಹಾಕಿಕೊಂಡು ಜಗನ್ನಾಥ ಸ್ತೋತ್ರ ವೆಂಕಟೇಶ್ವರ ಸ್ತೋತ್ರ ಎಲ್ಲಾ ಕೂಗಿಸೋದಕ್ಕೆ ಆರಂಭಿಸಿದ್ದಾರೆ. ಡಾ॥ಜೋಗಿಹಾಳ್ ಇದ್ದಾಗಲೇ ಅವರ ಅಸಮ್ಮತಿ ಪ್ರತಿಭಟನೆ ಎಲ್ಲಾ ಮೀರಿ ಸುತ್ತಮುತ್ತಲ ಪ್ರತಿಷ್ಠಿತ ಗೌಡರ ಸಹಾಯದಿಂದ ಇದನ್ನೆಲ್ಲಾ ಆರಂಭಿಸೇಬಿಟ್ಟರು. ಇದಕ್ಕೆ ತಿರುಪತಿ ಕಡೆಯವರಿಂದಲೂ ಕುಮ್ಮಕ್ಕು ಧನಸಹಾಯ,'[12]

ಆಧುನಿಕ ರಾಜಕಾರಣ, ವಿಜ್ಞಾನ, ಎಲ್ಲವೂ ಮತಾಚಾರಗಳಿಂದ ಹೇಗೆ ಭ್ರಷ್ಟಗೊಂಡಿದೆ ಎಂಬುದನ್ನು ಪಾಟೀಲರ ವ್ಯಗ್ರತೆಯಲ್ಲಿ ಕಾಣಬಹುದಾಗಿದೆ. ಕಾಲೇಜಿನಲ್ಲಿ ಪಾಟೀಲರನ್ನು ಪ್ರಶ್ನೆ ಮಾಡಿದ ರಫಿಯನ್ನು ಕಾಲೇಜಿನ 'ಪ್ರಾಂಶುಪಾಲ ರಫೀಕ್ ಅಹಮದ್ ಸಿಟ್ ಡೌನ್, ಬೇರೆಯೋರ ಧರ್ಮದ ವಿಷ್ಯ ಮತ್ತೊಬ್ಬರು ಟೀಕಿಸಬಾರದು'[13] ಎನ್ನುವುದು ಸನಾತನಿ ಮನಸ್ಥಿತಿಯನ್ನ ತೋರಿಸುತ್ತದೆ.

ಇಂದಿನ ಶಿಕ್ಷಣ ಸಂಸ್ಥೆಗಳು ಯುವ ಮನಸ್ಸುಗಳನ್ನು ಆರೋಗ್ಯವಂತವಾಗಿರುವಂತೆ ಮಾಡುವುದನ್ನ ಬಿಟ್ಟು ಜಾತಿ, ಮತಗಳ ಹೇರಿಕೆಯಿಂದ ರೋಗಗ್ರಸ್ತಗಳಾಗಿಸಿವೆ ಎಂಬುದನ್ನು ಕಾಣಬಹುದಾಗಿದೆ. ಶ್ರೀನಿವಾಸರಾಯ ಬ್ಯಾಂಕಿನಿಂದ ಸಾಲ ಕೊಟ್ಟು ಹಂದಿಮರಿಗಳನ್ನು ಸಾಕುವಂತೆ ನೆರವಾದಷ್ಟೂ ಅದು ಮತಾಂತರಕ್ಕೆ ದಾರಿಮಾಡಿಕೊಡುತ್ತದೆ. ಸಾಲ ವಸೂಲಾತಿಗೆ ಬರುವುದಕ್ಕಿಂತ ಮುಂಚೆ ಹಂದಿಗಳನ್ನು ತಿಂದು ಮುಗಿಸಿದ ಹೊಲೆಯರು ಸಾಬರ ಜಾತಿಗೆ ಸೇರಬೇಕೆಂದಿರುವಾಗ ಕೇರಿ ಒಳಗೆ ಹಂದಿಗಳು ನಿಷಿದ್ಧವಂತೆ, ಹಾಗಾಗಿ ಕಾಡಿಗೆ ಓಡಿಸಿದೆವು ಎಂದಾಗ ಆಚಾರಿಗೆ ತಲೆಬಿಸಿಯಾಗುತ್ತದೆ. ಎಂದೂ ಹೊಲಗೇರಿಗೆ ಪಾದ ಬೆಳೆಸದವನು ಆಚಾರಿ ಹೊಲಗೇರಿಗೆ ಬಂದಾಗ ಹೊಲೆಯರು ಕಿಚಾಯಿಸುತ್ತಾರೆ: "ನಿಮ್ಮ ದೇವಸ್ಥಾನಕ್ಕೆ ನಮ್ಮನ್ನು ಸೇರಿಸ್ಕೋತೀರಾ!' ನಿಮ್ಮ ಮನೆ ಒಳಗೆ ನಮ್ಮನ್ನು ಬಿಟ್ಕೋತೀರಾ? ನಮ್ಮನ್ನು ಮುಟ್ಟಿಸ್ಕೋತೀರಾ? ಈ ಪ್ರಶ್ನೆಗಳಿಗೆ ಆಚಾರಿ 'ಮುಟ್ಟಿಸ್ಕೋಬೌದು! ಮುಟ್ಟಿಸ್ಕೋಬಾರ್ದಂತ'

ಏನೂ ಇಲ್ಲ. ಅವೆಲ್ಲಾ ಹಳೇ ಕಂದಾಚಾರ ಅಲ್ವೇನ್ರಯ್ಯ ಮುಖ್ಯ ನೀವೂ ಸ್ವಲ್ಪ ಶುಚಿಯಾಗಿ ಇರೋದನ್ನ ಕಲೀಬೇಕು. ಸುಮ್ಮ ಸುಮ್ಮನೆ ಒಬ್ಬರು ಮತ್ತೊಬ್ರನ್ನ ಮುಟ್ಟೋದು ಅಂದರೆ ಏನ್ರಯ್ಯ? ನಿಮ್ಮ ಹೆಣ್ತೀರನ್ನ ಯಾವನೋ ದಾರಿಹೋಕ ಬಂದು ಮುಟ್ಟಿದರೆ ನೀವು ಸುಮ್ನೆ ಬಿಡ್ತೀರಾ? ಆ ತರಾನೇ ಬಂದವು ಈ ಕಟ್ಲೆಕಾನೂನು ಆಚಾರ ಎಲ್ಲಾ. ದೇವಸ್ಥಾನದ ಒಳಗೆ ಪೂಜಾರಿ ಬಿಟ್ಟು ಇನ್ನು ಯಾರ್ರೂ ಬಿಡಬಾರ್ದು ಅಂತ ಮಾಡಿದೀವಿ. ಯಾಕಂತ ಕಾರಣ ತಿಳೀದೇ ನೀವು ಮಾತಾಡ್ತೀರಿ. ನಿಮಗೇ ನಮಗೇ ಕ್ಷೇಮ ಅಂತಲ್ವೆ? ದೇವರಿಗೆ ಮೈಲಿಗೆ ಆದರೆ ನಮಗೆ ತೊಂದ್ರೇನೋ? ದೇವರಿಗೋ? ನಮಗೆ ನಿಮಗೆ ತಾನೇ ಅದಕ್ಕೆ ಸ್ವಲ್ಪ ತಿಳಿದು ಮಾತಾಡಿ.'[14]

ಎಂದು ಹೇಳುವ ಮಾತುಗಳು ಹಿಂದೂಧರ್ಮ ದೇವರ ಹೆಸರಿನಲ್ಲಿ ನೀಚ ಜಾತಿಪದ್ಧತಿಯನ್ನು ಮುಂದುವರಿಸಿಕೊಂಡು ಬರುತ್ತಿರುವ ಪ್ರತಿನಿಧಿಯಂತೆ ಕಾಣುತ್ತಾನೆ. ಜಾತಿ ದ್ವೇಷ ಹೊತ್ತಿಉರಿಯುತ್ತಿದ್ದ ಕೆಸರೂರಲ್ಲಿ ಎಲ್ಲವೂ ಸ್ಫೋಟಗೊಂಡಂತೆ ಭಾಸವಾಗುತ್ತದೆ. ಸುಲೇಮಾನ್ ಬೇರಿಯ ಬಲಗೈಭಂಟ ಅಬ್ಬಾಸ್ ಬ್ರೀಡರ್ ಮಹಮಮದ್‌ನನ್ನು ಕೊಲೆಮಾಡಿದರೆ ಮೊದಲು ಶಂಕಿಸುವುದು ಹಿಂದೂಗಳನ್ನೇ ಎಂದು ನಂಬುತ್ತಾನೆ. ಪರಿಸರವನ್ನು ಅವಲಂಬಿಸಿ ಅದನ್ನು ಹಾಳುಮಾಡುತ್ತಿದ್ದ ಗೋಸಾಯಿಗಳು, ಅವರ ಜೀವನಕ್ರಮ, ಆಹಾರ ಪದ್ಧತಿ ಸಹ ಕೆಸರೂರಿನ ದ್ವೇಷಕ್ಕೆ ದಾರಿ ಮಾಡಿಕೊಡುತ್ತದೆ. ತಾನಾಜಿ, 'ತಾವು ಶಿಕಾರಿ ಮಾಡಿ ತಂದಿದ್ದ ನರಿಗಳ ತಲೆಗಳನ್ನೆಲ್ಲಾ ಊರ ಪಕ್ಕದ ಹಾಳುಬಾವಿಗೆ ಹಾಕಿದ್ದರು. ಕೃಷ್ಣೇಗೌಡ ಹೆಂಡತಿ ಕರೆತರಲು ಜನಕಳಿಸಿದಾಗ ಹೆಂಡತಿ ತವರಲ್ಲಿ ಇರಲಿಲ್ಲವಂತೆ! ಕೃಷ್ಣೇಗೌಡ ಗಾಬರಿಯಾಗಿ ಊರಿನ ಸುತ್ತಲಿನ ಕೆರೆಕೊಳ ಬಾವಿಗಳನ್ನು ಹುಡುಕಿಸಿದನಂತೆ. ಆಗ ಊರ ಪಕ್ಕದ ಹಾಳು ಬಾವಿಯಲ್ಲಿದ್ದ ನರಿಯ ತಲೆಬುರುಡೆಯ ಎಲುಬಿನ ರಾಶಿ ಪತ್ತೆಯಾಯ್ತಂತೆ. ಹಿಂದೂಗಳೆಲ್ಲಾ ಮಾಂಸ ಮಾರುವ ಸಾಬರು ನಮಗೆ ಇಲ್ಲಿಯವರೆಗೆ ಮಾಂಸವನ್ನೇ ಕುರಿಮಾಂಸ ಎಂದು ಮಾರಿ ನೆಪಕ್ಕೆ ನಾಲ್ಕು ಕುರಿ ಕಡಿದಿದ್ದಾರೆ ಎಂದು ರೊಚ್ಚಿಗೆದ್ದಿದ್ದಾರೆ ಎಂದು ವರ್ತಮಾನಕೊಟ್ಟ. ಎಲ್ಲಾ ಗುಂಪುಗೂಡಿ ಸಾಬರಿಗೆ ತಿಥಿಮಾಡಲು ಯೋಚಿಸುತ್ತಿದ್ದಾರೆಂದು ಹೇಳಿದ.'[15]

ಗೋಸಾಯಿಗಳ ಮುಖಂಡ 'ಹೋಗಿ ಅವರಿಗೆ ನಾವೇ ಅದರೊಳಗೆ ನರಿ ತಲೆ ಎಸೆದಿದ್ದು ಎಂದು ಹೇಳಿಬಿಡೋಣ. ನಾವು ಮಾಡಿದ ಕೆಲಸಕ್ಕೆ ಅವರು ಯಾಕೆ ಕಡಿದಾಡಬೇಕು'[16] ಎಂದು ಹೇಳಿದ.

ಇದಕ್ಕೆ ತಲೆಬಿಸಿ ಆಚಾರಿ 'ಸುಮ್ಮನೆ ಹಿಂದಿರುಗಿ, ಜನ ತೀರಾ ರೊಚ್ಚಿಗೆದ್ದಿದ್ದಾರೆ ನಿಮ್ಮ ಮಾತನ್ನು ಯಾರೂ ಕೇಳುವ ಸ್ಥಿತಿಯಲ್ಲಿಲ್ಲ. ಇಲ್ಲಾ ನಿಮ್ಮನ್ನು ಹಿಂದೂಗಳು ಚಚ್ಚುತ್ತಾರೆ ಅಥವಾ ಈ ವೇಳೆಗಾಗಲೇ ಹೊಡೆದಾಟ ಆಗಿದ್ದರೆ ನಿಮ್ಮಿಂದ ಗಲಾಟೆ ಆಯ್ತೆಂದು ಸಾಬರು ನಿಮ್ಮನ್ನು ಚಚ್ಚುತ್ತಾರೆ. ಈ ಇಬ್ಬರಿಂದಲೂ ಹೇಗೋ ಬಚಾವ್ ಆದರೂ ಕೊನೆಗೆ ಪೋಲೀಸರು ನಿಮಗೆ ಹೇಳಿಕೆ ಇತ್ಯಾದಿಗಳ ಚಿತ್ರಹಿಂಸೆ ಕೊಡುತ್ತಾರೆ. ಈಗ ಬಾಯಿ ಮುಚ್ಚಿಕೊಂಡು ಹೋಗಿ ತಣ್ಣಗೆ ಮಲಗಿ ನಾಲ್ಕು ಜನ ಸಾಬರಿಗೆ ಮೂಳೆ ಮುರಿಯೋ ಹಂಗೆ ಬಿದ್ದರೆ ನಮಗೇನು ತೊಂದರೆ? ಕೊಬ್ಬು ಹೆಚ್ಚಾಗಿದೆ ಅವರಿಗೆ ಇಳಿಸಲಿ'[17] ಎನ್ನುವುದು ಘರ್ಷಣೆಯಲ್ಲಿ ಲಾಭ ಮಾಡಿಕೊಳ್ಳುವ ಮನಸ್ಸನ್ನು ಅನಾವರಣ ಗೊಳಿಸುತ್ತದೆ.

'ಈ ಊರು ಕಂಪ್ಲೀಟು ಎಕುಟ್ಟಿಹೋಗಿದೆ ಸಾರ್, ಒಂದು ದಂಗೆ ಆಗಿ ಕ್ರಾಂತಿ ಆಗ್ಬೇಕು ಇದು ಸರಿಹೋಗ್ಬೇಕಾದ್ರೆ ಅಷ್ಟೇ'[18] ಎಂದು ರಮೇಶನಿಗನ್ನಿಸಿದರೆ 'ದೊಂಬಿ ದಂಗೆ ಕ್ರಾಂತಿ ಇದರಲ್ಲೆಲ್ಲಾ ಪ್ರಾಣ ಕಳಕಳ್ಳೋರು ಕಡ್ಡಾಯವಾಗಿ ನಿರಪರಾಧಿಗಳು ಮುಗ್ಧರು, ಅದರಲ್ಲೂ ಹೆಂಗಸರು, ಮಕ್ಕಳು, ಬರೇ ಗೂಂಡಗಳೇ ಹೊಡೆದಾಡಿಕೊಂಡು ಸತ್ರೆ ಪೀಡೆ ಕಳೆಯಿತೆಂದು ಸಂತೋಷಪಡಬಹುದಿತ್ತು'[19] ಎನ್ನುವ ಅಂಗಾಡಿಯ ಮಾತು ವಸ್ತುನಿಷ್ಠ ಸತ್ಯವಾಗಿದೆ.

ಜಯಂತಿಯ ಪ್ರೇಮ ಪ್ರಕರಣವನ್ನು ತಿಳಿದ ಕೃಷ್ಣೇಗೌಡ ಜಯರಾಂನೆದುರು 'ನೋಡಿ ಹೊಲೇರವನಾದ್ರು ಪರ್ವಾ ಇರ್ಲಿಲ್ಲ. ಹಿಂದೂ ಆದ್ರೆ ಸಾಕಿತ್ತು. ಎಲ್ಲಾ ಬಿಟ್ಟು ಹೋಗಿ ತುರುಕ! ತಂದೆತಾಯಿ ಇಲ್ಲದ ಬಿಕನಾಸಿ! ಥುತ್ ನಾನಿರೋವರೆಗೆ ಇದೆಲ್ಲಾ ಸಾಧ್ಯ ಇಲ್ಲ.'[20] ಎಂದು ತನ್ನ ಅಳಲನ್ನ ತೋಡಿಕೊಳ್ಳುವುದು ಜಾತಿಪದ್ಧತಿಯ ಎಲ್ಲಾ ವಿಕಾರಗಳು ಮತೀಯವಾದವಾಗಿ ಹೇಗೆ ಮರುರೂಪ ಪಡೆಯುತ್ತವೆ ಎಂಬುದನ್ನು ಸೂಚಿಸುತ್ತದೆ.

ಪ್ರಾಚಾರ್ಯ ವೆಂಕಟ್ರಾಯ ರಫಿಯನ್ನು ಡಿಸ್‌ಮಿಸ್ ಮಾಡ್ತೀನಿ ಎಂದರೆ ಆದರೆ ಅವನನ್ನು ಹಿಂದೂಧರ್ಮಕ್ಕೆ ಮತಾಂತರಗೊಳಿಸಿಬಿಡೋಣವೆನ್ನುವುದು ಧರ್ಮ, ಜಾತಿ, ತಮ್ಮ ಅಧಿಕಾರಲಾಲಸೆಗೆ ಎಂಬುದನ್ನು ತೋರಿಸಿಕೊಡುತ್ತದೆ. ಏನಾದರೂ ಸತ್ತುಕೊಳ್ಳಲಿ ಎಂದು ಸುಮ್ಮನಿದ್ದರೂ ಕೃಷ್ಣೇಗೌಡನಿಗೆ ಇನ್ನಿಲ್ಲದ ತರ್ಲೆಗಳನ್ನು ಹಚ್ಚುತ್ತಿದ್ದ ಆಚಾರಿಗೆ ತನ್ನ ಪ್ರೇಯಸಿ ರಸಿಯಾಳನ್ನು ಊರುಬಿಟ್ಟು ಓಡಿಸಿದ ಬೇರಿಯ ವಿರುದ್ಧ ವೈಯಕ್ತಿಕ ದ್ವೇಷ ಇತ್ತು. 'ನಿನ್ನ ಮಗಳು ಅವನ್ನ ಪ್ರೀತಿಸೋದಾದ್ರೆ ಹಿಂದೂ ಧರ್ಮಕ್ಕೆ ಅವನು ಸೇರಬೇಕು,

ಅವನಿಗೂ ತಂದೆ ಇಲ್ಲ, ತಾಯಿ ಇಲ್ಲ. ನಿಂಗೂ ಗಂಡು ಮಕ್ಕಳಿಲ್ಲ! ಸುಮ್ಮನೆ ತುರುಕಾಂತ ತೆಗಳಿದರೆ ಏನುಬಂತು. ನಮ್ಗಿರೋದೆ ಅವನಿಗೂ ಇರೋದು, ಏನಂದ್ರೆ ಮುಂಜಿ ಅಂತಮಾಡಿ ಚೂರು ಕುಯ್ದಿರ್ತಾರಷ್ಟೆ! ಸ್ವಾಮಿಗಳನ್ನ ಕರೆಸಿ ಗಂಗಾಜಲದಲ್ಲಿ ಅವನ್ನ ಶುದ್ಧಿ ಮಾಡಿ ಹಿಂದೂ ಮಾಡಿಬಿಡೋಣ, ಅವರೆಲ್ಲಾ ಒಂದ್ಕಾನೊಂದು ಕಾಲದಲ್ಲಿ ಹಿಂದೂಗಳೇ ಅಲ್ವೇನಯ್ಯಾ.'[21]

ಆಚಾರಿಯ ಈ ವಿವರಣೆಯಲ್ಲಿ ಸತ್ಯಾಂಶವಿಲ್ಲದಿಲ್ಲ. 'ಅದೆಷ್ಟು ಜನ ಹಿಂದೂಗಳು ಶೇರಶಹನನ್ನು ತಮ್ಮ ಪೂರ್ವಜ ಎಂದು ಪರಿಗಣಿಸುತ್ತಾರೆ? ಅದೆಷ್ಟು ಜನ ಮುಸಲ್ಮಾನರು ಗಜನಿ, ಗೋರಿ ಸುಲಿಗೆಕೋರರಾಗಿದ್ದರೆಂದು ಹೇಳಬಲ್ಲರು? ನಾನೀಗ ನಿಮ್ಮೆದುರು ಮಾತನಾಡುತ್ತಿದ್ದೇನೆ. ಇದನ್ನು ಕೇಳಿದ ನಿಮಗೆ ಈ ಮಾತು ಸರಿ ಎನಿಸುತ್ತದೆ. ನೀವು ಮನೆಗೆ ಮರಳಿದ ನಂತರ ಯಾವನೋ ಸೈತಾನನೊಬ್ಬ ಬಂದು ಎಂಥ ಅಡ್ಡದಾರಿಗಳೆವ ಮಾತನ್ನು ಕೇಳಿಬಂದಿದ್ದೀರಿ ಗಜನಿ, ಗೋರಿ ಬಂದಿರದಿದ್ದರೆ ಇಲ್ಲಿ ಮುಸಲ್ಮಾನರೆಲ್ಲಿರುತ್ತಿದ್ದರು? ಗೊತ್ತಾಯಿತಲ್ಲ ಸೈತಾನನ ಮಾತಿನ ಶೈಲಿ? ಎಂದು ನಿಮ್ಮನ್ನು ಮತ್ತೆ ಅಡ್ಡದಾರಿಗೆ ಎಳೆಯಬಹುದು. ಇಂಥವರಿಗೆ ಇಸ್ಲಾಂ ಅಥವಾ ಪ್ರವಾದಿ ಮಹಮ್ಮದ್ ಮುಖ್ಯವಲ್ಲ. ಇವರಿಗೆ ಗಜನಿ ಗೋರಿಗಳೇ ಮುಖ್ಯವಾಗುತ್ತಾರೆ. ಇದರ ಪರಿಣಾಮಗಳು ಏನಾಗಬಲ್ಲವೆಂದು ಸ್ವಲ್ಪ ಯೋಚನೆ ಮಾಡಬೇಕು.'[22] ಎಂದ ಲೋಹಿಯಾರ ಈ ವಿಶ್ಲೇಷಣೆಯಲ್ಲಿ ಏಳೆಂಟು ಶತಮಾನಗಳ ಹಿಂದೆ ಹಿಂದೂ – ಮುಸ್ಲಿಂ ಏನಾಗಿದ್ದರು ಎಂಬುದನ್ನು ಕಾಣಬಹುದಾಗಿದೆ.

ಆಚಾರಿ ನೆಪಕ್ಕೆ ಹಿಂದೂವಾಗಿದ್ದು ಆತನ ಧರ್ಮವೇ ಬೇರೆಯಾಗಿತ್ತು ಎಂಬುದನ್ನು ಕೃಷ್ಣೇಗೌಡನ ಹೃದಯ ಹೇಳುತ್ತದೆ. ಎಲ್ಲಾ ಧರ್ಮಾಂಧರು ಧರ್ಮವನ್ನು ಬಿಟ್ಟವರಾಗಿರುತ್ತಾರೆ. 'ಈ ಲಂಟಾನ ನಮ್ಮ ದೇಶದಲ್ಲಿ ಹಿಂದೆ ಇರಲೇ ಇಲ್ಲಾ ಸಿದ್ದಪ್ಪಾ, ಅದನ್ನು ಯಾರೋ ವಿದೇಶದವರು ಇಲ್ಲಿನ ಉದ್ಯಾನಕ್ಕೆ ಅಂತ ತಂದಿದ್ದು ಅದು ಇಡೀ ದೇಶದಾದ್ಯಂತ ವ್ಯಾಪಿಸಿದೆ ಈಗ' 'ಎನ್ನುವ ಪಾಟೀಲರ ಮಾತಿನಲ್ಲಿ ಲಂಟಾನದ ವಸಾಹತುಶಾಹೀ ಹಿನ್ನೆಲೆಯೂ ಸೂಚಿತವಾಗುತ್ತಿದೆ. ಆದರೆ, 'ಬೀಳುವ ಮಳೆಗೆ ಗುಡ್ಡಗಳ ಮಣ್ಣೆಲ್ಲಾ ತೊಳೆದು ಹೋಗದಂತೆ ರಕ್ಷಿಸಬಲ್ಲ ಲಂಟಾನ ಇಡೀ ಕೆಸರೂರನ್ನು ಆಕ್ರಮಿಸಿಕೊಳ್ಳುತ್ತದೆ. ವಸಾಹತು ಭಾರತದಲ್ಲಿ ಆರಂಭಗೊಂಡು ವಸಾಹತೋತ್ತರ ಭಾರತದಲ್ಲಿ ಭೀಕರ ಸ್ಥಿತಿ ತಲುಪಿದ ಮತೀಯ ಸಮಸ್ಯೆ, ಲಂಟಾನದ ಇನ್ನೊಂದು ಮುಖದಂತೆ ಕೆಸರೂರನ್ನು ಮುತ್ತುತ್ತದೆ. 'ಈ ಪರಿಸ್ಥಿತಿ ನಮಗೆ ನಿಜವಾಗ್ಲೂ ಒಳ್ಳೇದಕ್ಕೆ

ಬಂದಿರೋದು' ಎನ್ನುವ ಆಚಾರಿಯಂಥವರಿಂದಾಗಿ, ರಫಿಯನ್ನು ಪ್ರೀತಿಸಿದ ಜಯಂತಿಯ 'ಮುಖಕ್ಕೆ ಆಸಿಡ್ಡು ಸುರೀತೀವಿ' ಎನ್ನುವ ಸಾಬರಿಂದಾಗಿ, 'ಕೊಲ್ಲು, ಕೊಚ್ಚು, ಕಡಿ, ಹರಹರ ಮಹಾದೇವ, ಅಲ್ಲಾ ಹೋ ಅಕ್ಬರ್'ಗಳ ಕೂಗಾಟ ಚೀರಾಟಗಳಿಂದ ಕೆಸರೂರು ತುಂಬಿ ಹೋಗುತ್ತದೆ. 'ಗೆದ್ದೋರು ಸೋತೋರು ಸಾಬ್ರು ಹಿಂದೂ ಯಾರು ಉಳಿಯೋ ಮುಖ ಕಾಣ್ತಿಲ್ಲ. ಆ ಲಂಟಾನದ ಜಿಗ್ಗಿಗೆ ಬೆಂಕಿ ಬಿದ್ದಿದೆ. ಏನು ಹೊಗೇ ಹೊಗೇ...' ಎಂಬ ಹಾಹಾಕಾರಗಳ ನಡುವೆ 'ಆರು ವರ್ಷದ ಹಿಂದಿನಿಂದ ನಿರಂತರವಾಗಿ ಆತ್ಮ ಮತ್ತು ಪರಿಸರಗಳೆರಡನ್ನೂ ಕಲುಷಿತಗೊಳಿಸಿಕೊಳ್ಳುತ್ತಾ ಬಂದ ಸಂಸ್ಕೃತಿಗೆ ಅದರ ಪರಿಣಾಮ ತಟ್ಟಲಾರಂಬಿಸಿತು. ಎಂಥ ಬಿರುಬೇಸಿಗೆಯಲ್ಲೂ ಶುಭ್ರ ತಂಗಾಳಿ ಸೂಸುತ್ತಿದ್ದ ವಿಪಿನ ಈಗ ಲಂಟಾನದ ಹಸಿ ಎಲೆಗಳ ಸೀಯುವ ಭೀಕರ ಕಾರ್ಮೋಡ ಒಂದನ್ನು ಉಗಿಯತೊಡಗಿತ್ತು.'[23]

'ಲಂಟಾನದ ಮೂಲಕ ಊರನ್ನು ದಹಿಸುವ ಬೆಂಕಿಯಿಂದ ತಪ್ಪಿಸಿಕೊಳ್ಳಲು ಹೋರಾಡುವ ಪ್ರಯತ್ನಗಳಲ್ಲಿ ನಿಷ್ಫಲವಾಗುವುದರಲ್ಲಿ ಒಂದು ಸಮಾಜ ತನ್ನ ಭ್ರಷ್ಟತೆಯಿಂದಾಗಿ ತನ್ನ ಸ್ವ-ರಕ್ಷಣೆಯ ಮಾರ್ಗಗಳನ್ನೇ ಕಳೆದುಕೊಳ್ಳುವ ದುರಂತದ ಸೂಚನೆಯಿದೆ. ಹಬ್ಬತೊಡಗಿದ್ದ ಮತೀಯ ವಿಷ, ಸುತ್ತುವರಿದಿರುವ ಲಂಟಾನ, ಮಾಯವಾಗುತ್ತಿರುವ ಅರಣ್ಯಗಳನ್ನು ಪ್ರಹಸನವೆಂಬಂತೆ ಕಾಣುತ್ತಿದ್ದ ಸಮಾಜದ ದುರಂತವಿದು.'[24]

ಬೇರಿಯ ಹಣಬಲದ ದುರಾಸೆಗಾಗಿ, ಆಚಾರಿಯ ಬುದ್ಧಿಬಲದ ಪರಿಣಾಮವಾಗಿ ಇಡೀ ಕೆಸರೂರು ಅವನತಿ ಹೊಂದುತ್ತದೆ. ಈ ಬಗೆಯ ಮತೀಯವಾದಿ ತಿಕ್ಕಾಟಕ್ಕೆ ಉತ್ತರವಾಗಿ 'ಉದಾರವಾದವೊಂದೇ ದೇಶವನ್ನು ಒಗ್ಗೂಡಿಸಬಲ್ಲದು' ಎನ್ನುವ ಲೋಹಿಯಾ ಹೀಗೆ ಬರೆಯುತ್ತಾರೆ: 'ಹೇಗೆ ಹಿಂದೂಗಳ ಮನೋಧರ್ಮದಲ್ಲಿ ಪರಿವರ್ತನೆಯಾಗಬೇಕು ಎಂದೆನ್ನೋ ಆದೇ ರೀತಿ ಮುಸಲ್ಮಾನರ ಮನೋಧರ್ಮವೂ ಬದಲಾಗಬೇಕು ಎಂದು ನಾನು ಬಯಸುತ್ತೇನೆ. ನಿಜಕ್ಕೂ ಇಂದು ಹಿಂದೂಗಳು ಮತ್ತು ಮುಸಲ್ಮಾನರ ಮನಸ್ಸುಗಳನ್ನು ವೋಟಿನ ರಾಜಕೀಯ ಹಾಳುಗೆಡವಿದೆ. ಚುನಾವಣೆಯ ಸಂದರ್ಭದಲ್ಲಿ ಧುತ್ತನೆ ಅವತರಿಸುವ ರಾಜಕಾರಣಿಗಳು ಬೇರೆ ಸಂದರ್ಭಗಳಲ್ಲಿ ಮಂಗಮಾಯವಾಗುತ್ತಾರೆ.

ಅಡಿಟಿಪ್ಪಣಿ: ನಟರಾಜ ಹುಳಿಯಾರ್, 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ.

ವೋಟಿನ ಭಿಕ್ಷೆ ಬೇಡುವವರು ಮತದಾರ ಮುನಿಸಿಕೊಳ್ಳುವಂತೆ ಮಾಡಬಹುದಾದ ಯಾವ ಮಾತನ್ನೂ ಆಡಲಾರರು. ಆದ್ದರಿಂದಾಗಿ ಭಾರತದಲ್ಲಿ ಎಷ್ಟು ಪಕ್ಷಗಳಿವೆಯೋ ಆ ಪೈಕಿ ಯಾವ ಪಕ್ಷವೂ ಹಿಂದೂ ಮತ್ತು ಮುಸಲ್ಮಾನರ ಮನೋಧರ್ಮಗಳನ್ನು ಪರಿವರ್ತಿಸುವ ಗೊಡವೆಗೇ ಹೋಗಲಾರದು. ಈ ಪಕ್ಷಗಳು ಮನಸ್ಸಿನಲ್ಲಿ ರಾಶಿಯಾಗಿ ಬಿದ್ದಿರುವ ಕೊಳಕನ್ನು ತಪ್ಪು ಕಲ್ಪನೆಗಳನ್ನು, ಭ್ರಮೆಗಳನ್ನು ದೂರ ಮಾಡದೆ, ಅವೆಲ್ಲ ಸರಿಯೇ ಎನ್ನುವ ರೀತಿಯಲ್ಲಿ ಎಲ್ಲರೂ ಆಡುವಂತೆ ಆಡಿ ಮತ ಗಳಿಸಬೇಕೆನ್ನುತ್ತವೆ. ನಮ್ಮ ರಾಜಕೀಯ ಬಿಕ್ಕಟ್ಟಿನ ಕೆಟ್ಟ ಅಂಶವೆಂದರೆ 'ಓಟಿ'ನ ರಾಜಕೀಯದಲ್ಲಿ ನಾವು ಅದರಲ್ಲೂ ವಿಶೇಷವಾಗಿ ಮುಖಂಡರು, ಸತ್ಯ ನುಡಿಯಲು ಹಿಂಜರಿಯುತ್ತಿದ್ದೇವೆ ಎನ್ನುವುದು. ಅದರ ಪರಿಣಾಮವಾಗಿಯೇ ಹಿಂದೂಗಳ ಮತ್ತು ಮುಸಲ್ಮಾನರ ಮನಸ್ಸು ಕೊಳಕಾಗಿಯೇ ಉಳಿದು, ಎಂದೂ ಬದಲಾಗದೆ ಮುಂದುವರೆಯುತ್ತದೆ. ಈ ಪರಿಸ್ಥಿತಿ ಸುಧಾರಿಸಬೇಕು, 'ಮುಸಲ್ಮಾನ' ಎನ್ನುವ ಮಾತೇ ರಾಜಕೀಯದಲ್ಲಿ ಇರಕೂಡದು, ಅದು ದೂರವಾಗಬೇಕು. ಹಿಂದೂಗಳು ಹೇಗೆ ಬೇರೆ ಬೇರೆ ಪಕ್ಷಗಳಲ್ಲಿ ಹರಿದು ಹಂಚಿಹೋಗುತ್ತಾರೋ ಹಾಗೆಯೇ ಮುಸಲ್ಮಾನರೂ ಹಂಚಿ ಹೋಗಬೇಕು. ಮುಸಲ್ಮಾನರು ಹೊರಟು ನಿಂತರೆ ಒಟ್ಟಾಗಿಯೇ ಹೊರಡುವವರು ಎನ್ನುವ ಮಾತನ್ನು ಹೆಚ್ಚು ಕಡಿಮೆ ಎಲ್ಲರೂ ಒಪ್ಪಿಕೊಂಡಂತಿದೆ. ಅವರು ಯಾವತ್ತೂ ಯಾವುದಾದರೊಂದು ಹೆಸರಿನಲ್ಲಿ ಒಗ್ಗೂಡುತ್ತಾರೆ. ಅದರ ಪರಿಣಾಮವಾಗಿ ತಮ್ಮ ಮನಸ್ಸಿಗೊಪ್ಪುವಷ್ಟು ಸರಿಯಾದ ರಾಜಕೀಯವೆಂದು ಹಿಂದೂಗಳೆಲ್ಲ ಇನ್ನೊಂದು ಪಡೆಯಾಗಿ ಒಂದೇ ಸಂಘಟನೆಯಲ್ಲಿ ಮುಂದುವರೆಯಬಹುದಾದ ದೊಡ್ಡ ದುರಂತದ ಸಾಧ್ಯತೆಗಳು ಇವೆ. ಇಂದು ಹೈದ್ರಾಬಾದ್‌ನಲ್ಲಿ ಹಿಂದೂ ಹಾಗೂ ಮುಸಲ್ಮಾನರೂ ಒಗ್ಗೂಡಿ ಸಾವಿರಗಟ್ಟಲೆಯಾಗಿ ಅಷ್ಟೇ ಏಕೆ, ಲಕ್ಷಾಂತರ ಎನ್ನೋಣ – ಯಾವುದೋ ಬೇಡಿಕೆಯ ಈಡೇರಿಕೆಗಾಗಿ ನಗರದಲ್ಲಿ ಮೂರ್‍ನಾಲ್ಕು ಮೈಲುದ್ದ ಮೆರವಣಿಗೆ ಹೊರಟರೆ ಆಂಧ್ರಪ್ರದೇಶದಲ್ಲಿ ಮಾತ್ರವಲ್ಲ, ಇಡೀ ಭಾರತದಲ್ಲೇ ಮಿಂಚಿನ ಸಂಚಾರವಾಗುತ್ತದೆ. ಹಿಂದೂಗಳು ಮತ್ತು ಮುಸಲ್ಮಾನರು ಒಂದುಗೂಡಿ ಏನನ್ನೋ ಸಾಧಿಸಲು ಹೊರಟಿದ್ದಾರಲ್ಲ ಎಂದು ಎಲ್ಲರೂ ದಂಗಾಗಬಹುದು. ಇದು ಸಾಧ್ಯವಾಗುವುದು ಕೇವಲ ಹಿಂದೂಗಳು ಅಥವಾ ಮುಸಲ್ಮಾನರೆಂದು ಮತೀಯವಾಗಿ ಒಗ್ಗೂಡದೇ ತಮ್ಮ ತಮ್ಮ ಆಶಯಗಳ ದೃಷ್ಟಿಕೋನದಿಂದ ತಮಗೆ ಇಷ್ಟವಾದ ರಾಜಕೀಯವನ್ನು ಆಯ್ಕೆ ಮಾಡಿಕೊಂಡು ಇವರೆಲ್ಲ ಒಗ್ಗೂಡಿದಾಗ ಮಾತ್ರ'.[25]

ಎಲ್ಲ ಪೂರ್ವಗ್ರಹಗಳಿಂದ ಮುಕ್ತರಾದಾಗ ಮಾತ್ರ ಭಾರತ ನಿಜವಾದ ಅರ್ಥದಲ್ಲಿ ಒಂದುಗೂಡಲು ಸಾಧ್ಯ ಎಂದು ಲೋಹಿಯಾ ವಿಶ್ಲೇಷಿಸಿದ್ದಾರೆ.

ಚಿದಂಬರ ರಹಸ್ಯದಲ್ಲಿ ರಫಿ, ಮಹಮದ್, ಪಾಟೀಲ್, ಜಯರಾಂ, ರಾಮಚಂದ್ರ, ರಾಮಪ್ಪ, ಅಂಗಾರ, ಚಂದ್ರ, ರಮೇಶ ಜಯಂತಿ, ಜಾತ್ಯತೀತವಾದವನ್ನು ಪ್ರತಿಪಾದಿಸುವವರಾಗಿದ್ದಾರೆ. ಬೇರಿಯ ಆಳುಗಳು, ಸಾಕ್ಷನಾಶಮಾಡಲು ಬಂದು ಅವರೇ ನಾಶವಾಗುವುದು, 'ಅಯ್ಯಯ್ಯೋ ಯಾರ್ಮಾಡಿದ್ರಪ್ಪ ಈ ಕೆಲಸ! ಎಲ್ಲಾ ಬೆಂದು ಬೂದಿಯಾಗ್ತೀವಿ! ಓಡೋಗಿ ಓಡೋಗಿ ನಮ್ಕಡಿಂದ ಬೆಂಕಿ ಕೊಡಿ'[26] ಸಾಯುವುದು ಖಚಿತ ಎಂದು ಗೊತ್ತಿದ್ದರೂ ಮತೀಯ ವಿಷ ಉಗುಳುವ ಆಚಾರಿಯಂತವರಿಂದ ಪಾರಾಗಲೂ ರಫಿ ಮತ್ತು ಜಯಂತಿಯಹವರಿಗೆ ಮಾತ್ರ ಸಾಧ್ಯ. 'ನೋಡು ಜೇನುಕಲ್ಲಾಗುಡ್ಡದ ತುದಿ ಚೆನ್ನಾಗಿ ಕಾಣ್ತಿದೆ. ಕೆಸರೂರಿನ ಜನ ಈಗಲೂ ಎಲ್ಲಾ ಅಲ್ಲಿಗೆ ಓಡಿದರೆ ಬೆಂಕಿಯಿಂದ ತಪ್ಪಿಸಿಕೋಬಹುದು' ಎನ್ನುವ ಜಯಂತಿ ನಮಗೆ ಕಾಣ್ತಿದೆ! ಅವರಿಗೆ ಕಾಣ್ತದ? ಈ ಹೊಗೇಲಿ ಎನ್ನುವ ರಫಿ ನವ ಭಾರತದ ಆಡಂ ಮತ್ತು ಈವ್‌ರಂತೆ ಕಾಣುತ್ತಾರೆ. ಯಮಸಾಹಸದಿಂದ ಕಾಡೆಮ್ಮೆಗಳು ಜೇನುಕಲ್ಲುಗುಡ್ಡ ಹತ್ತಿದರು ಕೆಸರೂರಿನ ಜನ ಮತಾಂಧತೆಯಿಂದ ನಾಶಹೊಂದುವುದು ಮತೀಯವಾದದ ದುರಂತವಾಗಿದೆ.

ಧರ್ಮ ಮತ್ತು ರಾಜಕಾರಣ: ಲೋಹಿಯಾರವರ ಪ್ರಕಾರ 'ಧರ್ಮ ಮತ್ತು ರಾಜಕಾರಣ ಇವೆರಡರ ನಡುವೆ ಇರುವ ಸಂಬಂಧ ಇಂದು ಕೆಟ್ಟು ಹೋಗಿದೆ ಧರ್ಮ ದೀರ್ಘಕಾಲದ ರಾಜಕಾರಣವಾದರೆ, ರಾಜಕಾರಣ ಅಲ್ಪಕಾಲದ ಧರ್ಮ. ಧರ್ಮ ಶ್ರೇಯಸ್ಸನ್ನು ಗಳಿಸಿಕೊಳ್ಳುವ ಪ್ರಯತ್ನಮಾಡಿದರೆ, ರಾಜಕಾರಣ ಕೆಟ್ಟದ್ದರೊಂದಿಗೆ ಹೋರಾಡುತ್ತದೆ. ನಾವು ಇಂದು ಎಂಥ ದೌರ್ಭಾಗ್ಯದ ಪರಿಸ್ಥಿತಿಯಲ್ಲಿದ್ದೇವೆಂದರೆ ಕೆಟ್ಟದ್ದರ ವಿರುದ್ಧವಾಗಿ ನಡೆಸುವ ಹೋರಾಟದಲ್ಲಿ ಧರ್ಮದ ಪಾತ್ರ ಏನೇನೂ ಇಲ್ಲವಾಗಿದೆ. ಅದು ನಿರ್ಜೀವವಾಗಿದೆ. ಜೊತೆಗೆ, ರಾಜನೀತಿ ವಿಪರೀತ ಕಲಹಗಳಿಂದ ಕೂಡಿದೆ ಹಾಗೂ ನಿಷ್ಪ್ರಯೋಜಕವಾಗಿದೆ.'[27]

ಲೋಹಿಯಾ ಸೂಕ್ಷ್ಮವಾಗಿ ಧರ್ಮ ಮತ್ತು ರಾಜಕೀಯ ಮಿಲಾಕತ್ತಾಗಿ ಕಲುಷಿತಗೊಂಡಿರುವುದನ್ನು ವಿಶ್ಲೇಷಿಸುತ್ತಾರೆ. ಎಲ್ಲಿ ಧರ್ಮ ಮತ್ತು ರಾಜಕಾರಣ ಒಟ್ಟುಗೂಡುತ್ತದೋ ಆ ಸಮಾಜ ಭ್ರಷ್ಟತೆ ಕಡೆಗೆ ಚಲಿಸುತ್ತದೆ ಎಂದು ಲೋಹಿಯಾ ವಿವರಿಸುತ್ತಾರೆ. ಸಂಶೋಧನ ಕೇಂದ್ರದ ರಾಜಕಾರಣದ ಬಗ್ಗೆ ಪಾಟೀಲರು 'ಈಗ

ಸಂಶೋಧನ ಕೇಂದ್ರದ ರಾಜಕಾರಣಕ್ಕೆ ಸ್ಥಳೀಯ ರಾಜಕೀಯಾನು ಮಿಲಾಕತ್ತಾಗಿ ಹೋಗಿದೆ. ಅದರ ವಿಷ್ಯ ಕೊಂಚ ಹೇಳ್ತೀನಿ ಕೇಳಿ. ಇಲ್ಲೆಲ್ಲಾ ಸುತ್ಮುತ್ತಾ ಕೇರಳದ ಬ್ಯಾರಿಗಳ ವಠಾರ ಬೆಳೆದಿದೆ. ಎಲ್ಲಾ ಸುಲೇಮಾನ್ ಬ್ಯಾರಿ ಕೈಕೆಳಗೆ ಕೆಲಸ ಮಾಡೋದು. ಆತನೊಬ್ಬ ಪ್ರಖ್ಯಾತ ಕಳ್ಳ ಸಾಗಾಣಿಕೆದಾರ. ಎಲ್ಲಾ ಕೆಸರೂರಿನ ಮುನಿಸಿಪಾಲಿಟಿ, ಗ್ರಾಮಪಂಚಾಯ್ತಿ ತಾಲ್ಲೂಕು ಬೋರ್ಡು ರಾಜಕಾರಣದ ಪಾತ್ರಧಾರಿಗಳು ಈಗ ಅವನು ಇವರಿಗೆ ಒಂದು ಮಸೀದಿ ಕಟ್ಟಿಸಿದ್ದಾನೆ. ದಿನಾ ಅಲ್ಲಾ ಹೋ ಅಕ್ಬರ್ ಅಂತ ಕಿವಿಗಡಚಿಕ್ಕುವಂತೆ ಕೂಗ್ತಾರೆ. ಪೈಗಂಬರ್ ಕಾಲದಲ್ಲಿ ಮೈಕ್ ಇತ್ತೊ ಏನೋ, ಕೇಳಹೋದರೆ ಖುರಾನ್ ಪ್ರಕಾರ ಮಾಡ್ತಿದೀವಿ, ಅಂತಾರೆ, ಅವರ ಹೋರಾಟಕ್ಕೆ, ರಾಜಕಾರಣಕ್ಕೆ ಮಸೀದಿ ಸಂಕೇತ. ರಾಜಕಾರಣಕ್ಕೆ ಮತ ಧರ್ಮ ಹೇಗೆ ಉಪಯೋಗಿಸ್ಕೋಬೇಕಂತ ಆತ ಚೆನ್ನಾಗಿ ಬಲ್ಲ. ಅವನು ಮಸೀದಿ ಕಟ್ಟಿ ಆರ್ಭಟ ಆರಂಭಿಸೋದಕ್ಕೂ ಇಲ್ಲಿನ ಕನ್ನಡಿಗರಿಗೆ, ಹಿಂದೂಗಳಿಗೆ ಎಚ್ಚರ ಆಯ್ತು. ನಮ್ಮ ಸಂಶೋಧನ ಕೇಂದ್ರದಲ್ಲಿ ಸುಮಾರು ಜನ ಹಾರುವರು, ಲಿಂಗಾಯತರು, ಒಕ್ಕಲಿಗರು, ಹಿಂದೂವಾದಿಗಳಿದ್ದಾರೆ. ನಮ್ಮ ಸಂಶೋಧನ ಕೇಂದ್ರದ ಬೇಲಿಯೊಳಗೊಂದು ಮುರುಕಲು ಗುಡಿ ಇತ್ತು. ಅದನ್ನು ಉದ್ಭವ ವೆಂಕಟೇಶ್ವರ ಸ್ವಾಮಿ ಅಂತ ನಾಮಕರಣ ಮಾಡಿದರು. ಕೇರಳದ ಸಾಬರ ಕೊಬ್ಬು ಅಡಗಿಸ್ತೀವೆ ಅಂತ ಇವರು ಮೈಕ್ ಹಾಕಿಕೊಂಡು ಜಗನ್ನಾಥ ಸ್ತೋತ್ರ, ವೆಂಕಟೇಶ್ವರ ಸ್ತೋತ್ರ ಎಲ್ಲಾ ಕೂಗಿಸೋದಕ್ಕೆ ಆರಂಭಿಸಿದ್ದಾರೆ. ಡಾ॥ಜೋಗಿಹಾಳ್ ಇದ್ದಾಗಲೇ ಅವರ ಅಸಮ್ಮತಿ ಪ್ರತಿಭಟನೆ ಎಲ್ಲಾ ಮೀರಿ ಸುತ್ತಮುತ್ತಲ ಪ್ರತಿಷ್ಠಿತ ಗೌಡರ ಸಹಾಯದಿಂದ ಇದನ್ನೆಲ್ಲಾ ಆರಂಭಿಸೇಬಿಟ್ಟರು. ಇದಕ್ಕೆ ತಿರುಪತಿ ಕಡೆಯವರಿಂದಲು ಕುಮ್ಮಕ್ಕು ಧನಸಹಾಯ, ಇಲ್ಲಿ ಬೆಳೆಯುತ್ತಿರೋ ಧರ್ಮಸ್ಥಳದ ಪ್ರಭಾವ ಕಡಿಮೆ ಮಾಡಬೇಕು ಅಂತ ಅವರ ಕುತಂತ್ರ. ಜೋಗಿಹಾಳರನ್ನು ಇಲ್ಲಿಂದ ಗುಡಾರ ಎತ್ತಿಸೋದಕ್ಕೆ ಈ ಊರಿನ ಎಂ.ಎಲ್.ಎ., ಎಂ.ಎಲ್.ಸಿ ಎಲ್ಲ ಶತಪ್ರಯತ್ನ ಮಾಡಿ ವರ್ಗ ಮಾಡಿಸಿದ್ದರು. ಆದರೆ ಇಲ್ಲಿನ ಎಂ.ಪಿ.ಶಾಂತಗೌಡರು ಕೇಂದ್ರ ಸರ್ಕಾರದ ಆದೇಶದ ಮೇಲೆ ತನಿಖೆ ಮಾಡಿ ಅವರನ್ನು ಅವರ ಸಂಶೋಧನೆ ಮುಗಿಯೋವರೆಗೂ ತೆಗೆಯಬಾರದು ಅಂತ ಶಿಫಾರಸ್ ಮಾಡಿದ್ದರಿಂದ ಇಲ್ಲೆ ಉಳಿದರು.'[28]

ಇಂಡಿಯಾದಲ್ಲಿ ವಿಜ್ಞಾನ ಕೇಂದ್ರಗಳು ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗುವುದರ ಬದಲು ಪಾಕಿಸ್ಥಾನ ಗಜನಿ ಕ್ಷಿಪಣಿ ಉಡಾಯಿಸಿದರೆ, ಭಾರತ ಅಗ್ನಿಕ್ಷಿಪಣಿ ಉಡಾಯಿಸುವ ಹಾಗೆ ಎದುರಾಳಿಗಳ ಮೇಲೆ ದ್ವೇಷ ಮೂಡಿಸುವ

ಕೇಂದ್ರಗಳಾಗಿರುವುದು ದುರಂತವೇ ಸರಿ. ಸಂಶೋಧನಾ ಕೇಂದ್ರವಷ್ಟೇ ಅಲ್ಲದೇ ಶಾಲಾ ಕಾಲೇಜುಗಳು ಧಾರ್ಮಿಕ ರಾಜಕಾರಣಕ್ಕೆ ಆತುಕೊಂಡಿರುವುದನ್ನು ಈ ಕಾದಂಬರಿ ಹೇಳುತ್ತದೆ. ಜೂನಿಯರ್ ಕಾಲೇಜಿನ ಪ್ರಿನ್ಸಿಪಾಲ ಹಿಂದೂವಾದಿಗಳ ಜೊತೆ ಸೇರಿಕೊಂಡು ವಿಚಾರವಾದಿಯಾದ ಪಾಟೀಲರನ್ನು ತಮ್ಮ ಕಡೆಗೆ ಸೆಳೆಯುವ ಪ್ರಯತ್ನ, ಅನ್ಯಧರ್ಮೀಯ ವಿದ್ಯಾರ್ಥಿಗಳ ಮೇಲೆ ಶಿಕ್ಷಾ ಕ್ರಮ ಕೈಗೊಳ್ಳುವುದು ಧರ್ಮ ಮತ್ತು ರಾಜಕಾರಣ ಒಂದಾದಾಗ ಆಗುವ ಅಪಾಯವಾಗಿದೆ. 'ಈ ಇಬ್ಬರೂ ಹುಡುಗರ ಪ್ರೀತಿಯನ್ನೇ ಹೇಗೆ ಎರಡು ಗುಂಪುಗಳೂ ತಮ್ಮ ರಾಜಕೀಯಕ್ಕೆ ಉಪಯೋಗಿಸತೊಡಗಿವೆ ಎಂದು ಈಗಲೇ ಮದುವೆ ಮಾಡೋದಕ್ಕೆ ತವಕಗೊಂಡಿರೋ ಹಿಂದೂಗಳನ್ನು ನೋಡಿ ಹೇಸಿಗೆಯಾಯ್ತು. ಜಯಂತಿಯ ಸುಂದರ ಮುಖಕ್ಕೆ ಆಸಿಡ್ ಎಸೆಯೋದಕ್ಕೆ ತಯ್ಯಾರಿರುವ ಮುಸ್ಲಿಮರ ಬಗೆಗೆ ವಾಕರಿಕೆ ಬಂತು.'[29] ರಾಮಚಂದ್ರನಿಗೆ ಉಂಟಾಗುವ ಈ ಕಳವಳ ಎಲ್ಲಾ ಮಾನವೀಯ ಮನಸ್ಸುಗಳ ಕಳವಳವಾಗಿದೆ.

'ಧರ್ಮ ಮತ್ತು ರಾಜಕಾರಣ ಇವೆರಡೂ ವಿವೇಕರಹಿತವಾಗಿ ಜೊತೆಗೂಡಿದಾಗ ಎರಡೂ ಭ್ರಷ್ಟಗೊಳ್ಳುತ್ತವೆ. ಯಾವುದೇ ಒಂದು ಧರ್ಮ ಯಾವುದೇ ಒಂದು ರಾಜಕಾರಣದೊಡನೆ ಎಂದೂ ಜೊತೆ ಜೊತೆಗೂಡಬಾರದು. ಇದರಿಂದಾಗಿಯೇ ಸಾಂಪ್ರದಾಯಿಕ ಸೇರ್ಪಡೆಯಿಂದ ಹಾಗೂ ಮತಾಂಧತೆಯಿಂದ ನಾವು ಬಚಾವಾಗಬೇಕು ಎನ್ನುವುದು ಇನ್ನೊಂದು ಉದ್ದೇಶವೆಂದರೆ ರಾಜಕಾರಣದ ದಂಡನೆ ಮತ್ತು ಧಾರ್ಮಿಕ ವ್ಯವಸ್ಥೆಗಳನ್ನೂ ಬೇರೆ ಬೇರೆಯಾಗಿಡಬೇಕು. ಇಲ್ಲದಿದ್ದರೆ ಕಂದಾಚಾರಗಳು ಹೆಚ್ಚಾಗಬಹುದು, ಅತ್ಯಾಚಾರ ಹೆಮ್ಮರವಾಗಬಹುದು, ಇಷ್ಟೆಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡೂ, ಧರ್ಮ ಮತ್ತು ರಾಜಕಾರಣ ಒಂದರೊಡನೊಂದು ಕೊಂಡಿ ಕಳಚಿಕೊಳ್ಳಲು ಬಿಡಬಾರದು. ಅಗತ್ಯವಾದ ದೂರವನ್ನು ಉಳಿಸಿಕೊಂಡೇ ಅವು ಒಟ್ಟಿಗೆ ಮುಂದುವರಿಯಬೇಕು.'[30]

ಧರ್ಮ ಮತ್ತು ರಾಜಕಾರಣ ವಿವೇಕರಹಿತವಾಗಿ ಒಂದುಗೂಡಿದಾಗ ಉಂಟಾಗುವ ಘೋರ ಪರಿಣಾಮ ಮಾನವೀಯತೆಯ ನಾಶವಾಗಿದೆ. ಲೋಹಿಯಾರ ಈ ಮಾತುಗಳ ಬೆಳಕಿನಲ್ಲಿ 'ಚಿದಂಬರ ರಹಸ್ಯ' ಈ ಕಾದಂಬರಿಯನ್ನು ಓದಿದಾಗ ಈ ಕಾಲದಲ್ಲಿ ಭಾರತ ಎದುರಿಸುತ್ತಿರುವ ಮತೀಯವಾದಿ ಬಿಕ್ಕಟ್ಟಿಗೆ ಕೆಲವು ಉತ್ತರಗಳು ಕಾಣುತ್ತವೆ.

ಪ್ರಜ್ಞೆ ಮತ್ತು ಪರಿಸರ ನಡುವಣ ಸಂಬಂಧ :

'ವ್ಯಕ್ತಿತ್ವಕ್ಕೂ ಪ್ರಜ್ಞೆಗೂ, ಉತ್ಪಾದನಾ ವಿಧಾನಕ್ಕೂ ಮತ್ತು ಪ್ರಜ್ಞೆಯ ಅಭಿವ್ಯಕ್ತಿಗೂ ಯಾವ ಬಗೆಯ ಸಂಬಂಧವಿದೆ ಎಂಬುದನ್ನು ವಿವರವಾಗಿ ಹಾಗೂ ಒಟ್ಟಂದದಲ್ಲಿ ಯಾರೂ ಈವರೆಗೂ ಪರೀಕ್ಷಿಸಿಲ್ಲ. ಪ್ರಜ್ಞೆಯ ಅಭಿವ್ಯಕ್ತಿ ತನ್ನದೇ ಆದ ಶೈಲಿ ಮತ್ತು ಪ್ರಾಮುಖ್ಯತೆಯನ್ನೂ ಮತ್ತು ಚಿಂತನ ಲಕ್ಷಣಗಳನ್ನು ಹೊಂದಿರಬಹುದು.

ತತ್ವಚಿಂತನ ಮತ್ತು ಸಾಹಿತ್ಯ ಎರಡೂ ಸ್ವತಂತ್ರವಾದ ಪ್ರಾಮುಖ್ಯತೆ ಹೊಂದಿರಬೇಕೆಂದರೆ ಅವಕ್ಕೆ ಸಾಮಾಜಿಕ ಬದಲಾವಣೆಗಳ ಮೇಲೆ ಪ್ರಭಾವ ಬೀರುವಂಥ ಶಕ್ತಿ ಸಾಮರ್ಥ್ಯಗಳಿವೆ ಎಂದು ಹೇಳುವ ಡೈಲೆಕ್ಟಿಕಲ್ ಭೌತ ಪಂಥಗಳು ಬೇಕಾದಷ್ಟು ಇವೆ.'[31] ಮನುಷ್ಯನ ಪ್ರಜ್ಞೆ ಸ್ವತಂತ್ರವೋ, ಅಧೀನವೋ, ಎಂಬ ಪ್ರಶ್ನೆಯನ್ನು ಲೋಹಿಯಾ ಎತ್ತುತ್ತಾರೆ:

'ಮಾರ್ಕ್ಸ್ ಮನುಷ್ಯರು ಒಮ್ಮೊಮ್ಮೆ ತಮ್ಮ ಜೀವನದಲ್ಲಿ ಇತಿಹಾಸ ನಿರ್ಮಾಣ ಮಾಡುತ್ತಾರೆಂದು ಒಪ್ಪುತ್ತಾನಾದರೂ ಅವರು ಮಾಡುವುದು ತಾವು ಬದುಕಿದ ಕಾಲ ದೇಶದ ಪರಿಧಿ ಒಳಗೆ ಮಾತ್ರ ಎಂದು ಹೇಳುತ್ತಾನೆ. ಇದೊಂದು ಸತ್ಯವಾದ ಹೇಳಿಕೆಯಾದರೂ ಅದು ಯಾವುದೇ ದೊಡ್ಡ ಹೇಳಿಕೆಯಷ್ಟೇ ಅಗ್ರಾಹ್ಯವಾದ ಸತ್ಯದಿಂದ ಕೂಡಿದೆ. ಓದುಗನು ಅದಕ್ಕೆ ಯಾವ ಅರ್ಥವನ್ನು ಆರೋಪಿಸುತ್ತಾನೋ ಅದನ್ನು ಅದು ಅವಲಂಬಿಸುತ್ತದೆ.'[32]

ಮಾರ್ಕ್ಸ್‌ನ ಪ್ರಕಾರ ಮನುಷ್ಯನ ಪ್ರಜ್ಞೆ ಏನನ್ನಾದರೂ ಮಾಡಲು ಶಕ್ಯವಿರುವುದು ಕಾಲದ ಪರಿಧಿಯೊಳಗೆ ಎನ್ನುವುದನ್ನು ಲೋಹಿಯಾರು ಒಪ್ಪಿಕೊಳ್ಳುವುದಿಲ್ಲ. ಚಿದಂಬರ ರಹಸ್ಯದಲ್ಲಿ ಅಂಗಾಡಿ ಮತ್ತು ಜಯರಾಂ ನಡುವಿನ ಸಂಭಾಷಣೆಯಿಂದ ಪ್ರಜ್ಞೆ ಮತ್ತು ಪರಿಸರಕ್ಕಿರುವ ಸಂಬಂಧವನ್ನು ಪರಿಶೀಲಿಸಬಹುದಾಗಿದೆ. 'ಒಬ್ಬ ನಿಜವಾದ ಕಲಾವಿದನಿಗೆ ಸಾಕಷ್ಟು ಸತ್ಯಾಂಶವಿರುವ ಸಾಮಗ್ರಿ ಒದಗಿಸಿದರೆ ಅವನು ವಾಸ್ತವಕ್ಕೆ ತೀರಾ ಸಮೀಪವಾದ ಕತೆ ಸೃಷ್ಟಿಸಬಲ್ಲ ಎನ್ನಲಿಲ್ಲವೆ' ಎಂದು ಪ್ರಶ್ನಿಸುವ ಅಂಗಾಡಿ ವಾಸ್ತವವಾದಿ ಬರಹಗಾರನ ಪ್ರಜ್ಞೆಯನ್ನು ವಿವರಿಸುತ್ತಾನೆ. 'ಕಲಾವಿದನ ಇಚ್ಛೆ ಮೇಲೆ ಅವೆಲ್ಲಾ ನಿಂತಿವೆ. ಅವರು ಇಷ್ಟಪಟ್ಟರೆ ಒಂದು ಪಾತ್ರ ಒಳ್ಳೆಯವನಾಗುತ್ತಾನೆ ಇಲ್ಲಾ ಕೇಡಿಯಾಗುತ್ತಾನೆ' ಎನ್ನುವ ಹೆಗ್ಡೆಗೆ 'ನೋ ನೋ ನೋ ನಾನಂತೂ ಇದನ್ನ ಒಪ್ಪೋದಿಲ್ಲ. ಇದು ಅತ್ಯಂತ ಗಂಭೀರವಾದ ಪ್ರಶ್ನೆ ತಿಳುಕೊಳ್ಳಿ, ಎಂಥ ಕಾಲ್ಪನಿಕ ಕತೆ ಆದರೂ ಅದರಲ್ಲಿನ ಪಾತ್ರಗಳನ್ನು ಮನಬಂದಂತೆ

ರೂಪಿಸೋದು ಅಸಾಧ್ಯ. ಅವು ತನ್ನದೇ ಆದ ನಿಯಮಗಳ ಪ್ರಕಾರ ವ್ಯಕ್ತಿತ್ವ ರೂಪಿಸಿಕೊಳ್ಳುತ್ತಾ ವಿಕಾಸವಾಗುತ್ತಾ ಹೋಗ್ತವೆ. ಹೇಗೆ ಜೀವನದಲ್ಲಿ ವ್ಯಕ್ತಿಗಳ ನಡವಳಿಕೆಗೆ ಆರ್ಥಿಕ, ಸಾಮಾಜಿಕ ಆನುಷಂಗಿಕ ಕಾರಣಗಳಿರ್ತವೆಯೋ ಹಾಗೇ ಕಲಾಕೃತಿಗಳೂ ಕೂಡ. ಇದಕ್ಕೆ ವ್ಯತಿರಿಕ್ತವಾದಾಗ ಅದೊಂದು ಕೀಳು ಕಲಾಕೃತಿ ಅನ್ನುತ್ತೇವೆ.'[33]

ರಾಮಚಂದ್ರ ನೀಡುವ ಉತ್ತರ ಮಾರ್ಕ್ಸ್‌ನ ತಾತ್ವಿಕತೆ ವಿಶ್ಲೇಷಣೆಯನ್ನು ಆಧರಿಸಿದ ಮಾರ್ಕ್ಸ್‌ನ ಪ್ರಕಾರ ಮನುಷ್ಯನ ನಡವಳಿಕೆಗೆ ಆತನ ಹಿನ್ನೆಲೆಯಲ್ಲಿರುವ ಆರ್ಥಿಕ, ಸಾಮಾಜಿಕ ಕಾರಣಗಳು ನಿರ್ಧಾರಕ ಅಂಶಗಳಾಗಿವೆ. 'ನೀನು ಹೇಳೋದನ್ನ ನಾನು ಕೆಲಮಟ್ಟಿಗೆ ಒಪ್ತೀನಯ್ಯಾ. ಆದರೂ ಜೀವನದಲ್ಲಿ ಮತ್ತು ವಾಸ್ತವ ಜಗತ್ತಿನಲ್ಲಿ ವ್ಯಕ್ತಿಗಳೂ ಒಳ್ಳೆಯವರೂ ಕೆಟ್ಟವರೂ ಆಗೋದಕ್ಕೆ ಅವಕಾಶ, ಸ್ವಾತಂತ್ರ್ಯ ಇಲ್ಲವೇ! ಹಾಗೇ ಕಾದಂಬರಿಯಲ್ಲೂ' ಎನ್ನುವ ಜಯರಾಂ ಮನುಷ್ಯನ ಪ್ರಜ್ಞೆ ಅವಕಾಶ ಸ್ವಾತಂತ್ರ್ಯದಿಂದಲೂ ನಿರ್ಧಾರಿತವಾಗುತ್ತದೆ. 'ನೋ ನೋ ನೋ, ಸ್ವಾತಂತ್ರ್ಯದ ಭ್ರಮೆಯಲ್ಲಿ ನಾವು ಪರಿಸರ ಮತ್ತು ಸನ್ನಿವೇಶಗಳ ವಿಧಿನಿಯಮಗಳ ಪ್ರಕಾರನೇ ವರ್ತಿಸುತ್ತೇವೆ. ಕತೆಯಲ್ಲೂ ಹಾಗೆ, ಒಂದು ಕತೆಯ ಕೊನೆಯನ್ನು ನೀನು ಬದಲಾಯಿಸಬೇಕಾಗಿ ಬಂದರೂ ಅದನ್ನು ಮೊದಲಿನಿಂದಲೂ ತಿದ್ದಬೇಕಾಗುತ್ತೆ.' ಪರಿಸರದ ಭಾಗವಾದ ಪ್ರಜ್ಞೆ ಮತ್ತು ಕಲಾಕೃತಿಗಳೂ ಎರಡೂ ವಿಭಿನ್ನವಾಗಿದೆ ಎಂಬುದು ರಾಮಚಂದ್ರನ ವಾದವಾದರೆ, 'ಇರಬಹುದು, ಸ್ವಾತಂತ್ರ್ಯದ ಭ್ರಮೆಯಲ್ಲಿಯೇ ನಾವು ನಿಯಮಗಳ ಬಂಧಿಗಳಾಗಿರಬಹುದು. ಆದರೆ ನಾವು ಸ್ವತಂತ್ರರೋ, ನಿಯಮಗಳ ಬಂಧಿಗಳೋ ಪರೀಕ್ಷಿಸಿ ಪತ್ತೆ ಹಚ್ಚುವುದು ಜೀವನದಲ್ಲಂತೂ ಸಾಧ್ಯವೇ ಇಲ್ಲ. ಕಾಲ ದೇಶಗಳ ವರ್ತಮಾನದ ಒಂದು ಕ್ಷಣದಲ್ಲಿ ಏಕಕಾಲದಲ್ಲಿ ಎರಡು ರೀತಿಗಳಲ್ಲಿ ವರ್ತಿಸಬಹುದಾದ ಸ್ವಾತಂತ್ರ್ಯ ನಿನಗೆ ಸಿಕ್ಕಾಗ ಮಾತ್ರ ಅದನ್ನು ನಾವು ಪತ್ತೆ ಹಚ್ಚಲು ಸಾಧ್ಯ. ಕಾಲ ದೇಶಗಳ ಈ ವರ್ತಮಾನದ ಕ್ಷಣಗಳಲ್ಲಿ ನಮಗೆ ಒಮ್ಮೆ ಒಂದೇ ಒಂದು ಸಾರಿ ಮಾತ್ರ ವರ್ತಿಸೋ ಸ್ವಾತಂತ್ರ್ಯ ಅಥವಾ ಬಂಧನ ಇರುವುದು.'[34]

ಮಾರ್ಕ್ಸ್, ಹೇಳುವ ಹಾಗೆ ಮನುಷ್ಯರು ಇತಿಹಾಸ ನಿರ್ಮಾಣಮಾಡುವುದು ಕಾಲದೇಶದ ಪರಿಧಿ ಒಳಗೆ ಮಾತ್ರ, ಎನ್ನುವಂತೆ ಜಯರಾಂ ಮನುಷ್ಯನ ಪ್ರಜ್ಞೆ ಅನ್ನೋದು ಒಂದು ಕಾಲದೇಶದ ವರ್ತಮಾನದ ಒಂದು ಕ್ಷಣದಲ್ಲಿ ಪ್ರಕಟಗೊಳ್ಳುವಂತಹದ್ದು ಎನ್ನುತ್ತಾನೆ. ರಾಮಚಂದ್ರ ಅಂಗಾಡಿಗೆ 'ನೀವು ಮಾರ್ಕ್ಸ್‌ವಾದಿ ಆಗಿದ್ದಿರಾ ಹೇಳಿ' ಎಂದು ಕೇಳುವ ಪ್ರಶ್ನೆ ಇದನ್ನು ಮತ್ತಷ್ಟು ಪುಷ್ಟಿಗೊಳಿಸುತ್ತದೆ. 'ನಾನು ಮಾರ್ಕ್ಸ್‌ವಾದಿಯಾಗಲೀ,

ಕಮ್ಯುನಿಸ್ಟ್ ಪಕ್ಷದವನಾಗಲೀ ಅಲ್ಲ. ನಾನು ಬಂಗಾಳದಲ್ಲಿ ಸಿಬಿಐ ಕೆಲಸದಲ್ಲಿದ್ದಾಗ ಅಲ್ಲಿನ ಮಾರ್ಕ್ಸ್‌ವಾದಿಗಳ ನಿಕಟ ಪರಿಚಯ ಇತ್ತು. ಮಾರ್ಕ್ಸ್ ಸಿದ್ಧಾಂತಗಳ ಬಗ್ಗೆ ತಿಳುವಳಿಕೆ ಇದೆಯೇ ಹೊರತು ಆ ಪಕ್ಷದ ಜೊತೆ ಏನೂ ಸಂಬಂಧ ಇಲ್ಲ. ಅದಿರಲಿ ನಿಮಗೇಕೆ ಇದ್ದಕ್ಕಿದ್ದಂತೆ ಆ ಬಗ್ಗೆ ಕುತೂಹಲ ಉಂಟಾಯ್ತು?' ಎಂದು ಕೇಳುವ ಅಂಗಾಡಿಗೆ 'ಏನಿಲ್ಲ ಅಂಗಾಡಿ, ನಾನು ನಂಬಿರುವ ತತ್ವಗಳೂ ಸಿದ್ಧಾಂತಗಳು ನಮ್ಮ ದೃಷ್ಟಿ ಮತ್ತು ಅರಿವಿನ ಮೇಲೆ ಗಾಢವಾದ ಪರಿಣಾಮ ಬೀರುತ್ತವೆ. ಮಾರ್ಕ್ಸ್ ಇಡೀ ಮನುಷ್ಯನ ಚರಿತ್ರೆಯನ್ನು ಕೆಲವು ಚಾರಿತ್ರಿಕ ನಿಯಮಗಳಿಗೆ ಅನುಸಾರವಾಗಿ ವಿಕಾಸಗೊಂಡಿದೆ ಅಂತ ವಿಶ್ಲೇಷಿಸಿದ. ಅಂದರೆ ಮನುಷ್ಯ ಪ್ರಜ್ಞೆ ಸ್ವಾತಂತ್ರ್ಯದ ಭ್ರಮೆಯಲ್ಲಿ ಕೆಲವು ನಿಯಮಗಳಿಗೆ ಅನುಸಾರವಾಗಿ ಅಧೀನವಾಗಿ ವರ್ತಿಸುತ್ತೆ ಅಂತ ಹೇಳಿದ. ಕೆಲವು ಸಂಗತಿಗಳನ್ನು ಹೇಳಿದರೆ ಜಯರಾಮನ ಕಲ್ಪನೆ ಕರಾರುವಾಕ್ಕಾಗಿ ಮುಂದಿನದನ್ನು ಕಲ್ಪಿಸುತ್ತೆ ಎನ್ನುವ ನಿಮ್ಮ ನಂಬಿಕೆಗೆ ಮಾರ್ಕ್ಸ್‌ವಾದದ ಪ್ರಭಾವವಿರಬಹುದು.' ಎಂದೆನ್ನುವ ರಾಮಚಂದ್ರನ ವಿವರಣೆ ಮನುಷ್ಯನ ಪ್ರಜ್ಞೆ ಸ್ವತಂತ್ರವೋ ಅಧೀನವೋ ಎಂಬುದರ ಮೇಲೆ ನಿಂತಿದೆ. ಅಂಗಾಡಿಯ ಸತ್ಯಾನ್ವೇಷಣೆಗಿಂತ, ಪಾಟೀಲರ ಸತ್ಯಾನ್ವೇಷಣೆಗಿಂತ ಭಿನ್ನವಾದ ಸತ್ಯಾನ್ವೇಷಣೆ ಜಯರಾಂನದಾಗಿದೆ. 'ಜೀವನದ ಸ್ವರೂಪ ಏನು? ಅನುಭವ ಮತ್ತು ಅವುಗಳಿಗೆ ಮೂಲಾಧಾರವಾದ ಮಾನವನ ನಡವಳಿಕೆಗಳ ಸ್ವರೂಪ ಏನು? ಇದೇ ನನ್ನ ಚಿದಂಬರ ರಹಸ್ಯ. ಇಡೀ ಗ್ರಹತಾರೆ ನಿಹಾರಿಕೆಗಳ ಈ ವಿಶ್ವವೆಲ್ಲಾ ತಮ್ಮ ತಮ್ಮ ನಿಯಮಕ್ಕೆ ಬದ್ಧವಾಗಿ ವರ್ತಿಸುತ್ತಿವೆ. ಪ್ರತಿಯೊಂದು ಅಣು ಪರಮಾಣುವಿನಲ್ಲೂ ಎಲೆಕ್ಟ್ರಾನ್‌ಗಳು ಪ್ರೋಟಾನ್‌ಗಳೂ ತಮ್ಮ ನಿಯಮಗಳ ಸರಹದ್ದಿನಲ್ಲಿ ಸುತ್ತುತ್ತಿವೆ. ಅಂಥದರಲ್ಲಿ ಇದರಿಂದ ಹೊಮ್ಮಿದ ಈ ಪ್ರಜ್ಞೆ ನಿಯಮಾತೀತವೆ? ನಿಜವಾಗಿಯೂ ಸ್ವತಂತ್ರವೆ?'[35] ಜಯರಾಂನಿಗೆ ಕಾಡುವ ಈ ಪ್ರಶ್ನೆ ಚಿದಂಬರ ರಹಸ್ಯವಾಗಿದೆ.

ವಿಶ್ವದ ಚಲನೆ ನಿಯಮಬದ್ಧವಾಗಿದ್ದರೆ ಮನುಷ್ಯನ ಪ್ರಜ್ಞೆ ನಿಯಮಾತೀತವೇ? ಸ್ವತಂತ್ರವೆ? ಭ್ರಮೆಯೇ? ಎಂಬ ಜಟಿಲ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಪಾಟೀಲರು ಬಿಡಿಸುವುದು ಕರಾರುವಾಕ್ಕಾಗಿದೆ. ಜೋಗಿಹಾಳರು ಸತ್ತಿಲ್ಲ ಎಂದು ವಾದಿಸುವ ಪಾಟೀಲರಿಗೆ 'ನಿಮ್ಮ ಕತೆಯಿಂದ ನಮ್ಮ ಕತೇನ ಸುಳ್ಳು ಮಾಡಬಹುದಷ್ಟೆ ಹೊರತು ನಮ್ಮ ತತ್ವಾನ್ವೇಷಣೆಗೆ ಏನೂ ಸಹಾಯ ಆಗ್ತಿಲ್ಲಾ ಸಾರ್. ಈಗ ಈ ಕತೆಯಿಂದ ಪ್ರಜ್ಞೆ ಅನ್ನೋದು ವಿಧಿನಿಯಮಗಳ ಅಧೀನ ಅಂತ ಸಾಧಿಸಿದರೋ?' ಸ್ವತಂತ್ರ ಅಂತ ಸಾಧಿಸಿದರೋ? ಎಂದು ಪ್ರಶ್ನಿಸುವ ರಾಮಚಂದ್ರನಿಗೆ ಪಾಟೀಲರು 'ಎರಡೂ ಸುಳ್ಳು' ಎನ್ನುತ್ತಾರೆ. 'ಎರಡೂ

ಸುಳ್ಳಾಗೋದಕ್ಕೆ ಅಥವಾ ಎರಡೂ ಸತ್ಯ ಆಗೋದಕ್ಕೆ ಸಾಧ್ಯಾನೇ ಇಲ್ಲಾ ಸಾರ್. ನಿಮ್ಮ ವಾದ ತೀರ ಅವೈಜ್ಞಾನಿಕ'. ಎನ್ನುವ ರಾಮಚಂದ್ರನಿಗೆ 'ರಾಮಚಂದ್ರ ನಿಮ್ಮ ತರ್ಕ ಎಲ್ಲಾ ಎರಡರಲ್ಲಿ ಒಂದು ಸುಳ್ಳಾಗಬೇಕಾದ ಭೂಮಿಕೆಗೆ ಸೇರಿದ್ದು. ನಾವೂ ಎಲ್ಲ ಯಾವುದೋ ಒಂದು ನಂಬಿಕೆ ಮೇಲೆ ಒಂದನ್ನು ವಾಸ್ತವ ಸತ್ಯಾಂಶ ತಿಳಿದು ಕಾರ್ಯಕಾರಣ ಪ್ರಪಂಚಾನ ನಿರ್ಮಿಸಿದ್ದೇವೆ. ಆ ಪರಿಧಿಯೊಳಗೆ ನಮ್ಮ ಗ್ರಹಿಕೆಗಳು ಎರಡರಲ್ಲಿ ಒಂದು ಸತ್ಯ ಆಗೋದು. ಈಗ ನೋಡಿ ಜೋಗಿಹಾಳರು ಸತ್ತಿದ್ದಾರೆ ಅನ್ನೋದು ನಮ್ಮೆಲ್ಲರ ಒಂದು ಜನಜನಿತ ನಂಬಿಕೆ. ಅದನ್ನ ನಿಮಗೆ ಹೇಗೆ ಗೊತ್ತು ಅಂತ ತೀವ್ರವಾಗಿ ಪ್ರಶ್ನೆ ಮಾಡ್ತ ಹೋದರೆ ನೀವೆಲ್ಲಾ ಅಸ್ಪಷ್ಟವಾಗೋದಕ್ಕೆ ಶುರುವಾದಿರಿ! ಅಂದರೆ ಏನರ್ಥ? ಹಿಂದೆ ನಡೆದಿರೋದನ್ನಿರಲಿ, ಕಣ್ಣೆದುರು ನಡೆಯೋ ವರ್ತಮಾನಾನೂ ಕರಾರುವಾಕ್ಕಾಗಿ ಗ್ರಹಿಸ್ತಿದೀವಿ ಅಂತ ಹೇಳೋದಕ್ಕೆ ಸಾಧ್ಯವಿಲ್ಲ.' ಮನುಷ್ಯನ ಪ್ರಜ್ಞೆ ಮೂಲಭೂತವಾಗಿ ಹೇಗೆ ವರ್ತಿಸುತ್ತೆ ಅನ್ನೋದನ್ನ ಪಾಟೀಲರು ವಿಶ್ಲೇಷಿಸುತ್ತಾರೆ. 'ಏನ್ ಸಾರ್ ನೀವು ಹೇಳೋದು? ನಮ್ಮೆಲ್ಲರ ಕಣ್ಣೆದುರಿಗೂ ನೀವು ಕುಳಿತಿರೋದು, ಮಾತಾಡ್ತಿರೋದು ಕರಾರುವಕ್ಕಾಗಿ ನಾವು ಗ್ರಹಿಸ್ತಿಲ್ಲವೆ? ವಿಜ್ಞಾನಿಯಾಗಿ ನೀವೆ ಹೀಗೆಂದರೆ ಹೇಗೆ ಸಾರ್? ವಸ್ತು ಸತ್ಯಾಂಶ ಅನ್ನೋದೆ ಇಲ್ಲಾಂತ ಆದರೆ ಅದರ ಹಿಂದಿನ ತತ್ವಗಳನ್ನೆಲ್ಲಾ ನ್ಯೂಟನ್, ಡಾರ್ವಿನ್, ಐನ್‌ಸ್ಟೀನ್ ಇವರೆಲ್ಲಾ ಅನ್ವೇಷಣೆ ಮಾಡ್ತಾನೆ ಇರಲಿಲ್ಲ.' ರಾಮಚಂದ್ರನ ಪ್ರಶ್ನೆಗೆ 'ಒಂದೊಂದು ಭೂಮಿಕೆಗೆ ಒಂದೊಂದು ತತ್ವ ವಿಜ್ಞಾನಿ ಆಗಿ ಹೀಗೆ ಹೇಳಕೂಡದದಂದಿರಲ್ಲಾ. ವಿಜ್ಞಾನ ಈಗ ಈ ತೀರ್ಮಾನದ ಹಂತದಲ್ಲಿದೆ. ಬೆಳಕು ಕಣಗಳೋ ಅಲೆಗಳೋ ಹೇಳಿ? ನಾವು ತಿಳಿದ ಹಾಗೆ ಭೌತಶಾಸ್ತ್ರ ವಸ್ತು ಸತ್ಯದ ಮೇಲೆ ಬಲವಾಗಿ ನಿಂತಿರೋ ವಿಜ್ಞಾನ ಅಲ್ಲವೆ? ಅದು ಹೇಳುತ್ತೆ. ಬೆಳಕು ಅಲೆ ಅಂತ ನೋಡಿದವನಿಗೆ ಅಲೆ ಕಣ ಅಂತ ನೋಡಿದವನಿಗೆ ಕಣ, ಯಾಕೆಂದರೆ ವೀಕ್ಷಿಸುವ ಮನುಷ್ಯ ಪ್ರಜ್ಞೆ ಆ ಪ್ರಯೋಗದ ಒಂದು ಭಾಗ, ಯೋಚನೆ ಮಾಡಿ.'

ಪಾಟೀಲರ ಈ ವಿಶ್ಲೇಷಣೆ ಮನುಷ್ಯನ ಪ್ರಜ್ಞೆ, ನಂಬಿಕೆ ಮತ್ತು ದೃಷ್ಟಿಯ ನಡುವಿನ ಹೆಣಿಗೆಯಾಗಿದೆ. ಅಲ್ಲಾ, ಅದನ್ನಾದರೂ ವಸ್ತುನಿಷ್ಠ ಉಪಕರಣಗಳ ಸಹಾಯದಿಂದ ಪ್ರಯೋಗಮಾಡಿ ತೀರ್ಮಾನಕ್ಕೆ ಬಂದು ವಸ್ತುಸತ್ಯ ಹೀಗೆಂತ ಪ್ರತಿಪಾದಿಸ್ತಾರೆ ಸಾರ್!' ರಾಮಚಂದ್ರನ ಸಂದೇಹಕ್ಕೆ ಪಾಟೀಲರು 'ಅವರು ಪ್ರತಿಪಾದಿಸಿದ್ದು ವಸ್ತು ಸತ್ಯ ಅಲ್ಲ. ನಮ್ಮ ಪ್ರಜ್ಞೆಯನ್ನ, ವ್ಯಕ್ತಿ ಸತ್ಯಾನ, ಇರಲಿ. ಈಗ ಇನ್ನೊಂದು ಭೌತವಿಜ್ಞಾನದ ನಿಯಮಾನ ಹೇಳ್ತೀನೆ ಕೇಳಿ ಒಂದು ವಸ್ತುವಿನ ವೇಗ ಬೆಳಕಿನ ವೇಗಕ್ಕೆ ಸಮೀಪಿಸ್ತಾ ಅದು ಹೋಗ್ತಿರೋ

ದಿಕ್ಕಿನ ಉದ್ದವನ್ನು ಕಳಕೊಳ್ತಾ ಬರ್ತದೆ, ಅನ್ನೋದೊಂದು ನಿಯಮ, ಒಂದು ಗಜಕಡ್ಡಿ ಬೆಳಕಿನ ವೇಗ ಸಮೀಪಿಸ್ತಾ ಅದು ಒಂದು ಅಡಿಯಾಗ್ತದೆ ಅನ್ನಿ. ಅದನ್ನು ನೋಡೋದು ಹೇಗೆ? ನಾವೂ ಅದನ್ನು ತಿಳಿಯೋದಕ್ಕೆ ಗಜಕಡ್ಡಿ ವೇಗದಲ್ಲಿ ಹೋಗಬೇಕು. ಆಗ ನಮ್ಮ ಗಜಕಡ್ಡಿನೂ ಗಿಡ್ಡ ಆಗುತ್ತೆ. ಗಜಕಡ್ಡೀನ ಅಳೆದರೆ ಆಗ ಅಳತೆಗೆ ಸರಿಯಾಗಿರ್‍ತದೆ.' ಅಂದರೆ ಮೇಲಿನ ನಿಯಮ ನಮ್ಮ ಪ್ರಜ್ಞೆ ಎಂದೂ ಒರೆ ಹಚ್ಚಲಾರದ ವಸ್ತು ಸತ್ಯ. ಇದನ್ನೆಲ್ಲಾ ಯಾಕೆ ನಿಮಗೆ ಕೊರೆದೆ ಎಂದರೆ ನೀವು ಬರೇ ಜೋಗಿಹಾಳರ ಸಾವಿನ ರಹಸ್ಯ ಪತ್ತೆ ಮಾಡೋದಕ್ಕೆ ಹೊರಟಿಲ್ಲ. ಮನುಷ್ಯ ಪ್ರಜ್ಞೆ ವಿಧಿನಿಯಮಗಳ ಅಧೀನಾನೋ ಅಥವಾ ಸ್ವತಂತ್ರವೋ ಅಂತ ಕಲಾಕೃತಿ ಮುಖಾಂತರ ಪತ್ತೆ ಮಾಡೋದಕ್ಕೆ. ತತ್ವಾನ್ವೇಷಣೆ ಮಾಡೋದಕ್ಕೆ ಹೊರಟಿದ್ದೀರ. ಇದು ಈ ವಿಶ್ವದ ಚಿದಂಬರ ರಹಸ್ಯ. ಯಾವನು ಹೇಗೆ ನಂಬ್ತಾನೋ ಹಾಗೆ ಕಾಣ್ತಾ ಹೋಗುತ್ತೆ. ಜಯರಾಮನಿಗಿಂತ ಮುಂಚೆ ನಾನೇ ಕತೆ ಹೇಳಿ ಜೋಗಿಹಾಳರು ಸತ್ತಿಲ್ಲಾಂತ ಮುಕ್ತಾಯ ಮಾಡಿದ್ರೆ ಅಂಗಾಡಿಗೆ ಅಂಥದೇ ಸಾಕ್ಷಿ ಸಿಕ್ತಾ ಹೋಗ್ತಿತ್ತು.'[36] ನೀಡುವ ವಿಶ್ಲೇಷಣೆ ತಾತ್ಪೂರ್ಕಿಕವಾದುದಾಗಿದೆ.

ಈವರೆಗೂ ಮನುಷ್ಯ ಪ್ರಜ್ಞೆ ಸ್ವತಂತ್ರವಾಗಿಯಾಗಲಿ, ಅಥವಾ ನಿಯಮಗಳ ಬಂಧಿಯಲ್ಲಾಗಲಿ ಚಲಿಸದೆ ಪ್ರಯೋಗದ ಭಾಗವಾಗಿ ವರ್ತಿಸಿದೆ. ವ್ಯಕ್ತಿ ಸತ್ಯವನ್ನೇ ನಾವು ಅಂತಿಮ ಎಂದು ಭಾವಿಸಿ ಆ ಪ್ರಕಾರ ವಿಜ್ಞಾನದ ಜೊತೆ ಹೊಂದಿಕೊಂಡಿದ್ದೇವೆ. ಪಾಟೀಲರ ವಿಶ್ಲೇಷಣೆ ಕೊನೆಗೆ ಜಯರಾಂನಲ್ಲಿ ಎಲ್ಲರಲ್ಲೂ ಒಂದೊಂದು ಕತೆ ರೂಪಿತಗೊಂಡಿರುತ್ತೆ ಎಂಬುದನ್ನು ಕಾಣಬಹುದಾಗಿದೆ. ಕೊನೆಯಲ್ಲಿ 'ಕರೆಕ್ಟ್ ನಿನ್ನತೆ ಪ್ರಕಾರ' ಎನ್ನುವ ಜಯರಾಮನಿಗೆ ಇದು ಹೊಳೆಯುತ್ತದೆ.

ಸಂಶೋಧನೆಗಳ ಸ್ಥಿತಿಗತಿ: ಸಂಶೋಧನೆ ಮತ್ತು ಮಾರುಕಟ್ಟೆಗಳ ನಡುವಿನ ಸಂಬಂಧವನ್ನು ಲೋಹಿಯಾ ಚರ್ಚಿಸುತ್ತಾ "ರಾಸಾಯನಿಕ ಗೊಬ್ಬರಗಳ ಬಗ್ಗೆ ಒಂದು ಸತ್ಯಾಂಶವನ್ನು ಅರ್ಥಮಾಡಿಕೊಳ್ಳುವ ಅವಶ್ಯಕತೆ ಇದೆ. ಅಮೆರಿಕಾ ಅಥವಾ ರಷ್ಯಾದ ಗೊಬ್ಬರದ ಕಾರ್ಖಾನೆಗಳಿಗೆ ಕೋಟಿಗಟ್ಟಲೆ ಬಂಡವಾಳವಿದೆ. ಈ ಗೊಬ್ಬರದ ಕಾರ್ಖಾನೆಗಳ ಮಾಲೀಕರು ಭಾರತವೂ ಸೇರಿದಂತೆ ಅನೇಕ ವಿಶ್ವವಿದ್ಯಾಲಯಗಳಿಗೆ ಲಕ್ಷಾಂತರ ರೂಪಾಯಿಗಳ ಧನಸಹಾಯವನ್ನು ನೀಡುತ್ತಾರೆ. ಈ ಸಹಾಯ ಧನ ಸಂಶೋಧನೆ ಮತ್ತು ಅಧ್ಯಯನಗಳಿಗಾಗಿ ವಿನಿಯೋಗವಾಗುತ್ತದೆ. ಆದರೆ ದಾನಿಗಳ ಔದಾರ್ಯ ತನ್ನದೇ ಆದ ಒಂದು ಪ್ರಭಾವವನ್ನು ಬೀರುತ್ತದೆ. ವರ್ತಮಾನ ಪತ್ರಿಕೆಗಳು ಜಾಹಿರಾತುಗಳನ್ನು ಪಡೆಯುತ್ತವೆ. ಆದ್ದರಿಂದ ವಿಶ್ವವಿದ್ಯಾಲಯಗಳ ಸಂಶೋಧಕರು ಮತ್ತು ವರ್ತಮಾನ

ಪತ್ರಿಕೆಗಳು ಹಾಗೂ ಜಾಹೀರಾತು ಬರೆಯುವವರು ರಾಸಾಯನಿಕ ಗೊಬ್ಬರಗಳ ಭಾರೀ ಬೆಂಬಲಿಗರಾಗಿರುತ್ತಾರೆ.'[37]

ಈ ವಿಶ್ಲೇಷಣೆಯಲ್ಲಿ ಮುಂದುವರಿದ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಮಾಡುವ ಆಕ್ರಮಣದ ರಾಜಕಾರಣವನ್ನು ಲೋಹಿಯಾ ಬಯಲಿಗೆಳೆಯುತ್ತಾರೆ. ಸಂಶೋಧನಾ ಕೇಂದ್ರಗಳ ದುರವಸ್ಥೆಯನ್ನು ಕುರಿತು, ಸಂಶೋಧನಾಕಾರರ ದೌರ್ಬಲ್ಯವನ್ನು ಕುರಿತು ಲೋಹಿಯಾ 'ಮನುಷ್ಯನ ಸದ್ಯದ ಚಿಂತನೆ ಪೂರ್ಣವಲ್ಲದ, ಭಾಗಶಃ ಮಾತ್ರ ಉಪಯುಕ್ತವಾದ ತತ್ವಾಭಾಸಗಳಿಂದ ಕಲುಷಿತವಾಗಿ ಬಿಟ್ಟಿದೆ. ಕೆಲವನ್ನಷ್ಟೇ ಪಟ್ಟಿಮಾಡಿ ನೋಡಬಹುದು. 1. ಪ್ರಗತಿ. 2 ಸಮೃದ್ಧಿ, 3.ಬಂಡವಾಳಗಾರಿಕೆ, 4. ಪಾಳೆಯಗಾರಿಕೆ, 5. ಸಮತಾವಾದ ಅಥವಾ ಸಮಾಜವಾದ ಈ ಒಂದೊಂದು ಕಲ್ಪನೆಯೂ ನಮ್ಮ ದಿನಬಳಕೆಯ ಸಾಮಾನ್ಯ ಮಾತುಕಥೆಗಳಲ್ಲೂ ಹಾಗೇ ವಿದ್ಯಾಸಂಸ್ಥೆಗಳ ಪ್ರೌಢಪಾಂಡಿತ್ಯದಲ್ಲೂ ಸಲೀಸಾಗಿ ಬಳಕೆಯಾಗುತ್ತದೆ. ಐರೋಪ್ಯೇತರ ವಿಶ್ವವಿದ್ಯಾಲಯಗಳ ಜನಕ್ಕೆ ಈ ಕಲ್ಪನೆಗಳನ್ನು ಸೂಕ್ಷ್ಮವಾಗಿ ವಿವೇಚಿಸಿ ಪರೀಕ್ಷಿಸಬೇಕೆಂಬ ಯೋಚನೆಯೇ ಹೊಳೆಯುವುದಿಲ್ಲ. ಅಷ್ಟು ಮಟ್ಟಿಗೆ ಯುರೋಪು ಪ್ರಪಂಚದ ಚಿಂತನೆಯ ಮಾರ್ಗವನ್ನು ಆಕ್ರಮಿಸಿ ಆಳುತ್ತಿದೆ. ಗಾಣಕ್ಕೆ ಕಣ್ಣಾಪು ಕಟ್ಟಿ ಕೂಡಿಸಿದ ಎತ್ತುಗಳ ಮಂದೆಯ ಹಾಗೆ ಉಳಿದವರು ಸಂಶೋಧನೆ ಮಾಡುತ್ತ ಹೋಗಿದ್ದಾರೆ. ಯುರೋಪಿನವರು ಕೊಟ್ಟ ಮೂಲ ಸಲಕರಣೆಗಳನ್ನು ಸರ್ವತ್ರ ಸಿದ್ಧಿಕಾರಿಯೆಂದೇ ನಂಬಿ ಅವುಗಳ ಮೂಲಕ ಹಾಗೂ ತುಣುಕು ತುಣುಕು ಪರಿಸ್ಥಿತಿಗಳನ್ನು ಎದುರಿಟ್ಟುಕೊಂಡು ಸಂಶೋಧನೆ ಮಾಡುತ್ತಿದ್ದಾರೆ. ತಾವು ನಂಬಿಕೊಂಡ ಮೂಲ ಹತಾರಗಳೇ ಸಾಕಷ್ಟು ಸಮರ್ಥವಲ್ಲದಿರಬಹುದು. ಅವುಗಳನ್ನು ತಾವು ಪುನರ್ ರೂಪಿಸಿಕೊಳ್ಳಬೇಕಾದೀತು ಎಂಬ ಒಂದು ವಿವೇಚನೆ ಕೂಡ ಅವರ ತಲೆಯಲ್ಲಿ ಸುಳಿಯುವುದಿಲ್ಲ.'[38]

ಈ ಹೊಳಹು ಪ್ರಸ್ತುತ ಸಂದರ್ಭದಲ್ಲೂ ಅನ್ವಯವಾಗುವಂತಹದ್ದಾಗಿದೆ. ನಮ್ಮ ಆಲೋಚನಾ ಕ್ರಮವನ್ನು ದೀರ್ಘಕಾಲ ಹೇಗೆ ಪಶ್ಚಿಮ ಆಳುತ್ತಿದೆ ಎಂಬ ನೋಟವನ್ನು ಲೋಹಿಯಾರು ನೀಡುತ್ತಾರೆ. ವಿಶ್ವ ಪ್ರಸಿದ್ಧ ಕೆಸರೂರಿನ ಏಲಕ್ಕಿ ಉತ್ಪಾದನೆ ಕುಸಿಯಲು ಕಾರಣವನ್ನು ತನಿಖೆ ಮಾಡಲು ಬಂದ ಅಂಗಾಡಿಗೆ ಕ್ರಮೇಣ ಸಂಶೋಧನಾ ಕೇಂದ್ರಗಳ ದುಸ್ಥಿತಿ ಅರಿವಿಗೆ ಬರುತ್ತದೆ. 'ಕರ್ನಾಟಕದ ಏಲಕ್ಕಿ ಉತ್ಪಾದನೆ ತೀವ್ರವಾಗಿ ಕುಸಿಯುತ್ತಾ ಇರುವುದರ ಬಗ್ಗೆ ಭಾರತ ಸರ್ಕಾರ ಕಳವಳಗೊಂಡಿದೆ. ಆದಕ್ಕಾಗಿ ಇದರ ಬಗ್ಗೆ ಯಾವ ಯಾವ ತರದ ಮಾಹಿತಿ ಏನೇನು ಸಿಕ್ಕುತ್ತದೋ ಅದನ್ನೆಲ್ಲಾ ತಿಳಿದು ವರದಿ

ಮಾಡಬೇಕಾಗಿದೆ. ಮಾರುಕಟ್ಟೆ ಇನ್ನೂ ಮಾರ್ವಾಡಿಗಳು, ಚೇರಿಗಳು, ರಪ್ತುದಾರರು ಇತ್ಯಾದಿ ಖಾಸಗಿ ವ್ಯಕ್ತಿಗಳ ಕೈಲೇ ಇರೋದರಿಂದ ಅದೇನಾದರೂ ಬೆಳೆಗಾರರಿಗೆ ಪ್ರತಿಕೂಲವಾಗಿದೆಯೋ? ಪರಿಶೀಲಿಸಬೇಕಾಗಿದೆ. ಇನ್ನೊಂದು, ಯಾವ ನಿಶ್ಚಿತ ಕಾರಣದಿಂದ ಅನ್ನೋದನ್ನೇನಾದರೂ ಸಂಶೋಧಕರು ಪತ್ತೆ ಮಾಡಿದ್ದಾರೆಯೋ? ಇದರ ಜೊತೆಗೆ ನನಗೆ ಡಾ॥ಜೋಗಿಹಾಳರು ತಮ್ಮ ಸ್ಥಾನದಲ್ಲಿ ಹಲವಾರು ವರ್ಷ ಕೆಲಸ ಮಾಡಿದರಲ್ಲಾ ಅವರು ಏಲಕ್ಕಿಗೆ ಯಾವ ವಿಧವಾದ ಸಹಾಯವನ್ನು ಏಕೆ ಮಾಡಲಾಗಲಿಲ್ಲ. ಮಿಕ್ಕ ಕೃಷಿರಂಗದಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡಿದರೂ ಇಲ್ಲಿ ಯಾಕೆ ಅವರಿಗೆ ಸಾಧ್ಯವಾಗಲಿಲ್ಲ? ಅನ್ನೋದೊಂದು ಕಾಡ್ತಾ ಇದೆ.' ಅಂಗಾಡಿಯ ಈ ಪ್ರಶ್ನೆ ಸಮಕಾಲೀನ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಕೃಷಿ ಮಾರುಕಟ್ಟೆ ಮಧ್ಯವರ್ತಿಗಳ ಕೈಲಿದ್ದು ಬೆಳೆಗಾರರ ಶೋಷಣೆ ನಿರಂತರವಾಗಿ ನಡೆಯುತ್ತಿರುವದರಿಂದ ಉತ್ಪಾದನೆ ಸಹಜವಾಗಿ ಇಳಿಮುಖವಾಗಲು ಒಂದು ಕಾರಣವಾಗಿದೆ. 'ಏಲಕ್ಕಿಗೆ ಈಗ ಪ್ರಕೃತಿ, ಪರಿಸರ, ಸಮಾಜ ಎಲ್ಲಾ ಕಡೆಯಿಂದ ವೈರಿಗಳ ಹಾವಳಿ ಆರಂಭವಾಗಿದೆ. ಯಾವ ದಿಕ್ಕಿನಲ್ಲಿ ಸಂಶೋಧನೆ ಮಾಡಲು ತೋಚದ ಪರಿಸ್ಥಿತಿ' ಪಾಟೀಲರ ಈ ಮಾತಿನಲ್ಲಿ ಏಲಕ್ಕಿ ಉತ್ಪಾನೆಗೆ ರೋಗದ ಚಿಹ್ನೆಗಳಾಗಿರುವ ಎಲ್ಲವನ್ನು ವಿವರಿಸುತ್ತಾರೆ. 'ಜೋಗಿಹಾಳರ ಜೊತೆ ಅನೇಕ ವಿಜ್ಞಾನಿಗಳು ಇಲ್ಲಿ ಸಹಾಯಕರಾಗಿ ಕೆಲಸ ಮಾಡಿರಲಿಲ್ಲವೆ? ಅವರಿಂದೇನೂ ಸಹಾಯವಾಗೋದಿಲ್ಲವೆ?' ಎಂದು ಪ್ರಶ್ನಿಸುವ ಅಂಗಾಡಿಗೆ 'ಇದರಿದಾರೆ ಭಾಳ ಜನ! ಸಂಬಳ ದಂಡಕ್ಕೆ. ಡಾ॥ಜೋಗಿಹಾಳ್‌ರಿಗೇ ಏನೂ ಮಾಡಲಾಗಲಿಲ್ಲ ಅಂದಮೇಲೆ ನಾನು ಇವರ ಬಗ್ಗೆ ಹೇಳೋದೇನಿದೆ. ಸತ್ಯನಾರಾಯಣ ಪೂಜೆ, ವರಲಕ್ಷ್ಮಿವ್ರತ, ಉದ್ಭವ ವೆಂಕಟೇಶ್ವರ ಮಹಾತ್ಮೆ ನಡೆಸ್ತಾ ಪರಲೋಕದ ಕ್ಷೇಮಚಿಂತನೆ ಮಾಡ್ತಾ ಒಂದು ಕಾಲು ಆಗಲೇ ಸ್ವರ್ಗದಲ್ಲಿಟ್ಟಿದ್ದಾರೆ' ಎನ್ನುವ ಪಾಟೀಲರ ಅಸಹನೆ ಸಂಶೋಧನಾ ಕೇಂದ್ರಗಳ ಮೇಲೆ ಎಷ್ಟಿತ್ತು ಎಂಬುದನ್ನು ಇದರಿಂದ ತಿಳಿಯಬಹುದಾಗಿದೆ. ವಿಜ್ಞಾನ ಎಂಬ ಶಕ್ತಿಯನ್ನು ಹೇಗೆ ಪಾರಂಪರಿಕ ಸಮಾಜದಲ್ಲಿ ಕೊಲ್ಲಲಾಗುತ್ತಿದೆ ಎಂಬುದನ್ನು ಕಾಣಬಹುದಾಗಿದೆ. 'ಕೋಪಾ ಮಾಡಿಕೊಳ್ಳೋದರಿಂದೇನೂ ಪ್ರಯೋಜನವಿಲ್ಲಾ ಸಾರ್. ಈ ದೇಶದಲ್ಲಿ ಎಲ್ಲಾ ಸಂಶೋಧನ ಕೇಂದ್ರಗಳೂ ಹೆಚ್ಚೂ ಕಮ್ಮಿ ಇದೇ ತರಾ ಇದಾವೆ. ಬಾಹ್ಯಾಕಾಶ ಸಂಶೋಧನೆ, ಇಂಧನ ಸಂಶೋಧನೆ, ಆಹಾರ ಸಂಶೋಧನೆ ಹೀಗೆ ನೂರಾರಿವೆ. ಅವಕ್ಕೆ ಹೋಲಿಸಿದರೆ ನಿಮ್ಮದು ಎಷ್ಟೋ ವಾಸಿ.[39]

ಅಂಗಾಡಿಯ ಈ ಮಾತುಗಳಲ್ಲಿ ಸಂಶೋಧನಾ ಕೇಂದ್ರಗಳ ದುರವಸ್ಥೆಯನ್ನು ಕಾಣಬಹುದಾಗಿದೆ. ಆರೋಗ್ಯವಂತ ನವ ಸಮಾಜ ನಿರ್ಮಾಣಕ್ಕೆ, ಸಾಹಸಮಯ ಆವಿಷ್ಕಾರಗಳಿಗೆ ಕಾರಣವಾಗಬೇಕಿದ್ದ ಸಂಶೋಧನೆಗಳು, ಚಳಿಗಾಲದ ಭತ್ಯೆಯಂಥ ಸೌಲಭ್ಯ ಪಡೆಯಲು, ಮತೀಯ ರಾಜಕಾರಣಕ್ಕೆ ನೆರವಾಗಲು ಬಳಕೆಗೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. 'ಮಿಸ್ಟರ್ ಅಂಗಾಡಿ ಏಲಕ್ಕಿಗೆ ಯಾಕೆ ಈವರೆಗೆ ವಿಜ್ಞಾನಿಗಳು ಏನೂ ಸಹಾಯ ಮಾಡಿ ಅಭಿವೃದ್ಧಿಪಡಿಸಲಾಗಲಿಲ್ಲ. ಅಂತ ಕೇಳಿದಿರಲ್ಲ, ಇಷ್ಟೆ ಕಾರಣ, ಇಲ್ಲಿ ಸಂಶೋಧನೆ ಒಂದನ್ನು ಬಿಟ್ಟು ಮಿಕ್ಕಿದ್ದೆಲ್ಲಾ ನಡೀತಾ ಇದೆ. ಒಬ್ಬರ ಮೇಲೊಬ್ಬರು ಕತ್ತಿ ಮಸೆಯೋದು, ದೂರು ತಗೊಂಡು ಹೋಗಿ ವರ್ಗ ಮಾಡಿಸೋದು, ಸಂಶೋಧನ ಕೇಂದ್ರದ ಉತ್ಪತ್ತಿ ಕಳ್ಳತನ ಮಾಡೋದು, ಸಂಶೋಧಕರು ಅಂತ ಸಂಬಳ ತಗೊಳ್ಳೋದು, ಒಬ್ಬ ಪ್ರಾಮಾಣಿಕ ಸಂಶೋಧಕ ಒಂದು ಯೋಜನೆ ಹಾಕಿಕೊಂಡು ಕೆಲಸ ಆರಂಭಿಸೋದರೊಳಗೆ ಅವನಿಗೆ ವರ್ಗ ಮಾಡಿಸಲು ಕುತಂತ್ರ ಆರಂಭ ಆಗಿರ್ತದೆ. ಅವನು ಅತ್ತಲಾಗಿ ಹೋದ ಅಂದರೆ ಇತ್ತ ಅವನ ಕೆಲಸ ಅರ್ಧಕ್ಕೆ ಮಣ್ಣು ತಿನ್ತದೆ. ಇದರ ಜೊತೆಗೆ ಈಗ ಸಂಶೋಧನ ಕೇಂದ್ರದ ರಾಜಕಾರಣಕ್ಕೆ ಸ್ಥಳೀಯ ರಾಜಕೀಯಾನು ಮಿಲಾಕತ್ತಾಗಿ ಹೋಗಿದೆ. ಕೆಸರೂರಿನ ಕಾಯಿಲೆ ವಿಷ್ಯ ಹೇಳಿದರೆ ಕಿವಿಗೆ ಹಾಕ್ಕೊಳೋಲ್ಲ. ಚೆನ್ನಾಗಿರೋ ಗಿಡ ಕಿತ್ತು ಸುಡಬೇಕಾ ಎನ್ನುತ್ತಾರೆ. ಏಲಕ್ಕಿ ತೋಟ ಸುಡೋದಕ್ಕೆ ಮೊದಲು ಈ ಸುಡುಗಾಡು ಕೆಸರೂರಿನ ಸಮಾಜ ಸುಡಬೇಕು, ಆ ಆಯೋಗ್ಯ ವಿಜ್ಞಾನಿಗಳನ್ನ, ಮೂರ್ಖ ರಾಜಕಾರಣಿಗಳನ್ನ ದೇವಸ್ಥಾನ ಮಸೀದಿ ಕಟ್ಟಿಕೊಂಡು ಮೈಕಿನಲ್ಲಿ ಕಿರಿಚೋ ಧರ್ಮಾಂಧರನ್ನ ಎಲ್ರನ್ನೂ ಸುಡಬೇಕು.'[40]

ವ್ಯಗ್ರ ಗಳಿಗೆಯೊಂದಲ್ಲಿ ಪಾಟೀಲರಿಗೆ ಉಂಟಾಗುವ ಈ ಹತಾಶ ಮನೋಭಾವ ಸಮಕಾಲೀನ ದುರಂತವಾಗಿದೆ. ಭಾರತೀಯ ಸಂದರ್ಭದಲ್ಲಿ ಸಂಶೋಧನಾ ಕೇಂದ್ರಗಳ ಪ್ರಸ್ತುತ ಚಿತ್ರಣ ಪಾಟೀಲರ ವಿಶ್ಲೇಷಣೆಯಂತಿದೆ. ದೇಶ ಸದೃಢವಾಗಲು ಪೂರಕವಾಗಬೇಕಾಗಿದ್ದ, ಧರ್ಮ, ರಾಜಕಾರಣ, ವಿಜ್ಞಾನ, ದೇಶದ ಪ್ರಗತಿಗೆ ಮಾರಕವಾಗಿರುವುದನ್ನು ಅದನ್ನು ಪೋಷಿಸುತ್ತಿರುವ ಲಾಭಬಡುಕರನ್ನು 'ಚಿದಂಬರ ರಹಸ್ಯ' ಕಾದಂಬರಿ ಸಮರ್ಥವಾಗಿ ಚಿತ್ರಿಸಿದೆ.

'ಇಡೀ ಭಾರತವು ಎಲ್ಲೋ ಒಂದೊಂದು ತಾವರೆ ಹೊರ ಹೊಮ್ಮಿರುವ ಒಂದು ದೊಡ್ಡ ಕೊಳಚೆ ಕೊಳ. ಕಾರ್ಯಸೌಧಗಳು, ವಿಮಾನ ನಿಲ್ದಾಣಗಳು, ಹೋಟೆಲುಗಳು, ಸಿನಿಮಾಮಂದಿರಗಳು ಮತ್ತು ಅರಮನೆಗಳು ಅತ್ಯಾಧುನಿಕ ಶೈಲಿಗಳಲ್ಲಿ ಕೆಲವು ಜಾಗಗಳಲ್ಲಿ ನಿರ್ಮಿಸಲ್ಪಟ್ಟಿವೆ. ಅದಕ್ಕನುಗುಣವಾಗಿ ಶೃಂಗರಿಸಿಕೊಂಡ ಗಂಡಸರು ಮತ್ತು ಹೆಂಗಸರು ಅವುಗಳನ್ನು ಉಪಯೋಗಿಸುತ್ತಾರೆ. ಆದರೆ, ಇವೆಲ್ಲ ಒಟ್ಟು ಜನಸಂಖ್ಯೆಯ ಕೇವಲ ಸಾವಿರದ ಒಂದು ಭಾಗಕ್ಕೆ ಸಂಬಂಧಿಸುವುದು ಮಾತ್ರ. ಉಳಿದವರೆಲ್ಲ ದರಿದ್ರರು, ಕಳೆಗುಂದಿದವರು, ದುಃಖಿಗಳು ಮತ್ತು ಹಸಿದವರು.'[41]

ಹೀಗೆ ಭಾರತವನ್ನು ಒಂದು ದೊಡ್ಡ ಕೊಳಚೆ ಕೊಳಕ್ಕೆ ಲೋಹಿಯಾರು ಹೋಲಿಸುವುದು ಸಮಂಜಸವಾಗಿದೆ. ಈ ಕಾದಂಬರಿಯಲ್ಲಿ 'ಕೆಸರೂರು' ಎಂಬ ಊರನ್ನು ರೂಪಕವಾಗಿ ಬಳಸಿರುವುದನ್ನು ಕಾಣಬಹುದಾಗಿದೆ. 'ಕೆಸರೂರಿನ ಸುತ್ತಲೂ ಪರ್ವತಗಳು ಒಂದರ ಹಿಂದ ಒಂದರಂತೆ ಒಟ್ಟಿಗೆ ಮಲಗಿದ ಬಸವನ ಮಂದೆಯ ತರ ಹಬ್ಬಿಕೊಂಡಿದ್ದವು. ದಟ್ಟ ಅರಣ್ಯ ಈ ಗುಡ್ಡಗಳನ್ನು ಕಂಬಳಿ ಹೊದಿಸಿದಂತೆ ಮುಚ್ಚಿಕೊಂಡಿತ್ತು. ಎಲ್ಲ ಮರಗಳೂ ಒಟ್ಟಾಗಿ ಇಡೀ ಗುಡ್ಡವೇ ಒಂದು ಭೂತಾಕಾರದ ಮರದಂತೆ ಕಾಣುತ್ತಿತ್ತು. ಸಂಜೆಯಾಗುತ್ತಲೇ ಕಡಲತ್ತಣಿಂದ ಹಾಯ್ದು ಬರುವ ತೇವದ ಹವೆ ಮಂಜಿನ ಮೋಡವಾಗಿ ಪರಿವರ್ತನೆಗೊಂಡು ಆ ಬೆಟ್ಟಗಳ ನಡುವಿನಿಂದ ಕೆಸರೂರಿನ ಮೇಲೆ ಹರಿಯುತ್ತವೆ. ಇಡಿಯ ಕೆಸರೂರನ್ನು ಒಂದು ಮಾಯಾಲೋಕವನ್ನಾಗಿ ಮಾಡುತ್ತವೆ. ಕೆಸರೂರು ಮಳೆಗಾಲದ ನಾಲ್ಕು ತಿಂಗಳು ಮಾತ್ರ ಕೆಸರೂರಷ್ಟೆ. ಅನಂತರ ಸದಾ ತಣ್ಣಗಿರುವ ನಿತ್ಯ ಹರಿದ್ವರ್ಣದ ಕಾಡಿನಿಂದ ಸುತ್ತುವರಿದಿದ್ದ ಇದು ಒಂದು ಅಪ್ಸರಲೋಕ, ಗಿರಿತಪ್ಪಲಿನ ಈ ಪುಟ್ಟ ಊರು ಕರ್ನಾಟಕದ ಸ್ವಿಡ್ಜರ್ಲೆಂಡ್.'[42]

ಕೆಸರೂರಿನ ಸುತ್ತಲೂ ಪರ್ವತಗಳಿರುವಂತೆ ಭಾರತದ ಸುತ್ತಲೂ ಪರ್ವತಗಳಿರುವುದನ್ನು ಗಮನಿಸಬಹುದಾಗಿದೆ. 'ಇಷ್ಟೊಂದು ಸುಂದರ ತಾಣದ ಈ ಊರು, ಅದೇನೋ ಸಾಹಸಿಗಳಿಗೆ ಯೌವನಕ್ಕೆ ಮಹತ್ವಾಕಾಂಕ್ಷೆಗೆ ಬೇಕಾಗಿರಲಿಲ್ಲ. ಹುಡುಗ ಹುಡುಗಿಯರಿಗೆ ಇದೊಂದು ನಿರ್ಜೀವ ವಸ್ತು.'[43]

ಇಷ್ಟೊಂದು ಸುಂದರ ಭೌಗೋಲಿಕ ಪರಿಸರದಿಂದ ಶ್ರೀಮಂತವಾದ ಕೆಸರೂರು (ಭಾರತ) ಬದಲಾವಣೆಗಳಿಗೆ ಒಳಗಾಗುವುದನ್ನ ಇಷ್ಟಪಡದ ಸನಾತನ ಮನಸ್ಸು ಯುವ

ಮನಸ್ಸುಗಳಿಗೆ ನಿರ್ಜೀವವಾದ ವಸ್ತುವನ್ನಾಗಿಸಿರುವುದನ್ನು ಕಾಣಬಹುದಾಗಿದೆ: 'ಈ ಜಿಲ್ಲೆಗೆ ಏನಯ್ಯ ಶಾಪ? ಇಷ್ಟೋಂದು ಸುಂದರವಾಗಿದೆ. ಕಾಡುಗಳಿದ್ದಾವೆ. ಮಳೆ ಇದೆ. ಬೆಳೆ ಇದೆ. ತಣ್ಣಗೆ ಜೀವನೋಪಾಯ ಸಾಗಿಸ್ತಾರೆ. ಆದರೆ ಯಾವುದೊ ಒಂದು ಭಯಾನಕ ಕೊರತೆ ಇದೆ ಇಲ್ಲಿ ಹೆಗ್ಡೆ ಇಲ್ಲಿ ಹೊರಗಿನಿಂದ ಬಂದು ಬದುಕು ಆರಂಭಿಸಿದೊಡನೆ ಅದು ಅನುಭವಕ್ಕೆ ಬರ್ತದೆ...'[44] ಒಂದು ಜಿಲ್ಲೆ ಶಾಪಗ್ರಸ್ತವಾಗಿ ಸಾಂಸ್ಕೃತಿಕವಾಗಿ ನಿಷ್ಕ್ರಿಯತೆಯಾಗಿರುವುದು ಆಕಸ್ಮಿಕವಾಗಿರದೆ ಅದರ ಹಿಂದೆ ಬಲವಾದ ಕಾರಣ ಇದೆ ಎಂಬುದನ್ನು ರಾಮಚಂದ್ರ ಹುಡುಕಲು ಪ್ರಯತ್ನಿಸುತ್ತಾನೆ. ಸೋಷಿಯಾಲಜಿ ಪ್ರಾಧ್ಯಾಪಕ ನಾರಾಯಣ ನೀಡುವ ಮಧ್ಯಮವರ್ಗದ ಕೊರತೆಯ ಕಾರಣಕ್ಕಿಂತ ಕನ್ನಡ ಲೆಕ್ಚರರ್ ತಿಮ್ಮಪ್ಪ ಹೇಳುವ ಒಂದೇ ಭಾಷೆಯನ್ನಾಡುವ ಜನರ ಕೊರತೆಯ ಕಾರಣಕ್ಕಿಂತ, ವಸ್ತುನಿಷ್ಠವಾಗಿ ಸಮಸ್ಯೆಯನ್ನು ಬಗೆಹರಿಸಿದವನು ಸಮೀರ. 'ಕಾಫೀ ಈ ಜಿಲ್ಲೆಯನ್ನು ಸಾಂಸ್ಕೃತಿಕವಾಗಿ ನಾಶಮಾಡಿರೋದು ಹಾಗೂ ಆರ್ಥಿಕವಾಗಿ ಉದ್ಧಾರ ಮಾಡಿರೋದು ಕಾಫಿ, ಇಲ್ಲಿಯ ಜನರಿಗೆ ಇರೋದು ಕಾಫಿ ಸಂಸ್ಕೃತಿ.'[45]

ವಸಾಹತು ಸಂದರ್ಭದಲ್ಲಿ ಆರಂಭಗೊಂಡು ವಸಾಹತೋತ್ತರ ಸಂದರ್ಭದಲ್ಲಿ ಉಂಟುಮಾಡಿರುವ ಭೀಕರ ದುರಂತ ಈ ಅನುಕರಣೆಚಾಳಿಯಾಗಿದೆ. 'ನಾವು ನಮ್ಮ ಸಂಸ್ಕೃತಿಯಿಂದ ತುಂಡಾಗಿ ಅಂತರ ಪಿಶಾಚಿಗಳಾಗಿರೋದಕ್ಕೆ ಇದೇ ಕಾರಣ ಎಂಬ ಸಮೀರನ ಮಾತಿಗೆ ಮಲೆನಾಡು ಗೌಡರೊಬ್ಬರು ಆತ ಹೇಳ್ತಿರೋದು ಸರಿಮೇಷ್ಟ್ರೆ. ನಮ್ಮ ಸಂಸ್ಕೃತೀನೇ ನಮ್ಮಿಂದ ಹೋಗ್ತಿದೆ. ತಂದೆ ತಾಯಿ ಬಂದು ಬಳಗ ಅಂತ ಭಾವನೇನೇ ಇಲ್ಲ. ಎಲ್ಲ ಚೊಟ್ಟೆಕಾರನ ತರ ಆಡೋರೆ! ಭಯ ಭಕ್ತಿ, ದೈಯ್ಯದ್ಯಾವರು ಕೇಳಬೇಡಿ. ಸಂಶೋಧನ ಕೇಂದ್ರದಲ್ಲಿ ಒಂದು ದೇವಸ್ಥಾನ ಜೀರ್ಣೋದ್ಧಾರ ಮಾಡೋದಕ್ಕೆ ಹೋದರೆ ಯಾವ್ಯಾವ ತರ ತೊಂದ್ರೆ ಬರ್ತಿದೆ ನೋಡಿ, ಅದೇನು ಸ್ವಂತ ಕೆಲಸ ಅಲ್ಲ, ಏನೂ ಅಲ್ಲ, ದೇವರ ಕೆಲಸ.'[46]

ಯುವ ಮನಸ್ಸಿನ ವೈಚಾರಿಕ ಚಿಂತನೆಗಳಿಗೆ ಮುದಿಯಾದ ಸನಾತನ ಗೊಡ್ಡು ಚಿಂತನೆಗಳು ಅಂಕುಶದ ರೀತಿಯಲ್ಲಿರುವುದನ್ನು ಕಾಣಬಹುದಾಗಿದೆ. ಲಂಟಾನದಂಥ ಮತೀಯ ರಾಕ್ಷಸ ವಸಾಹತು ಭಾರತದಲ್ಲಿ ಆರಂಭವಾಗಿ ವಸಾಹತೋತ್ತರ ಭಾರತದಲ್ಲಿ ಉಂಟುಮಾಡಿದ ಭೀಕರ ಸ್ಥಿತಿಯನ್ನು ಕಾಣಬಹುದಾಗಿದೆ. 'ಈ ಊರಿನಲ್ಲಿ ಸಣ್ಣ ಪುಟ್ಟದು ಏನೊಂದಾದರೂ ದೊಡ್ಡ ಅನಾಹುತಕ್ಕೆ ನಾಂದಿಯಾಗುತ್ತೆ ಅಂತ' ಹೇಳುವ ರಾಮಚಂದ್ರನಿಗೆ 'ಕಿಡಿಬಿದ್ದು ಬೆಂಕಿ ಹತ್ತಿಕೊಳ್ಳಲಿ ಬಿಡು. ಈ ಜ್ವಾಲಾಮುಖಿ ಮೇಲೆ

ಯಾವತ್ತು ಸಿಡಿಯುತ್ತೋ ಅಂತ ಕೂತಿರೋದರ ಬದಲು ಆಗೋದೆಲ್ಲಾ ಆಗಿಬಿಡೋದು ಒಳ್ಳೇದಲ್ಲವೆ? ಕೆಸರೂರಿನ ಖಾಯಿಲೆಗೆಲ್ಲಾ ಅದೊಂದೆ ಮದ್ದೂಂತ ಪಾಟೀಲರು ಹೇಳ್ತಾರಲ್ಲ. ನಾನು ಅದೇ ತೀರ್ಮಾನಕ್ಕೆ ಬಂದಿದ್ದೇನಯ್ಯಾ'[47].

ಪಾಟೀಲರಿಗೆ ವ್ಯಗ್ರಗಳಿಗೆಯಲ್ಲಿ ಸುಳಿಯುವ ಆಲೋಚನೆಯಂತೆ ಜಯರಾಂನಿಗೂ 'ಈ ಊರಿನ ಗೋಳುಗಳೆಲ್ಲಾ ಉರಿಗಾರಿ ಒಮ್ಮೆ ಲಯವಾಗಲಿ' ಎನಿಸುತ್ತದೆ. 'ಈ ಮೊಂಡಾಟದ ಹುಡುಗ ಹುಡುಗಿಯರೇ ಏನನ್ನಾದರೂ ಸಾಧಿಸಬಲ್ಲರು' ಎಂಬ ಅಂಗಾಡಿಯ ಅನಿಸಿಕೆಯಲ್ಲಿ ಹುರುಳಿದೆ. ರಫಿ ಮತ್ತು ಜಯಂತಿ ಅದನ್ನು ಸಾಧಿಸುವುದನ್ನು ನೋಡಬಹುದಾಗಿದೆ.

ಮುದಿಯಾದ ಸಂಸ್ಕೃತಿಯ ಕೆಸರೂರಿನ ಮನೆಮನೆಯೊಳಗಿನ ಎಳೆಯರ ತುಮುಲವಿರಬಹುದು ಇದು. ವಿವೇಕ ವಿವೇಚನೆಗಳನ್ನು ಎಳೆಯ ಜೀವಗಳಿಗೆ ಧಾರೆ ಎರೆದು ಅದರೊಂದಿಗೆ ಅವರು ವಿಕಾಸಗೊಳ್ಳಲನುವು ಮಾಡಿಕೊಡುವುದರ ಬದಲು ಶಾಸ್ತ್ರ ಆಚಾರದ ನೀತಿ ನಿಯಮಗಳ ಅದೃಶ್ಯ ಜಾಲದಲ್ಲಿ ಅವರನ್ನು ಸಿಲುಕಿಸಿ ಅದಕ್ಕೆ ಅವರು ವಿಧೇಯರಾಗಿರುವಂತೆ ಮಾಡಲು ತಾವೂ ಅದನ್ನು ನಂಬಿ, ತಮ್ಮ ತಾರುಣ್ಯವನ್ನು ಹಾಳುಮಾಡಿಕೊಂಡು ಮುದಿಯರೆಲ್ಲಾ ಎಳೆ ಹೃದಯದೊಳಹೊಕ್ಕು ಪರಕಾಯ ಪ್ರವೇಶ ಮಾಡಲು ಹವಣಿಸುತ್ತಾ ಕೆಸರೂರನ್ನು ಒಂದು ಬೆಂತರಲೋಕ ಮಾಡಿದ್ದರು. ಮೇಲೆ ಏನೂ ಸಂಭವಿಸದಂತೆ ನಟಿಸುತ್ತಾ ಬಸ್ಸು ಕಾಯುವವರು ಬಸ್ಸು ಕಾಯುತ್ತಿದ್ದರು. ಕಾರ ಕಡೆಯುವವರು ಕಾರ ಕಡೆಯುತ್ತಿದ್ದರು. ಗದ್ದೆ ಉಳುತ್ತಾ ಮಳೆ ಬರಲಿಲ್ಲೆಂದು ಗೊಣಗುವವರು ಗೊಣಗುತ್ತಾ ಇದ್ದರು. ಆದರೆ ಜ್ವಾಲಾಮುಖಿಯೊಂದು ಒಳಗೇ ಭಯಂಕರ ಒತ್ತಡ ನಿರ್ಮಿಸುತ್ತಿತ್ತು.'[48]

ಮುದಿಯಾದ ಕೆಸರೂರಿನ ಸಂಸ್ಕೃತಿಯಲ್ಲಿ ಎಳೆಯಮನಸ್ಸುಗಳು ವಿಕಾಸವಾಗದಿರಲು ಕಾರಣ ಮುದಿಯರು ಎಳೆಮನಸ್ಸುಗಳನ್ನು ಪ್ರವೇಶಿಸಿ ಅವರನ್ನು ಶಾಸ್ತ್ರ, ಅಚಾರಗಳಿಗೆ ಸಿಲುಕಿಸಿದ್ದು, ಎಂದು ಕಾದಂಬರಿಯ ನಿರೂಪಣಾ ಧ್ವನಿ ಹೇಳುತ್ತದೆ. ಸಮೀರನಿಗೆ ಕಾಫಿ ಸಂಸ್ಕೃತಿಯಿಂದ ಕೆಸರೂರು ನಾಶವಾದರೆ, ರಾಮಚಂದ್ರ ಇದರ ಜೊತೆಗೆ ಬೇರೆ ಬೇರೆ ಕಾರಣಗಳನ್ನು ಕಂಡುಕೊಳ್ಳುತ್ತಾನೆ. ಒಂದು ಸುಂದರ ಅಪ್ಸರಲೋಕದಂತಿದ್ದ ಮಾಯಾಲೋಕ ಮತೀಯವಾದದ ವಿಷದ ಪರಿಣಾಮವಾಗಿ ಸುಟ್ಟು

ಬೂದಿಯಾಗುತ್ತದೆ. ಲಂಟಾನವನ್ನು ಮತೀಯವಿಷದ ರೂಪಕವಾಗಿ ಹಾಗೂ, ಕೆಸರೂರನ್ನು ಭಾರತದ ರೂಪಕವಾಗಿ ಈ ಕಾದಂಬರಿ ನೋಡುತ್ತದೆ.

ಶಿವಾರೆಡ್ಡಿಯವರು ತೇಜಸ್ವಿಯವರ ವೈಚಾರಿಕ ನಿಲುವುಗಳನ್ನು ಕುರಿತು ಬರೆಯುತ್ತಾ ಹೀಗೆ ಹೇಳುತ್ತಾರೆ: 'ಸ್ವಾತಂತ್ರ್ಯನಂತರ ಎಲ್ಲ ಪ್ರಗತಿಪರ ಸಿದ್ಧಾಂತಗಳು ವ್ಯಕ್ತಿ ಮತ್ತು ಸಮಷ್ಟಿ ನೆಲೆಯಲ್ಲಿ ನಿರ್ಗಮಿಸಿರುವುದರ ದುರಂತದ ಅರಿವು ಹಿಂದಿಗಿಂತ ಇಂದು ಹೆಚ್ಚು ಸ್ಪಷ್ಟವಾದ್ದರಿಂದ ಯುವ ಪೀಳಿಗೆಗೆ ಕೇವಲ ಮಾನವೀಯತೆಯ ಆಧಾರದ ಮೇಲೆಯೇ ಬದುಕನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಸೂಚಿಸುತ್ತಿದ್ದಂತೆ ಕಾಣುತ್ತದೆ. ಈ ಕಾದಂಬರಿಯಲ್ಲಿ ನಿರೂಪಿಸುವ ವಾಸ್ತವಿಕ ಘಟನೆಗಳೇ ಅಸಂಖ್ಯ ಧ್ವನಿಗಳನ್ನು ಹೊರಡಿಸುವಂತೆ ಮಾಡುವ ಕಾದಂಬರಿಯ ತಂತ್ರ ವಿಶಿಷ್ಟವಾಗಿದೆ. ಮನುಷ್ಯನ ಧಾರ್ಮಿಕ ಮತಾಂಧತೆ, ಹಣದ ಬಗೆಗಿನ ವ್ಯಾಮೋಹಗಳು ಸಮಷ್ಟಿ ಬದುಕನ್ನೆ ಲಂಟಾನ ರಾಕ್ಷಸನ ಬಾಯಿಗೆ – ಬೆಂಕಿಗೆ ಆಹುತಿ ಮಾಡುವ ದುರಂತವನ್ನು ಈ ಕೃತಿಗಳು ತಮ್ಮ ಒಡಲಲ್ಲಿರಿಸಿಕೊಂಡಿವೆ. ಕಾಳದಂಧೆಗಳಿಗೆ ಸರ್ಕಾರ, ಕಾನೂನು ಮತ್ತು ನ್ಯಾಯಾಲಯಗಳ ಸಮ್ಮತಿ ಮತ್ತು ಪರವಾನಗಿಗಳನ್ನು ಗಿಟ್ಟಿಸಿಕೊಂಡು ನಡೆಸುತ್ತಿರುವ ಹಗಲು ದರೋಡೆಗಳಿಂದ ಇಡೀ ಸಂಸ್ಕೃತಿಯನ್ನು ಒಂದಲ್ಲಾ ಒಂದು ದಿನ ದುರಂತಕ್ಕೆ ಒಡ್ಡುವ ಭೀಕರ ಚಿತ್ರಗಳನ್ನು ಈ ಕಾದಂಬರಿ ಉದ್ದಕ್ಕೂ ಬಿಚ್ಚಿಡುತ್ತದೆ. ರಾಜಕಾರಣ ಹಾಗೂ ಅರಣ್ಯ ಇಲಾಖೆಯ ದುರಾಸೆಗಳು ಒಮ್ಮೆ ಮಾಡಿದ ಅಪರಾಧ ಪ್ರಪಂಚ ಪ್ರಸಿದ್ಧ ಏಲಕ್ಕಿಯನ್ನು ಸರ್ವನಾಶ ಮಾಡುವುದರೊಂದಿಗೆ ಒಂದು ಸಾಂಸ್ಕೃತಿಕ ಅವಸಾನಕ್ಕೂ ಗುರಿಯಾಗುವ ಬಗೆಗಳನ್ನು ಈ ಮೇಲಿನ ಸಾಲುಗಳು ಸ್ಪಷ್ಟಪಡಿಸುತ್ತವೆ, ಎಂದು ಚಿದಂಬರ ರಹಸ್ಯ ಕಾದಂಬರಿಯ ವಾಸ್ತವಾಂಶವನ್ನು ಕಟ್ಟಿಕೊಡುತ್ತಾರೆ.

ಟಿಪ್ಪಣಿಗಳು

1. ಪೂರ್ಣಚಂದ್ರ ತೇಜಸ್ವಿ: 'ಚಿದಂಬರ ರಹಸ್ಯ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಾಶನ, ಮುದ್ರಣ, 2006, ಪುಟ : 1
2. ನಟರಾಜ್ ಹುಳಿಯಾರ್ : (ಸಂ) ರಾಮಮನೋಹರ ಲೋಹಿಯಾ ಚಿಂತನೆ, ಸಂಪುಟ : 7 ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ , ಹಂಪಿ, 2008.
3. ಚಿದಂಬರ ರಹಸ್ಯ : ಪುಟ : 3
4. ನಟರಾಜ್ ಹುಳಿಯಾರ್ (ಸಂ) ಲೋಹಿಯಾ ಚಿಂತನೆ, ಸಂಪುಟ– 7

5. ಕಾಳೇಗೌಡನಾಗವಾರ, ನಟರಾಜ್ ಹುಳಿಯಾರ್ (ಸಂ) 'ಉತ್ತರ-ದಕ್ಷಿಣ', ರಾಮಮನೋಹರ ಲೋಹಿಯಾ ಚಿಂತನೆ, ಸಂಪುಟ - 2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 1996.
6. ನಟರಾಜ್ ಹುಳಿಯಾರ್ : (ಸಂ) ಲೋಹಿಯಾ ಚಿಂತನೆ, ಸಂಪುಟ- 7
7. ಚಿದಂಬರ ರಹಸ್ಯ : ಪುಟ - 17
8. ಪುಟ : 193
9. ಪುಟ : 97-98
10. ಪುಟ : 105
11. ಪುಟ 35-36
12. ಪುಟ : 51
13. ಪುಟ : 84-85
14. ಪುಟ : 135
15. ಪುಟ : 182
16. ಅದೇ ಪುಟ
17. ಪುಟ : 183
18. ಪುಟ : 187
19. ಅದೇ ಪುಟ
20. ಪುಟ : 193
21. ಪುಟ : 194
22. ನಟರಾಜ್ ಹುಳಿಯಾರ್ : (ಸಂ) ಲೋಹಿಯಾ ಚಿಂತನೆ, ಸಂಪುಟ : 7
23. ನಟರಾಜ್ ಹುಳಿಯಾರ್, 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004.
24. ಅದೇ
25. ನಟರಾಜ್ ಹುಳಿಯಾರ್ : (ಸಂ) ಲೋಹಿಯಾ ಚಿಂತನೆ, ಸಂಪುಟ : 7
26. ಚಿದಂಬರ ರಹಸ್ಯ: ಪುಟ - 214
27. ಪುಟ : 53
28. ಪುಟ : 199

29. ನಟರಾಜ್ ಹುಳಿಯಾರ್ : (ಸಂ) ಲೋಹಿಯಾ ಚಿಂತನೆ, ಸಂಪುಟ : 7

30. ಅದೇ

31. ಚಿದಂಬರ ರಹಸ್ಯ: ಪುಟ – 91

32. ಪುಟ : 91–92

33. ಪುಟ : 119

34. ಪುಟ : 161–162

35. ನಟರಾಜ್ ಹುಳಿಯಾರ್ : (ಸಂ) ಲೋಹಿಯಾ ಚಿಂತನೆ, ಸಂಪುಟ : 7

36. ಕಾಳೇಗೌಡನಾಗವಾರ, ನಟರಾಜ್‌ಹುಳಿಯಾರ್ (ಸಂ) ಉತ್ತರ ದಕ್ಷಿಣ, ಲೋಹಿಯಾ ಚಿಂತನೆ, ಸಂಪುಟ – 2

37. ಚಿದಂಬರ ರಹಸ್ಯ: ಪುಟ – 39,40,41

38. ಪುಟ – 51,53,54

39. ಪುಟ –34

40. ಅದೇ ಪುಟ

41. ಪುಟ – 42

42. ಪುಟ – 43

43. ಪುಟ – 45

44. ಪುಟ – 90

45. ಪುಟ – 141

46. ಡಿ.ವಿ.ಪ್ರಹ್ಲಾದ್ : (ಸಂ) ತೇಜಸ್ವಿಲೋಕ, ಸಂಚಯ ಪ್ರಕಾಶನ, 2007.

47. ಕೆ.ವಿ.ಪೂರ್ಣಚಂದ್ರ ತೇಜಸ್ವಿ, ಎಂ.ಡಿ.ನಂಜುಂಡಸ್ವಾಮಿ: (ಸಂ) ಲೋಹಿಯಾರೆಡ್ ಬುಕ್, ಕನ್ನಡ ಪುಸ್ತಕ ಪ್ರಾಧಿಕಾರ, ಎರಡನೇ ಮುದ್ರಣ – 2007.

ಸಂದರ್ಶನ

ಯು.ಆರ್.ಅನಂತಮೂರ್ತಿ ಅವರೊಂದಿಗೆ ದಿನಾಂಕ 7-9-2010 ರಂದು ನಡೆಸಿದ ಸಂದರ್ಶನ:

ಪ್ರಶ್ನೆ : ಸಾರ್ ನಮಸ್ಕಾರ, ಸಮಾಜವಾದ ಮೊದಲು ಕರ್ನಾಟಕದಲ್ಲಿ ಆರಂಭಗೊಂಡಿದ್ದು ಹೇಗೆ, ಒಂದು ಮೂಮೆಂಟ್ ಆಗಿ ಅದರ ಸ್ವರೂಪ ಹೇಗಿತ್ತು?

ನೀವು ಹೇಳ್ತಾ ಇರೋದು ಸಮಾಜವಾದಿ ಆಂದೋಲನ ನನಗೆ ಗೊತ್ತಿರೊ ಅಷ್ಟು ಹೇಳ್ಬೋದು. ಸಮಾಜವಾದ ಅನ್ನೋದು ಬಸವನ ಹಿಂದ್ಲೆ ಶುರುವಾಗಿದೆ. ನಾನು ಶಿವಮೊಗ್ಗದವನು ಮೊದಲು ಕಾಂಗ್ರೆಸ್ ಪಕ್ಷ ಇತ್ತು. ದೇಶದ ಸ್ವತಂತ್ರಕ್ಕಾಗಿ ಹೋರಾಡ್ತ ಇತ್ತು. ಅದರ ಒಳಗೆ ಕಾಂಗ್ರೆಸ್ ಸಮಾಜವಾದಿ ಪಕ್ಷ ಅಂಥಾ ಇತ್ತು. ಅದರೊಳಗೆ ಲೋಹಿಯಾ, ಜೆ.ಪಿ, ಅಶೋಕಮೆಹ್ತಾ, ಅಚ್ಯುತ ಪಟವರ್ಧನ್, ಮಧುಲಿಯಯೆ, ಆಮೇಲೆ ನಂಬೂದರಿಪಾದ್ರು ಇದ್ರು. ಅವರಲ್ಲಿ ಕೆಲವರು ಕಮ್ಯುನಿಸ್ಟರಾದ್ರು. ಈಗ ಉಳಿದವರಲ್ಲಿ ದೇಶಕ್ ಸ್ವಾತಂತ್ರ್ಯ ಬಂದ ನಂತರ ಸರ್ದಾರ್ ಪಟೇಲರ ಜೊತೆಗೆ ಡಿಫರೇನ್ಸ್ ಆಫ್ ಒಪಿನಿಯನ್ ಇತ್ತು. ಹೊರಗ್ ಬಂದ್ ಸಮಾಜವಾದಿ ಪಕ್ಷ ಅಂಥಾ ಕಟ್ಕೊಂಡ್ರು. ಆಗ ಶಿವಮೊಗ್ಗದಲ್ಲೂ ಸಮಾಜವಾದಿ ಪಕ್ಷ ಶುರುವಾಯ್ತು ರಾಘವೇಂದ್ರರಾವ್ ಅಂಥಾ ಬಬ್ರೂ ಇದ್ರು ಬಹಳ ಹಳಬರೂ ಅವರು ತೀರ್ಥಹಳ್ಳಿಯಲ್ಲಿ ಮುನ್ಸಿಪಾಲ್ ಪ್ರೆಸಿಡೆಂಟ್ ಆಗಿದ್ರು ಸ್ವಾತಂತ್ರ್ಯ ಹೋರಾಟಗಾರರು. ಒಬ್ರೆ ಇರ್ತಿದ್ರು, ಅವರಿಗೆ ಮನೆ ಇಲ್ಲ, ಏನೂ ಇಲ್ಲ. ಅವರಿಗೆ ಗೋಪಾಲಗೌಡ ಶಿಷ್ಯ ಆದ್ರು. ಸದಾಶಿವರಾಯರು ಅಂಥಾ ಬಬ್ರೂ ಇದ್ರು. ಅವರು ದೊಡ್ಡ ಶ್ರೀಮಂತ ಮನೆತನದಿಂದ ಬಂದೋರು. ಕಾಸರವಳ್ಳಿ ಮನೆತನದವರು ಅವರೂ ಅದರಿಂದ ಒಂಥರಾ ಹೊರಗೇನೆ ಬಂದೂ ಸಮಾಜವಾದಿ ಆದ್ರು. ಶಾಮೈತಾಳರೂ ಅಂಥಾ ಒಬ್ರೂ. ಅವರೊಂದು ಖಾದಿ ಅಂಗಡಿ ಇಟ್ಕೊಂಡಿದ್ರು. ನಮದೊಂದು ಸಣ್ಣ ಗುಂಪು ಶುರುವಾಯ್ತು 50 ರ ದಶಕದಲ್ಲಿ ಕಾಗೋಡು ಸತ್ಯಾಗ್ರಹ ಆರಂಭವಾಯ್ತು. ಅದರ ಪರವಾಗಿ ಹೋರಾಟ ಆಯ್ತು. ಅದು ರೈತರ ಸತ್ಯಾಗ್ರಹ, ಅದರಲ್ಲೂ ಏನು ತುಂಬಾ ಹಿಂದುಳಿದ ಜಾತಿಯ ರೈತರು. ಅದರಲ್ಲಿ ಗೋಪಾಲಗೌಡ್ರು ಅವ್ರೆಲ್ಲಾ ಕಾಗೋಡು ಸತ್ಯಾಗ್ರಹಕ್ಕೆ ಕಾರಣರಾದರು. ಅದರಲ್ಲಿ ಲೋಹಿಯಾ ಬಂದ್ರು. ಅವರು ಅರೆಸ್ಟ್ ಆದ್ರು ಆವಾಗೆಲ್ಲಾ ಲೋಹಿಯಾ ಜಯಪ್ರಕಾಶ್ ಎಲ್ಲಾ ಒಟ್ಟಿಗೆ ಇದ್ರು. ಆನಂತರ ಒಡಕು ಬಂತು. ಪಿ.ಎಸ್.ಪಿ. ಅಂತ ಆಯ್ತು, ಆಮೇಲೆ ಎಸ್.ಎಸ್.ಪಿ ಅಂಥಾ ಆಯ್ತು.

ಆ ಮೇಲೆ ಲೋಹಿಯಾವಾದಿಯಾದ್ದೆ ಒಂದು ಗುಂಪೇನೆ ಆಯ್ತು. ಇದು ಚರಿತ್ರೆ, ಸಮಾಜವಾದಿ ಚರಿತ್ರೆ, ಅದು ಶುರುವಾಗಿದ್ದು. ಕಮ್ಯುನಿಸ್ಟರು ಏನ್ ಮಾಡ್ತಿದ್ರು ಒಟ್ಟು ಕಾರ್ಮಿಕರ ಸಂಘಟನೆ ಮಾಡ್ತಿದ್ರು. ಸಮಾಜವಾದಿಗಳೇ ಮೊದಲು ರೈತ ಸಂಘಟನೆ ಮಾಡೋದು ಮುಖ್ಯ ಅಂತ ತಿಳಿದ್ರು. ರೈತ ಸಂಘಟನೆಯಿಂದ ಶುರುವಾಯ್ತು.

ಪ್ರಶ್ನೆ: ನಿಮ್ಮ ಕಾದಂಬರಿಗಳಲ್ಲಿ ಬರುವ ಪಾತ್ರಗಳು ಒಂದು ಬಗೆಯ ವೈರುದ್ಯಗಳಿಂದ ಕೂಡಿರುತ್ತದೆ, ದ್ವಂದ್ವ ನಿಲುವುಗಳು ಹೆಚ್ಚು ಕಾಣುವುದು ಪ್ರಜ್ಞೆಯಲ್ಲಿನ ಕರ್ಷಣದಿಂದಲೇ?

ಎಲ್ಲವರಲ್ಲೂ ಒಂದು ಕಾನ್‌ಪ್ಲಿಕ್ಟ್ ಇರತ್ತೆ. ಕಿಂಗ್‌ಲಿಯರಲ್ಲೂ ಒಂದು ಕಾನ್‌ಪ್ಲಿಕ್ಟ್ ಇದೆ. ಮ್ಯಾಕ್‌ಬೆತ್‌ಲ್ಲೂ ಒಂದು ಇದೆ. ಹಾಮ್ಲೆಟ್‌ನಲ್ಲಿ ಒಂದಿದೆ. ತನ್ನ ಜೊತೆಗೇನೆ ಒಂದು ಹೋರಾಟ. ನಿಮಗೂ ನಿಮ್ಮೊಳಗೆ ಒಂದು ಕಾನ್‌ಪ್ಲಿಕ್ಟ್ ಇಲ್ದೆ ಇದ್ರೆ ನೀವ್ ಮನುಷ್ರೇ ಅಲ್ಲಾ, ಒಂದು ಮೃಗ ಅಥವಾ ರಾಕ್ಷಸ. ಈಗ ಬಳ್ಳಾರಿ ಗಣಿದೊರೆಗಳಿಗೆ ಕಾನ್‌ಪ್ಲಿಕ್ಟ್ ಇಲ್ಲ ಯಾಕೆ? ಅವರಿಗೆ ದುಡ್ ಮಾಡೋದ್ ಒಂದೇ ಇರತ್ತೆ. ನೀವು ಕನ್ನಡದಲ್ಲಿ ದ್ವಂದ್ವ ದ್ವಂದ್ವ ಅನ್ನೋದನ್ನು ಕೆಟ್ಟ ಅರ್ಥದಲ್ಲಿ ಬಳಸಿ, ಅದನ್ನ ನನ್ನ ಕೇಳೊಕ್ ಬಂದ್ರೆ ನಿಮಗೆ ಛೀಕಾರ (ನಗು) ಅನಂತಮೂರ್ತಿಯವರಲ್ಲಿ ದ್ವಂದ್ವ ಇದೆ. ಅದನ್ನ ಯಾರೋ ಹೇಳಿರ್ತಾರೆ, ನೀವ್ ಅದನ್ನ ಬಳಸ್ತೀರಿ ಹಾಗಲ್ಲ. ದ್ವಂದ್ವ ಅಂದ್ರೆ ನಮ್ಮೊಳಗೇನೆ ಇರುವ ಒಂದು ಹೋರಾಟ. ಅದನ್ನೆಲ್ಲಾವನ್ನು ಪಾರದರ್ಶಕವಾಗಿ ತೆರೆದಿಟ್ಟು ನೋಡ್ಬೇಕು. ಅದನ್ನ ಒಂದು ರಾಜಕೀಯ ಪಕ್ಷ ಮಾಡಕ್ಕಾಗಲ್ಲ. ಅದು ಬರವಣಿಗೆಯ ಮಟ್ಟದಲ್ಲಿ ಸಾಧ್ಯ.

ಪ್ರಶ್ನೆ : ಹಾಗಾದ್ರೆ ಆ ಬಗೆಯ ವೈರುಧ್ಯವನ್ನು ತರೋದೆ ಸತ್ಯವನ್ನು ಹುಡುಕಲು, ಅಂದ್ರೆ ಅಣ್ಣಾಜಿ ಮತ್ತು ಬೈರಾಗಿ ಪಾತ್ರವನ್ನು ತರೋದು ಕೃಷ್ಣಪ್ಪಗೌಡನಲ್ಲಿ ಇಲ್ದೆ ಇರುವಂಥದನ್ನು ಹುಡುಕೊದಕ್ಕಾಗಿ.

ಹೌದು, ವೈರುಧ್ಯವನ್ನು ತರೋದು, ವೈರುಧ್ಯವನ್ನು ಮೀರಕ್ಕೋಸ್ಕರವಾಗಿ ಅವರು ಅವನನ್ನ ಎಲ್ಲೊ ಅದು ಪೂರ್ಣಗೊಳಿಸತ್ತೆ. ಅವನಲ್ಲಿ ವ್ಯಕ್ತವಾಗ್ದೆ ಇರೋದು ಇನ್ನೊಂದು ಕಡೆ ವ್ಯಕ್ತವಾಗತ್ತೆ. ಹೀಗಾಗಿ ನಾವು ನಮ್ಮನ್ನು ನೀವು ಮಾನವತೆಯಲ್ಲಿ ತೀರಾ ವಿಶಿಷ್ಟವಾಗಿಬಿಟ್ರೆ ಅಪ್ರಸ್ತುತವಾಗ್ತಿರಿ. ನೀವು ಮಾನವತೆಯೆ ಆಗ್‌ಬಿಟ್ರೆ ಅಬ್ಸ್ಟ್ರಾಕ್ಟ್ (Abstract) ಆಗ್ ಹೋಗ್ ಬಿಡ್ತೀರಿ. ಎರಡೂ ಅಲ್ದೆ ಇರೋದು. ಮಾನವತೆಯಲ್ಲಿ ತೀರಾ ವಿಶಿಷ್ಟವಾಗಿ ನಾವು ಬಹಳ ವಿಶಿಷ್ಟ ವ್ಯಕ್ತಿ ಅಂದ್ರೆ ಅಂಥಾ ವಿಶಿಷ್ಟ ವ್ಯಕ್ತಿ ಯಾರೂ ಇಲ್ಲ. ನಿಮ್ಮ ಭಾವನೇನೂ ನನ್ನಲ್ಲಿ ಸೇರಿರುತ್ತೆ, ನನ್ನದು ನಿಮ್ಮಲ್ಲಿರುತ್ತೆ, ನಿಮ್ಮ

ಒಳನೋಟಗಳು ನನ್ನಲ್ಲಿರುತ್ತೆ. ಇದರ ಹುಡುಕಾಟವನ್ನು ಕಾದಂಬರಿಯಲ್ಲಿ ಬೇರೆ ಬೇರೆ ಪಾತ್ರಗಳ ಮುಖಾಂತರ ಮಾಡ್ತೀನಿ.

ಪ್ರಶ್ನೆ : ಕಿ.ರಂ.ಮೇಷ್ಟ್ರು ಹೇಳ್ತಿದ್ರು ಸಮಾಜವಾದಿಗಳು ವೈಶಿಷ್ಟ್ಯವನ್ನು ಬಯಸೋರು ಅಂಥಾ, ನೀವು ಸಮಾಜವಾದವನ್ನು ನೋಡುವ ಬಗೆ ಹೇಗೆ?

ನಾನ್ ಏನ್ ನೋಡ್ತೀನಿ ಅಂದ್ರೆ ನನ್ನ ಎಲ್ಲಾ ಅನುಭವವನ್ನು ಅದರ ಜೊತೆಗೆ ಇದು ಸತ್ಯವೊ ಅಂಥಾ ನೋಡ್ತಿನಿ. ಸಮಾಜವಾದವನ್ನು ನಾನು ಪ್ರಚಾರ ಮಾಡಕ್ಕೆ ಇರೋನು ಅಲ್ಲ. ಅದರ ಸತ್ಯವನ್ನು ಪರೀಕ್ಷೆ ಮಾಡ್ತೀನಿ. ಆ ಅರ್ಥದಲ್ಲಿ ಸಮಾಜವಾದಿಗಳಿಗೂ ಕಮ್ಯುನಿಸ್ಟರಿಗೂ ಅದರಲ್ಲಿ ವ್ಯತ್ಯಾಸ ಇದೆ. ನಾವು ನಮ್ಮ ವ್ಯಕ್ತಿತ್ವದ ಹೊಳಹುಗಳನ್ನು ಬಿಟ್ಟು ಹೋಗಲ್ಲ. ಕಮ್ಯುನಿಸ್ಟರು ತತ್ವಕ್ಕಾಗಿ ತಮ್ಮ ವ್ಯಕ್ತಿತ್ವದ ಹೊಳಹುಗಳನ್ನು ಅಷ್ಟು ಮುಖ್ಯ ಅಲ್ಲ ಅಂಥಾ ತಿಳೀತಾರೆ. ನಾವು ವ್ಯಕ್ತಿತ್ವದ ಒಳಗಿನ ಹೊಳಹುಗಳನ್ನು ಮುಖ್ಯ ಅಂಥಾ ತಿಳಿತೀವಿ.

ಪ್ರಶ್ನೆ: ನೀವು ಭಾರತೀಪುರದಲ್ಲಿ ಜಗನ್ನಾಥನ ಮೂಲಕ ವ್ಯಕ್ತಪಡಿಸಿರುವ ಸೋಶಿಯಲಿಸಂ ಸ್ಕೆಪ್‌ಟಿಕ್‌ನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡೊದಾದ್ರೆ.

ಸರಿ, ತಾನ್ ಮಾಡೋದರ ಮೇಲೆ ತನಗೆ ಅನುಮಾನ ಇರತ್ತೆ, ನಮಗೆ ಎಲ್ರಿಗೂ ಇರತ್ತೆ ಅದು, ಅನುಮಾನವನನ್ನು ಗೆದ್ದು ಬರಬೇಕಾಗತ್ತೆ, ಮೀರ್‌ಬೇಕಾಗತ್ತೆ, ಅನುಮಾನವನನ್ನು ಬಚ್ಚಿಟ್ಟುಕೊಂಡ್ರೆ ಅದು ಬ್ಯಾಡ್‌ಫೈಯ್ತ್ ಆಗತ್ತೆ, ಸುಳ್ಳು ಆಗತ್ತೆ, ಬಚ್ಚಿಡೋರು ಸುಳ್ ಮಾಡ್ಕೋತಾರೆ. ತಮಗೆ ತಾವು ಸುಳ್ ಹೇಳ್ಕೊತಾರೆ.

ಪ್ರಶ್ನೆ: ನೀವು ಲೇಖಕರಾಗಿರದಿದ್ದರೆ, ಮಂತ್ರಿಯಾಗಬಹುದಿತ್ತು ಅನ್ಸತ್ತೆ.

ಇಲ್ಲ, ಅಲ್ಲೂನೂ ನನ್ನ ಒಳಗಿನ ಹೋರಾಟದಿಂದಾಗಿ ರಿಸೈನ್ ಮಾಡ್ ಬರ್ತಿದ್ದೆ ಅಂಥಾ ಕಾಣ್ತಾ ಇದೆ. ರಾಜಕೀಯದಲ್ಲಿ ಯಾವತ್ತೂ ನಾನು ಒಂದು ಅಧಿಕಾರದ ಕಡೆ ಅಲ್ಲ. ಚಳುವಳಿಯೇ ನನಗೆ ಬಹಳ ಇಂಪಾರ್ಟೆಂಟ್. ಚಳುವಳಿಯನ್ನು ಅಧಿಕಾರವಾಗಿ ಪರಿವರ್ತಿಸಬೇಕಾದರೆ ಕಾಂಪ್ರೊಮೈಸ್ ಮಾಡ್ಕೊಬೇಕಾಗಿ ಬರೋದು. ನನಗೆ ಗೊತ್ತಿದ್ದ ಒಳ್ಳೆಯ ರಾಜಕಾರಣಿಗಳು ಯಾವತ್ತು ಹಾಗೆ ಮಾಡ್ಲಿಲ್ಲ. ಲೋಹಿಯಾ, ಗೋಪಾಲಗೌಡ್ರು ಮಾಡ್ಲಿಲ್ಲ. ಸ್ವಲ್ಪ ಹೊಂದಾಣಿಕೆ ಮಾಡ್ಕೊಂಡು ಪಟೇಲ್ರು ಮುಖ್ಯಮಂತ್ರಿ ಆದ್ರು. ಅದೇ ಅವರ ದೋಷವಾಗಿ ಕಾಣಸ್ತಾ ಇತ್ತು ನನಗೆ ಅದನ್ ನಾನ್ ಅವರಿಗೆ ಹೇಳ್ತಾನೂ ಇದ್ದೆ.

ಪ್ರಶ್ನೆ: ಪರಂಪರೆಯೊಂದಿಗಿನ ನಿಮ್ಮ ಅನುಸಂಧಾನ ನೋಡಿದಾಗ ವಿಭಿನ್ನ ಅನ್ಸತ್ತೆ, ವಸಾಹತುಶಾಹಿಗೆ ಇದಿರಾಗಿ ಒಂದು ರೀತಿ ಕಂಡರೆ, ದೇಸಿಯ ಸಮಸ್ಯೆಗಳಿಗೆ ಮತ್ತೊಂದು ರೀತಿ ಕಾಣುತ್ತದೆ.

ನಾನು ಮೊದಲು ಬಹಳ ಪಾಶ್ಚಾತ್ಯ ಚಿಂತಕರ ಹಂಗೆ ಚಿಂತನೆ ಮಾಡ್ತಾ ಇದ್ದೆ. ನಮ್ಮಲ್ಲಿ ಬಹಳ ಜನ ಹಾಗೇನೇ ಮಾಡ್ತಾ ಇದ್ರು. ಆದರೆ ಅದರ ಅತಿರೇಕಗಳನ್ನು ಇವತ್ತು ಗ್ಲೋಬಲೈಸೇಶನ್ ಕಾಲದಲ್ಲಿ ನೋಡ್ತಾ ಇರೋವಾಗ ನಮ್ಮ ಸ್ವಂತಕ್ಕೆ ನಾವು ಹಿಂದಿರುಗಬೇಕು ಅನ್ಸತ್ತೆ. ಆದರೆ ಸ್ವಂತದ ದೇಸಿಗೆ ಹಿಂದಿರುಗೋದು ಅಂದ್ರೆ ದೇಸಿಯನ್ನು ಕಣ್ಮುಚ್ಚಿ ಒಪ್ಪಿಕೊಳ್ಳೊದಲ್ಲ ಅದ್ರಲ್ಲಿ ಇರೋಷ್ಟು ವಿರುದ್ಧವಾದುದು ನನ್ನಲ್ಲಿ ಇನ್ನೊಂದು ಶಬ್ದವಿದೆ. ನಾನು **'ಕ್ರಿಟಿಕಲ್ ಇನ್‌ಸೈಡರ್'** ಅಂತ್ಹೇಳಿ, ಅಂದ್ರೆ ವಿಮರ್ಶಾತ್ಮಕವಾದ ಒಳಗಿನವನು ಅಂಥಾ. ಒಳಗಿನವನು ಹೌದು, ಆದ್ರೆ ಅದರ ಒಳಗೂನೂ ವಿಮರ್ಶಾತ್ಮಕವಾಗಿ ಇರ್ತೀನಿ. ಆದ್ರಿಂದ ಅದು ಸಂಪೂರ್ಣ ದೇಸಿಯೂ ಅಲ್ಲ, ಸಂಪೂರ್ಣ ವಿದೇಶಿಯೂ ಅಲ್ಲ. ವಿದೇಶವೂ ನಮ್ಮೊಳಗಿದೆ ನಮ್ಮ ಜೀವನದೊಳಗೆ ಬಂದ್‌ಬಿಟ್ಟಿದೆ. ನಮಗ್ ಗೊತ್ತಿಲ್ದಂಗೆ ಅದೇ ದೇಸಿ ಆಗಿದೆ. ಇವತ್ತು ಬರೀ ಅಚ್ಚ ಕನ್ನಡದಲ್ಲಿ ಮಾತಾಡಿದ್ರೆ ಹಳ್ಳಿಯವನೊಬ್ಬಿಗೆ ಅರ್ಥವೆ ಆಗ್ದೆ ಇರ್ಬೋದು, ಪಾಪ ಇಂಗ್ಲಿಶೂನೂ ಸೇರಿಸಬೇಕಾಗಿ ಬರಬೋದು, ಅಷ್ಟರಮಟ್ಟಿಗೆ ಕನ್ನಡವೇ ವಿದೇಶಿಕರಣವಾಗ್ತಾ ಇದೆ, ಅಲ್ವಾ! ಆದ್ರಿಂದ ಈ ದೇಸಿ–ವಿದೇಸಿ ಅನ್ನೋದು ಅಷ್ಟು ಅಚ್ಚುಕಟ್ಟಾದ ಹಾಗೆ ಬೇರ್ಪಡಿಸುವ ವಿಷಯಗಳಲ್ಲ.

ಪ್ರಶ್ನೆ: ಟೊಳ್ಳು ಸಂಸ್ಕೃತಿ ಸೃಷ್ಟಿಸುವ ಭೌತಿಕ ಸರಕುಗಳನ್ನು ಕೊಳ್ಳುವ ವಾಂಛೆ ಇಲ್ಲದೆ ಬದುಕಲು ಸಾಧ್ಯವೇ? ಭೌತಿಕ ಸರಕಿನ ಗೂಳಿಯ ಕೊಂಬುಗಳನ್ನು ಮೆಟ್ಟಿ ಬದುಕಿದವರು ಕಿ.ರಂ.ಮೇಷ್ಟ್ರು ಒಬ್ಬರೆ ಅಂತ ಅನ್ಸತ್ತೆ.

ಸಾಧ್ಯ ಅಂತಾ ಕಾಣತ್ತೆ. ನಾವೆಲ್ರೂ ಸ್ವಲ್ಪ ಜೀವನವನ್ನು ಸರಳ ಮಾಡ್ಕೊಳ್ದೆ ಇದ್ರೆ ಬದುಕಾಕೆ ಆಗಲ್ಲ. ಬಹಳ ಆ ತರಾ ಮರುಗುಬಿಟ್ರೆ ಬದುಕಿಗೆ ಜಾಗಾನೇ ಇರಲ್ಲ, ಅಷ್ಟು ಅದು ನಮ್ಮನ್ನ ಆಕ್ರಮಿಸತ್ತೆ. ಕಿ.ರಂ.ಗೆ ಸಾಧ್ಯ ಇತ್ತಲ್ಲ. ಸ್ವಲ್ಪ ಮಟ್ಟಿಗೆ ಎಲ್ರಲ್ಲೂ ಸಾಧ್ಯ ಆಗಲೇಬೇಕು. ಇಲ್ದೆ ಇದ್ರೆ ಬದುಕೋಕೆ ಸಾಧ್ಯ ಆಗಲ್ಲ. ಏನಾದ್ರು ಪಡ್ಕೊಬೇಕು ಅನ್ನೋ ಆಸೆ ಇದ್ರೆ ನಾವು ನಮ್ಮ ಬದುಕನ್ನು ಬದುಕಾಗಲ್ಲ. ಇನ್ನೊಬ್ರ ಬದುಕನ್ನು ಬದುಕ್ತಾ ಇರ್ತೀವಿ, ತೋರಿಕೆಯ ಬದುಕನ್ನು ಬದುಕ್ತಾ ಇರ್ತೀವಿ.

ಪ್ರಶ್ನೆ: ಈಚಿನ ಸಾಹಿತ್ಯದ ಬಗ್ಗೆ

ಬಹಳ ಜನರದು ಓದ್ತಿನಿ. ಚೆನ್ನಾಗಿ ಭರವಸೆ ಹುಟ್ಟಿಸೋರು ಇದಾರೆ, ತುಂಬಾ ಬಹಳ ಚೆನ್ನಾಗಿ ಬರೆಯೋರು ಇದಾರೆ. ಕೆಲವರು ಎಲ್ಲಾ ಕಾಲದಲ್ಲೂ ಎಲ್ಲಾ ತರಹ ಬರೆಯೋರು ಇರ್ತಾರೆ. ಕೆಲವು ಮಟ್ಟಿಗೆ ಉಳಿಯುತ್ತೆ. ಕಾಳಿದಾಸನ ಕಾಲದಲ್ಲಿ ಅವನೊಬ್ಬನೆ ನಾಟಕಕಾರ ಇದ್ದಿದ್ದಲ್ಲ. ನೂರಾರು ಜನ ನಾಟಕಕಾರರೂ ಇದ್ರೂ ಅಂಥಾ ಕಾಣುತ್ತೆ. ಆದ್ರೆ ಅವನೊಬ್ಬ ಉಳಿದ ಈಗ ಯಾರು ಉಳಿತಾರೆ ಯಾರು ಉಳಿಯಲ್ಲ ಅನ್ನೋದು ಒಳ್ಳೆ ಜ್ಯೋತಿಷಿ ಮಾತಾಡ್ದ ಹಂಗೆ ಆಗತ್ತೆ. ಅಪ್ಪರವರೆಗೆ ಎಲ್ಲಾ ಥರಾದ್ದು ಇರತ್ತೆ. ಕೆಲವು ಗಮನಕ್ಕೆ ಬರತ್ತೆ, ಕೆಲವು ಗಮನಕ್ಕೆ ಬರ್ದೆ ಹೋಗತ್ತೆ. ಒಳ್ಳೇದು ಗಮನಕ್ಕೆ ಬರ್ದೆ ಹೋಗಬಹುದು. ಒಳ್ಳೆ ವಿಮರ್ಶಕರು ಯಾರಪ್ಪಾ ಅಂದ್ರೆ ನಿಜವಾದ ಬೆಲೆ ಉಳ್ಳದ್ದು ಅಂಥಾ ಕಾಣೊ ಹಂಗ್ ಮಾಡಬೇಕು ಉಳಿದವರೆಗೆ, ಕನ್ನಡದಲ್ಲಿ ಈವರೆಗೂ ಹಂಗಾಗಿಲ್ಲ. ಹೊಸಲೇಖಕರು ಸ್ವಲ್ಪ ಶಕ್ತಿ ಇದ್ದ ಕೂಡಲೇ ಗೊತ್ತಾಗ್ತಿತ್ತು. ನಮ್ಮ ಕಾಲದಲ್ಲಿ ಆಲನಹಳ್ಳಿ ಕೃಷ್ಣ ಅಂಥೋರು ಒಂದೊಂದು ಪುಸ್ತಕದಿಂದ್ಲೆ ಬೆಳಕಿಗೆ ಬರ್ತಾ ಇದ್ರು. ನಮ್ಮ ವಿಮರ್ಶಕ ಪ್ರಜ್ಞೆ ಹಾಗಿತ್ತು.

ಪ್ರಶ್ನೆ: ಆದರೆ ಇವತ್ತು ವಸೀಲಿಬಾಜಿ ವಿಮರ್ಶೆ ಇದೆಯೆಲ್ಲಾ.

ಇದು ಸ್ವಲ್ಪ ಗಲಿಬಿಲಿ ಇದೆ. ಯಾಕೆಂದ್ರೆ ಒಳ್ಳೇ ಕನ್ನಡ ಡಿಪಾರ್ಟ್‌ಮೆಂಟ್‌ಗಳೇ ಇಲ್ಲ. ವಿದ್ಯಾಭ್ಯಾಸ ಪದ್ಧತಿಯಲ್ಲೂ ಕೂಡ ಒಳ್ಳೆ ಟೆಕ್ಸ್ಟ್‌ನ್ನು ಇಟ್ಕೊಂಡು ಅದನ್ನು ಒಳ್ಳೆ ಪಾಠ ಮಾಡೋರು ಕಡಿಮೆ ಆಗ್ತಾ ಹೋಗಿದಾರೆ.

ಪ್ರಶ್ನೆ: ಇದು ಕನ್ನಡದ ದುರ್ಗತಿಯೇ?

ಹೆಚ್ಚು ಕಾಲ ಹೀಗಿರಲ್ಲ, ಸರಿಹೋಗತ್ತೆ ಹೊಸ ಪೀಳಿಗೆ ಬರತ್ತೆ, ಅಷ್ಟು ಯಾವುದಕ್ಕೂನೂ ಹೀಗೆ ಆಗ್ಬಿಡುತ್ತೆ ಅಂಥಾ ತಿಳ್ಕೊಬೇಕಾಗಿಲ್ಲ, ಕಾಲ ನಿರಂತರವಾಗಿರತ್ತೆ. ಬದಲಾವಣೆ ಮಾಡ್ತಾ ಮಾಡ್ತಾ ಹೋಗ್ತಿರತ್ತೆ: ಅದಕ್ಕೆ ಎಫರ್ಟ್ ಬೇಕು. ಯಾರೋ ಒಬ್ರಿಗೆ ಹೀಗಾಗ್ಬಾರ್ದು ಅಂಥಾ ಅನ್ಸತ್ತೆ.

ಪ್ರಶ್ನೆ: ನಿಮ್ಮ ಕಾದಂಬರಿಗಳಲ್ಲಿ ಬರುವ ಪ್ರಾಣೇಶಾಚಾರ್ಯ, ಜಗನ್ನಾಥ, ಪ್ರಸಾದ, ಕೇಶವ ಪಾತ್ರಗಳು ನಿಮ್ಮ ವ್ಯಕ್ತಿತ್ವದ ಪ್ರತಿಬಿಂಬಗಳಂತೆ ಕಾಣಸ್ತವೆ.

ಇಲ್ಲ, ಇಲ್ಲ, ಆದಷ್ಟು ಕಡಿಮೆ ಇರಬೇಕು ಅಂತ್ಲೆ ನಾನು ಬರೀತೀನಿ, ನಮ್ಮ ಅನುಭವದಿಂದ್ಲೆ ಬರಿಯೋದು, ಆ ಪಾತ್ರಗಳ ಜೊತೆ ನಿಮಗಷ್ಟು ಸಾಮಿಪ್ಯ ಬಂದ್ರೆ ಅದು ನಾನಲ್ಲ ನೀವು. ಓದೋವಾಗ ಯಾರೋ ಒಬ್ಬ ವ್ಯಕ್ತಿ, ಅಥವಾ ಲೇಖಕ ಅನ್ನಿಸಿದಾಗ ಅದಕ್ಕೆ ಬೆಲೆಯೇ ಇಲ್ಲ. ಪರ್ಟಿಕ್ಯುಲರ್ ಆಗಿದ್ರೂ ಜನರಲ್ ಆದಾಗ ಅದಕ್ಕೆ ವ್ಯಾಲ್ಯು ಇದೆ. ಅದು ಪರ್ಟಿಕ್ಯುಲರ್ ಆಗ್ದೆ ಹೋದ್ರೆ ಅದು ನಿಜ ಅನ್ಸಲ್ಲ. ಅದು ಜನರಲ್ ಆಗ್ದೆ ಇದ್ರೆ ಇದಕ್ಕೆ ವ್ಯಾಲ್ಯೂ ಇದೆ ಅಂಥಾ ಅನ್ಸಲ್ಲ. ಬೆಲೆ ಬರಬೇಕಾದ್ರೆ ಅದು ಜನರಲ್ ಆಗ್ಬೇಕು, ನಿಜ ಅನ್ಸಬೇಕಾದ್ರೆ ಅದು ವಿಶಿಷ್ಟವಾಗಬೇಕು. So, ಅದರಲ್ಲಿ ವಿಶಿಷ್ಟತೆ. ಯಾವನೋ ಒಬ್ಬ ವ್ಯಕ್ತಿ ನನ್ನದ್ರಿಂದ್ಲೆ ಬಂದದ್ದು ಆದರೆ ಅದಕ್ಕೆ ಬೆಲೆ ಇದೆ ಅಂಥಾ ಗೊತ್ತಾಗ್‌ಬೇಕಾದ್ರೆ, ಅದು ಎಲ್ರಿಗೂ ಅನ್ಸೊ ಹಾಗೆ ಆದಾಗ, ವಿಶಿಷ್ಟವಾದ್ದು, ಸಾಮಾನ್ಯವಾದ್ದು.

ಪ್ರಶ್ನೆ: ಕಿರಿದರಲ್ಲಿ ಹಿರಿದನ್ನು ಹಿಡಿದಿಡುವ ತಂತ್ರ ಬಹುಶಃ ನಿಮ್ಮನ್ನು ಬಿಟ್ಟರೆ ಬೇರೆ ಯಾರೂ ಅದರಲ್ಲಿ ಪಳಗಲಿಲ್ಲ ಅನ್ಸುತ್ತೆ.

ಕಾರಂತರು ಅವ್ರೆಲ್ಲಾ ಆದ್ಮೇಲೆ ನಾವು ಬೇರೆ ಥರಾ ಬರೀದೆ ಇದ್ರೆ ನಮ್ಮ ಕಾದಂಬರಿಗಳು ಯಾರು ಓದ್ತಾ ಇರ್ಲಿಲ್ಲ. ಕಾದಂಬರಿ ಅಂದ್ರೆ ಗೋಣಿಚೀಲ ಇದ್ದಹಾಗೆ, ನಮ್ಮಲ್ಲಿ 'ಪೋಲ್ಡಾಲ್' ಅಂತ ಕರೀತಾ ಇದ್ರು. ಅದ್ರಲ್ಲಿ ಹಾಸಿಗೆ, ಬಟ್ಟೆ, ಶರ್ಟು, ಎಲ್ಲವೂ ತುಂಬ್ತಾ ಇದ್ರು. ಪ್ರಜ್ಞೆಯ ಹಂತದಲ್ಲಿ ಒಂದು ಕಾದಂಬರಿ ಮೂಲಕ ಎಲ್ಲಾ ಸಂದಿಗ್ದಗಳನ್ನು ಒಳಗೊಂಡ ಕುಶಲಕಲೆ, ಈಗ ಮತ್ತೆ ವೊಲ್ಡಾಲ್‌ಗಳು ಬರ್ತಿವೆ. (ನಗು) ಚೆನ್ನಾಗಿ ಬರ್ತಿವೆ ಒಳ್ಳೆ ಎಪಿಕ್ ಥರಾ.

ಪ್ರಶ್ನೆ: ಧನರಾಜಕಾರಣ ಕಳಚಲಾದೀತೆ?

ಆಗತ್ತೆ, ಮೊದಲನೆದಾಗಿ ಶಿಕ್ಷಣ ಖಾಸಗಿ ವಲಯಕ್ಕೆ ಸೇರಲೇಬಾರ್ದು. ಅದು ಇಡೀ ಸಮಾಜದ ಸ್ವತ್ತಾಗಬೇಕು. ಪ್ರೈವೇಟ್ ಸ್ಕೂಲ್ಸ್ ಎಲ್ಲಾ ಹೊರಟುಹೋಗ್ಬೇಕು. ನಾನು ರಾಷ್ಟ್ರೀಕರಣ ಶಬ್ದ ಬಳಸಲ್ಲ, ಸಾಮಾಜೀಕರಣ ಆಗ್ಬೇಕು. ಎಲ್ಲಾ ಬಡಮಕ್ಕಳಿಗೆ, ಶ್ರೀಮಂತ ಮಕ್ಕಳಿಗೆ ಎಲ್ಲಾ ಒಂದೇ ಜಾಗದಲ್ಲಿ ಶಿಕ್ಷಣ ದೊರೀಬೇಕು. ಸಾಮಾನ್ಯ ಶಾಲೆಗಳಾಗಬೇಕು. ಸಮಾನ ಶಿಕ್ಷಣ, ಸಮಾನ ಶಾಲೆಗಳು, ಒಂದು ಆಮೇಲೆ ಆರೋಗ್ಯನೂ ಕೂಡ

ಪ್ರೈವೇಟೈಸ್ ಆಗಬಾರ್ದು. ಇದು ದೇಶದ ಮೇಲಿರುವ ಜವಾಬ್ದಾರಿ ಆಗಿದೆ. ಆದ್ರೆ ಇವೆರಡೂ ಪ್ರೈವೆಟೈಸ್ ಆಗ್ಬಿಟ್ಟಿದೆ. ಖಾಸಗೀಕರಣಕ್ ಹೋಗ್ಬಿಟ್ಟು ಬಡವ-ಬಲ್ಲಿದ ವ್ಯತ್ಯಾಸ ಇದೆಯಲ್ಲಾ ಇದು ವಿದ್ಯಾಭ್ಯಾಸದಲ್ಲೇ ಹೆಚ್ಚಾಗ್ತಾ ಇದೆ, ಅದಾಗಬಾರ್ದು ಎಲ್ರೂಗೂ ತಮ್ಮ ಭಾಷೆಯಲ್ಲೇ ಶಿಕ್ಷಣ ಸಿಗ್ಬೇಕು. ಆದ್ರಿಂದ ಆ ಭಾಷೆಯೇ ಒಂದು ಕಷ್ಟ ಆಗ್‌ಬಿಟ್ಟಕೂಡಲೇನೆ ಗೊತ್ತಿರೋನೂ ಕೂಡಾ ಹೆಚ್ಚು ಗೊತ್ ಮಾಡ್‌ಕೊಳ್ಳಿಕ್ಕೆ ಅವನಿಗೆ ಸಾಧ್ಯವಾಗ್ದೆ ಹೊಗ್‌ಬಿಡತ್ತೆ. ಅರಿವಿನ ವಿಸ್ತಾರವಾಗ್ದೆ ಹೋಗತ್ತೆ. ಆ ಥರಾ ಅರಿವಿನ ವಿಸ್ತಾರ ಆಗ್‌ಬೇಕಾದರೆ ತನ್ನ ಮಾತೃಭಾಷೆಯಲ್ಲೆ ಸಿಗಬೇಕು. ಇವೆಲ್ಲಾ ಇವತ್ತು ನಾನ್ ಸಮಾಜವಾದಿ ಆದ ಬಹಳ ತುರ್ತಿನ ನಿಲುವುಗಳು ಅದನ್ನು ನಾನು ಯಾವತ್ತೂ ಮೀರಬಲ್ಲವನಾಗಿಲ್ಲ. ಆದ್ರೆ ಹೋಟೆಲ್‌ಗಳನ್ನು ರಾಷ್ಟ್ರೀಕರಣ ಮಾಡಬಾರದು. ಕೆಟ್ಟ ಫುಡ್ ಕೊಡ್ತಾರೆ ಅವ್ರು (ನಗು) ಸರ್ಕಾರಿ ನೌಕರರಾಗ್ಬಿಟ್ರೆ. ಹೋಟೆಲ್ ಒಂದನ್ನು ಬಿಟ್ಟು ಉಳಿದೆಲ್ಲಾ ಸಮಾಜದ ಅಧೀನದಲ್ಲಿರಬೇಕು.

ಪ್ರಶ್ನೆ: ಆದ್ರೆ ನಮ್ಮ ಸರ್ಕಾರ ಯುವಶಕ್ತಿನ ಬೇಕಾದ ಹಾಗೆ ಬಳಸಿಕೊಳ್ಳುತ್ತಿಲ್ಲ.

ಅದಕ್ಕೆ ಎಲ್ಲಾ ಮಕ್ಕಳೂ ಅಲ್ದೆ ಹೋದ್ರೆ ಅದಾಗಲ್ಲ. ಏನಾಗತ್ತೆ ಬಡವರ ಮಕ್ಕಳ ಮಟ್ಟಿಗೆ ಬರತ್ತೆ. ನಾನು ಎಲ್ಲಾ ಸಾಮಾನ್ಯ ಶಾಲೆಗಳಲ್ಲೆ ಓದ್ದೋನು. ಆದರೆ ನನ್ನ ಮೈಂಡ್ ಎಲ್ಲಾ ಸರಿಯಾಗೆ ಬೆಳೆದಿದೆ. ಈ ಸಾಮಾನ್ಯ ಶಾಲೆಗಳಿಗೆ ಬಡಮಕ್ಳು ಹೋಗೊದ್ರಿಂದ, ಅವ್ರು, ಸರಿಯಾಗೆ ಹೋಗ್ದೆ ಇರೊದ್ರಿಂದ ಅಲ್ಲಿ ಏನ್ ಬೇಕಾದ್ರು ಮಾಡಾಕ್ ಸಾಧ್ಯಾ ಆಗಿದೆ ಅವರಿಗೆ. ತಜ್ಞರ ಮಕ್ಳು, ಪ್ರಾಜ್ಞರ ಮಕ್ಳು ಕೂಡಾ ಅದೇ ಶಾಲೆಗೆ ಹೋಗ್ಬೇಕು. ಆವಾಗ ಆ ಶಾಲೆ ಉತ್ತಮ ಆಗಲೇಬೇಕಾದ ಅನಿವಾರ್ಯತೆ ಬರತ್ತೆ.

ಸಾರ್, ನೀವೊಂದು ಮಾತಿನ ಸುಳಿ ಇದ್ದಂತೆ, ಅದ್ರಿಂದ ಹೊರಬರೋದು ತುಬಾ ಕಷ್ಟ. ಎಷ್ಟೋ ಜನ ನಿಮ್ಮ ಮಾತಿಗಾಗಿ ತಹತಹದಿಂದ ಕಾಯ್ತಿರ್ತಾರೆ, ನನ್ನ ಕೆಲವು ಅನುಮಾನಗಳಿಗೆ ಉತ್ತರಿಸಿದ್ದೀರಿ, ತುಂಬಾ ಧನ್ಯವಾದಗಳು.

(ಯು.ಆರ್.ಅನಂತಮೂರ್ತಿಅವರೊಂದಿಗೆ ದಿನಾಂಕ: 7.9.2010ರಂದು ಶ್ರೀ.ವಾಸುದೇವಮೂರ್ತಿಯವರೊಡನೆ ನಡೆಸಿದ ಸಂದರ್ಶನ).

ಪೂರ್ಣಚಂದ್ರ ತೇಜಸ್ವಿಯವರು ಆಂದೋಲನ ಮತ್ತು ಲಂಕೇಶ್ ಪತ್ರಿಕೆಗಾಗಿ ನೀಡಿದ ಸಂದರ್ಶನದ ಆಯ್ದ ಭಾಗ

ಪ್ರಶ್ನೆ: ಕಾರಂತರ ಜೀವನ 'ಕುವೆಂಪು ಕಲಾಸೃಷ್ಟಿ' ಲೋಹಿಯಾರ ತತ್ವ ಚಿಂತನೆ– ಈ ಮೂರು ನಿಮ್ಮ ಬರವಣಿಗೆಗೆ ಸಹಾಯವಾಗುವ ದಿಕ್ಸೂಚಿಗಳು ಅಂದಿದ್ದೀರಿ. ಇವತ್ತಿಗೂ ಈ ಅಂಶಗಳನ್ನು ಸಮರ್ಥಿಸುತ್ತೀರ?

ಕಾರಂತರ ಜೀವನದ ಪ್ರಯೋಗಶೀಲತೆ, ಕುವೆಂಪುರವರ ಕಲಾಸೃಷ್ಟಿ, ಲೋಹಿಯಾ ತತ್ವಚಿಂತನೆ, ಇವು ಮೂರೂ ನನ್ನ ಮುಂದಿನ ಬರವಣಿಗೆಯ ದಿಕ್ಸೂಚಿಗಳೆಂದು ಆವತ್ತು ನಾನು ಹೇಳಿದ್ದು. ಈ ಮೂರು ಅಂಶಗಳ ಪ್ರಭಾವವನ್ನೂ ನನ್ನ ಬರವಣಿಗೆಯಲ್ಲೂ, ಬದುಕಿನಲ್ಲೂ ಇವತ್ತಿಗೂ ನೀವು ಕಾಣಬಹುದಲ್ಲವೆ? ಭಾರತದ ತತ್ವಶಾಸ್ತ್ರ ಪರಂಪರೆ ಆಯಾ ಜಾತಿ ಮತ್ತು ಮಠಗಳ ದೆಸೆಯಿಂದ ಬಹು ಹಿಂದೆಯೇ ಕೊನೆಯುಸಿರೆಳೆಯಿತು. ರಾಧಕೃಷ್ಣನ್, ಹಿರಿಯಣ್ಣಯ್ಯ ಇವರನ್ನೆಲ್ಲಾ ತತ್ವಜ್ಞಾನಿಗಳೆಂದು ಹೊಗಳುತ್ತಾರೆ. ಇವರನ್ನೆಲ್ಲಾ ಭಾಷ್ಯಕಾರರೆಂದು ಕರೆಯಬಹುದೇ ಹೊರತು ತತ್ವ ಮೀಮಾಂಸಕರೆಂದು ಕರೆಯಲು ಸಾಧ್ಯವಿಲ್ಲ. ಭಾರತದ ಈಚಿನ ವರ್ಷಗಳಲ್ಲಿ ಸೃಷ್ಟಿಸಿದ ಒರಿಜಿನಲ್ ಎನ್ನುವಂಥ ತತ್ವಮೀಮಾಂಸಕ ಎಂದರೆ ಲೋಹಿಯಾ ಎಂದೇ ನನ್ನ ಭಾವನೆ. ಗಾಂಧೀಜಿಯ ಧ್ಯೇಯ ಧೋರಣೆಗಳನ್ನು ತಾತ್ವಿಕ ದೃಷ್ಟಿಕೋನದಿಂದ ಚರ್ಚಿಸಿ ಅದಕ್ಕೊಂದು ಸೈದ್ಧಾಂತಿಕ ಸ್ವರೂಪ ನೀಡಿದ್ದೇ ಲೋಹಿಯಾ. ನಮ್ಮ ದೇಶದ ಕಳ್ಳ ಗಾಂಧಿವಾದಿಗಳನ್ನೇ ಗಾಂಧೀ ವಕ್ತಾರರೆಂದು ತಿಳಿದಿದ್ದ ನನಗೆ ಲೋಹಿಯಾ ಓದುವವರೆಗೂ ಗಾಂಧಿ ಬಗ್ಗೆ ಅಪಾರ ತಿರಸ್ಕಾರವೇ ಇತ್ತು. ಹಾಗಾಗಿ ಗಾಂಧಿ ಬಗ್ಗೆ ಇವತ್ತು ಮಾಯಾವತಿಯಾಗಲಿ ಕಾನ್ಸಿರಾಮ್ ಆಗಲೀ ತಿರಸ್ಕಾರದ ಮಾತಾಡಿದರೆ ಅದು ಸಹಜವೇ ಅನ್ನಿಸುತ್ತದೆ.

ಪ್ರಶ್ನೆ: ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದ ಒಂದೊಂದು ಘಟ್ಟದಲ್ಲಿ ಒಂದೊಂದು ಇಸಂನ ತೇಲಿಬಿಡಲಾಗಿದೆ. ಸದ್ಯದ ದಿನಗಳಲ್ಲಿ ಯಾವುದಾದರೂ ಇಸಂನ ನಿರೀಕ್ಷೆ ಇರಬೇಕು ಅಂತ ನಿಮಗನ್ನಿಸುತ್ತಾ?

ಅದರ ಅಗತ್ಯ ಇಲ್ಲ. ನೀವು ಆಂಧ್ರದ ಮುಖ್ಯಮಂತ್ರೀನ್ನ ನೋಡಿ. ಆತ ಯಾವುದೇ ಇಸಂನ ಹೇಳ್ತಾ ಇಲ್ಲ. ಆದ್ರೂ ಅಭಿವೃದ್ಧಿ ಇದೆ. ನೀವು ಮಾರ್ಕ್ಸ್‌ವಾದದ ಪ್ರಕಾರ ಅಥವಾ ಯಾವುದೇ ಇಸಂನ ಪ್ರಕಾರ ಜೀವನ ಮಾಡ್ತೀರಾಲ ನಾಳೆ ಒಂದು ಚರಂಡಿ ತೋಡ್ಬೇಕಾದ್ರೂ ಮಾರ್ಕ್ಸ್‌ವಾದ ಏನು ಹೇಳುತ್ತೇ ಅಂತ ನೋಡ್ತಾ ಕೂತ್ರೆ ಜೀವನ

ಹೋದ್ವು. ಈಗ ರಿಲಿಜಿಯಸ್ ಫಂಡಮೆಂಟಲಿಸ್ಟ್‌ಗಳು ಮಾಡ್ತಾ ಇರೋದು ಇದನ್ನೇ. ಅದರ ಪರಿಣಾಮಾನೇ ಪಾರ್ಲಿಮೆಂಟ್‌ಗೆ ನುಗ್ಗಿ ಧಾಂದ್ಲೆ ಮಾಡಿದ್ದು. ಇದು ಹಾರರ್ ಕಣ್ರೀ. ಮನುಷ್ಯನಿಗೆ ಅನುಷಂಗಿಕವಾಗಿ ಒಳ್ಳೆಯತನ ಅಂತಂದ್ರೆ ಆ ಧರ್ಮಗ್ರಂಥಗಳನ್ನು ಒಯ್ದು ಬೆಂಕಿಗೆ ಹಾಕಬೇಕಷ್ಟೆ. ಈಗ ಯಾವುದರ ಅಗತ್ಯಾನು ಇಲ್ಲಾರೀ.

ಪ್ರಶ್ನೆ: ಮನುಷ್ಯ ಕುಲ ತಾನೊಂದೇ ವಲಂ ಅಂತ ಪಂಪ ಹೇಳಿದ್ದ. ಅದರ ಮುಂದುವರಿಕೆಯಾಗಿ ಕುವೆಂಪು ವಿಶ್ವಮಾನವ ಸಂದೇಶ ಸಾರಿದರು. ಮನುಷ್ಯನ ಔನ್ನತ್ಯದ ಬಗ್ಗೆ ಹಲವಾರು ಜನ ಕಾಲಕಾಲಕ್ಕೆ ತಿಳಿಹೇಳ್ತಾ ಬಂದಿದ್ರೂ ಸಹ ಮನುಷ್ಯ ಮಾತ್ರ ತನ್ನ ನೀಚತನವನ್ನು ಪದೇ ಪದೇ ಪ್ರದರ್ಶಿಸ್ತಾ ಇದಾನೆ. ಇದಕ್ಕೆ ಸಾಹಿತ್ಯ ಯಾವ ರೀತಿಯಲ್ಲಿ ಸ್ಪಂದಿಸಬೇಕು?

ಸಾಹಿತ್ಯ ಬರೀ ಮಂತ್ರ ಹೇಳ್ತದೆ. ಪಂಪ, ಕುವೆಂಪು ಹೇಳಿದ್ದು ಬರೀ ಮಂತ್ರಗಳು. ಅವರಿಗೆ ತಂತ್ರ ಗೊತ್ತಿಲ್ಲ. ಈ ತಂತ್ರ ಗೊತ್ತಿರೋರೆಲ್ಲಾ ರಾಜಕಾರಣಿಗಳು. ಪ್ರತೀ ಚುನಾವಣೇಲೂ ಜಾತೀಯತೆ ಉಪಯೋಗಿಸ್ಕಂಡು ಎಲೆಕ್ಟ್ ಆಗೋದು ಜಾತಿ ಎರಾಡಿಕೇಟ್ ಮಾಡ್ತಾರೆ. ಗರೀಬಿ ಹಟಾವೋ ಅಂತ ಹೇಳಿ ಗರೀಬ್ರೆಲ್ಲಾ ಹೊರಟ್ ಹೋದ್ರೆ ಮುಂದಿನ ಎಲೆಕ್ಷನ್‌ಗೆ ಏನ್ ಮಾಡ್ತಾರೆ. ಇದೇ ಮೇನ್ ಕಂಟ್ರಾಡಿಕ್ಷನ್. ಯಾವ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಒಂದು ಸಂಸ್ಥೆಯನ್ನು ಕಟ್ತೀವೋ ಅದೇ ಸಮಸ್ಯೆಯನ್ನು ಪರ್‌ಪೆಚುಯೇಟ್ ಮಾಡ್ತಾ ಹೋಗುತ್ತೆ. ದಲಿತರಿಗಾಗೋ ತೊಂದರೆ ತಾಪತ್ರಯಗಳನ್ನೆಲ್ಲಾ ಬಗೆಹರಿಸ್ಲಿಕ್ಕೆ ದಲಿತ ಸಂಘರ್ಷ ಸಮಿತಿ ಅಂತ ಮಾಡ್ಕಂಡ್ರು. ಆ ಸಮಿತಿಯೋರೆಲ್ಲಾ ಏನಯ್ಯಾ ಜಗಳ ಪಗಳ ಇಲ್ದೆ ಹೋದ್ರೆ ನಮ್ಮ ಸಂಘಟನೆಗೇ ಏಟ್ ಬೀಳುತ್ತ ಅಂತ ಅವರೇ ಜಗಳಾಡಕ್ ಹತ್ತಿದ್ರು.

ಪ್ರಶ್ನೆ: ಧರ್ಮ ಮತ್ತು ರಾಜಕಾರಣ ಬೇರೆ ಬೇರೆಯಾಗಿರಬೇಕು ಅನ್ನೋದು ಹಲವರ ಬಯಕೆ. ಮತೀಯವಾದದ ಭೂತ ಎಲ್ಲರ ಮೇಲೆ ಸವಾರಿ ಮಾಡ್ತಿರೋ ಈ ದಿನಗಳಲ್ಲಿ ಸಾಹಿತ್ಯದ ಜವಾಬ್ದಾರಿ ಏನು?

ಧರ್ಮ ಅಂದ್ರೆ ಹೈಯೆಸ್ಟ್ ಡೈಮೆನ್‌ಷನ್‌ನಲ್ಲಿ ನಾವು ಯೋಚನೆ ಮಾಡ್ತೀವಿ. ಧರ್ಮ ಏನಪ ಅಂತಂದ್ರೆ ಪಾಲಿಟಿಕ್ಸ್ ಅದು. ಒಂದಾನೊಂದು ಕಾಲದಲ್ಲಿ ಧರ್ಮಗಳು, ಈಗಿ ಪೊಲಿಟಿಕಲ್ ಪಾರ್ಟಿಗಳು ಮಾಡ್ತಿರೋ ಕೆಲಸಗಳನ್ನೇ ಮಾಡ್ತಿದ್ವು. ಧರ್ಮ ಅಂತಂದ್ರೆ ಒಂದು ಕೋಡ್ ಆಫ್ ಕಂಡಕ್ಟ್. ಒಂದೇ ಮದುವ್ಯಾಗು. ಕಂಡಕಂಡಾರ ಹೆಂಡ್ರ ಮೇಲೆಲ್ಲಾ

ಕೈ ಹಾಕಬೇಡ. ಇಂತಿಂಥ ಜಾತ್ಯಾರು ಇಂಥಿಂಥ ಕೆಲಸ ಮಾಡಬೇಕು ಇದೆಲ್ಲಾ ಹೇಳ್ಕಂಬಂದಿರಾದೇ ಅಲ್ಲವೇನ್ರೀ ಧರ್ಮ ಅಂದ್ರೆ. ಧರ್ಮಗಳು ಒಂದು ಕಾಲದ ರಾಜಕೀಯ ಸಿದ್ಧಾಂತಗಳು. ಮಠಗಳೆಲ್ಲಾ ಪೊಲಿಟಿಕಲ್ ಪಾರ್ಟಿ ಆಫೀಸ್‌ಗಳಾಗಿದ್ದವು. ಡೆಮಾಕ್ರಸಿ ಬಂದ ಮೇಲೆ ಈ ಧರ್ಮಗಳೆಲ್ಲಾ ಅದಕ್ಕೆ ಅಡಾಪ್ಟ್ ಆಗಕ್ಕೆ ನೋಡ್ತಾ ಇದಾವೆ. ಪಾಲಿಟಿಕ್ಸ್ ಮಾಡಬ್ಯಾಡಿ ಅಂದ್ರೆ ಸುಮ್ಮನಿರ್ತಾರಾಲ ಇದುವರೆಗೂ ಮಾಡ್ಕಂಬಂದಿರದೇ ಅದು. ಬುದ್ಧಿಸಮ್‌ನ ಒದ್ದೋಡಿಸಿದ್ದು ಶಂಕರಾಚಾರ್ಯರ ಗೂಂಡಾಗಿರಿ, ಶಂಕರ, ಮಾಧ್ವರ ನಡುವೆ ಮಾಧ್ವರು, ಸ್ಮಾರ್ತರು ಬೇಕಾದಷ್ಟು ಸಲ ಜಗಳ ಆಡಿಕೊಂಡಿದಾರೆ. ಮುಸ್ಲಿಂ ಥ್ರೆಟ್ ಬರೋವರೆಗೂ ಇವರೆಲ್ಲಾ ತಾವು ತಾವೇ ಜಗಳಾಡ್ತಾ ಇದ್ರು. ಈಗ್ಲೂನೂ ಬೇರೆ ತೊಂದ್ರೆ ತಾಪತ್ರಯ ತಪ್ಪಿದರೆ ಮತ್ತು ತ್ರಿಮತಸ್ಥರು ಒಬ್ಬರಿಗೊಬ್ಬರು ಹೊಡಕತ್ತರೆ. ಬೇರೆ ಥ್ರೆಟ್ ಇರಾದರಿಂದ ಜಗಳ ಸದ್ಯಕ್ಕೆ ಅಡ್ಜರ್ನ್ ಮಾಡಿದಾರೆ. ಬುದ್ಧಿಸಂ ಒಂದನ್ನು ಬಿಟ್ಟರೆ ಉಳಿದವೆಲ್ಲಾ ಮಿಲಿಟೆನ್ಸಿಯಿಂದ ಬಂದಿರೋದು. ತಾಲಿಬಾನ್‌ನವರು ಬುದ್ಧನ ವಿಗ್ರಹ ನಾಶ ಮಾಡಿದ ಹಾಗೆ ನಮ್ಮವರು ತದ್ವತ್ ಅದೇ ಕೆಲಸ ಮಾಡಿದಾರೆ. ಅದಕ್ಕೆ ಯಾವುದೇ ರೀತಿ ಕಡಿಮೆ ಇಲ್ಲದಾಗೆ ವೈದಿಕರು ದೌರ್ಜನ್ಯ ಮಾಡಿದಾರೆ.

ಪ್ರಶ್ನೆ: ಮತೀಯವಾದ ಮತ್ತು ಭಯೋತ್ಪಾದನೆಗೆ ಸೈದ್ಧಾಂತಿಕ ರೂಪ ಕೊಡೋ ಪ್ರಯತ್ನಗಳು ಅನೇಕ ಕಡೆ ನಡಿತಾ ಇವೆ. ಇಂಥ ಬೆಳವಣಿಗೆಯಿಂದ ಎದುರಾಗುವ ಅಪಾಯಗಳನ್ನೆದುರಿಸಲು ಸಾಹಿತಿ ಯಾವ ರೀತಿಯ ತಯಾರಿ ಮಾಡಿಕೊಳ್ಳಬೇಕು?

ಸಾರಾ ಅಬೂಬಕರ್ ಅಂಥವರು ರಿಲಿಜಿಯಸ್ ಫಂಡಮೆಂಟಲಿಸಮ್ ವಿರುದ್ಧ ಧೈರ್ಯವಾಗಿ ಮಾತಾಡಿದಾರೆ ಪಂಪ ಪ್ರಶಸ್ತೀನ ಅವರಿಗಾದ್ರೂ ಕೊಡಿ. ಸಾಹಿತ್ಯಕ್ಕಿಂತ ಅವರ ಪರ್ಸನಾಲಿಟಿ ಸಮ್‌ಥಿಂಗ್ ರಿಮಾರ್ಕಬಲ್. ಅವರು ತೋರಿಸಿರೋ ಧೈರ್ಯ, ದಿಟ್ಟತನ ಎಲ್ಲಾ ಸಮ್‌ಥಿಂಗ್ ಎಕ್ಸ್ಟ್ರಾರ್ಡಿನರಿ. ಪಂಪ ಪ್ರಶಸ್ತಿಗೆ ಯಾರನ್ನು ರೆಕಮೆಂಡ್ ಮಾಡ್ತೀರಿ ಅಂತ ಕೇಳಿದಾಗ ನಾನು ಮೊದಲಿಗೆ ಅವರ ಹೆಸರನ್ನೇ ಸೂಚಿಸಿದ್ದೆ. ಅವರನ್ನು ಬಿಟ್ಟು ನನಗೇ ಹಿಡ್ಕಂಡ್ರು.

ರಾಜಕೀಯ ಅಥವಾ ಸಾಮಾಜಿಕ ಸಿದ್ಧಾಂತಕ್ಕೆ ಒಳಗಾಗಿರೋ ಸಾಹಿತ್ಯ. ಆ ಸಿದ್ಧಾಂತ ಹೊರಟು ಹೋದ ಮೇಲೆ ಸಾಹಿತ್ಯಾನೂ ರೆಲವೆನ್ಸ ಕಳಕೊಳ್ಳುತ್ತೆ. ನಿಮ್ಮ ಸಾಹಿತ್ಯದಲ್ಲಿ ನಿಮ್ಮ ಜೀವನ ಇದ್ರೆ ಸಾಕು. ನೀವು ಹೆಂಗೆ ಬದುಕ್ತೀರಿ ಅನ್ನೋದ್ರ ಮೇಲೆ ಅದು ನಿಲ್ಲತ್ತೆ. ನೀವು ನಿಜವಾಗ್ಲೂ ಸೆಕ್ಯುಲರ್ ಆಗಿ ಬದುಕಿದ್ರೆ ಅಪ್ರಯತ್ನವಾಗಿ ಸಾಹಿತ್ಯ

ಅದನ್ನು ಒಳಗೊಳ್ಳುತ್ತೆ. ನಾನು ಇಂಥ ಸಿದ್ಧಾಂತಕ್ಕೆ ಸಂಬಂಧಪಟ್ಟೋನು. ಅದಕ್ಕೇ ಹಿಂಗೆ ಬರೀತೀನಿ ಅನ್ನೋದು ತಪ್ಪು. ಅದು ಬಾಳ ಕಾಲ ನಿಲ್ಲಲ್ಲ.

ಪ್ರಶ್ನೆ: 'ಮುಟ್ಟು ಒಬ್ಬಟ್ಟುಗಳ ಸಾಹಿತ್ಯವನ್ನು ಬದಿಗಿಟ್ಟು ಕರ್ವಾಲೋನಂಥ ಹೊಸ ಸಂವೇದನೆಗಳನ್ನು ಅರಸುತ್ತಾ ಕನ್ನಡದ ಸಾಂಸ್ಕೃತಿಕ ಬದುಕಿಗೆ ಪ್ರಕೃತಿಯ ವಿಸ್ಮಯವನ್ನು ಮತ್ತು ಸಾಮಾಜಿಕ ಬದುಕಿನ ಸೋಜಿಗವನ್ನೂ ಒಟ್ಟಿಗೇ ತಂದುಕೊಟ್ಟವರು ನೀವು. ಇಂದಿನ ಕನ್ನಡ ಸಾಹಿತ್ಯದ ಪರಿಸ್ಥಿತಿ ನೋಡಿದರೆ ನಿಮಗೇನೆನ್ನಿಸುತ್ತದೆ?

ನವ್ಯ ಸಾಹಿತ್ಯ ವ್ಯಕ್ತಿ ಕೇಂದ್ರೀಕೃತವಾಗಿ ಸಾಹಿತ್ಯ ತನ್ನ ಸಾಮಾಜಿಕ ಅರಿವನ್ನೇ ಕಳೆದುಕೊಳ್ಳುವ ಮಟ್ಟ ಮುಟ್ಟಿತ್ತು. ಜಾತಿ ಪದ್ಧತಿ, ಸ್ತ್ರೀ ಅಸಮಾನತೆ, ಅಸ್ಪೃಷ್ಯತೆ ಮೊದಲಾದ ಸನಾತನ ಧರ್ಮದ ಭಯಂಕರ ನ್ಯೂನತೆಗಳನ್ನು ಪಕ್ಕಕ್ಕೆ ಸರಿಸಿ ವೈದಿಕ ಪರಂಪರೆಯೇ ಕರ್ನಾಟಕದ ಪರಂಪರೆ ಎಂದು ಅಪವ್ಯಾಖ್ಯಾನ ಮಾಡಲು ಶುರುವಾಗಿತ್ತು. ಕನ್ನಡ ಸಾಹಿತ್ಯದ ಪರಂಪರೆ ಎಂದರೆ ವೈದಿಕ ಪರಂಪರೆಯ ವಿರುದ್ಧ ನಡೆದ ಮತ್ತು ನಡೆಯುತ್ತಿರುವ ನಿರಂತರ ಹೋರಾಟ ಎನ್ನುವ ಸತ್ಯ ಸಂಗತಿಯನ್ನು ತಿರಿಚುವ ಪ್ರಯತ್ನ ನವ್ಯ ಸಾಹಿತ್ಯದ ಉದ್ದಾಮ ಬರಹಗಾರರಿಂದ ನಡೆಯುತ್ತಿತ್ತು. ಸಂಪೂರ್ಣ ಅವೈದಿಕ ಹಿನ್ನೆಲೆಯಿಂದ ಬಂದ ನನಗೆ ಜಾಜ್ವಲ್ಯಮಾನ ಪ್ರತಿಮೆಗಳೆಂದು ಹೊಗಳುತ್ತಿದ್ದ ಇವರ ಕೃತಿಗಳನ್ನು ಯಾವ ಮಹತ್ತೂ ಕಾಣುತ್ತಿರಲಿಲ್ಲ. ನನಗೆ ಸಾಹಿತ್ಯದಲ್ಲೇ ಆಸಕ್ತಿ ನಶಿಸತೊಡಗಿತ್ತು.

ಆದರೆ ನಾನು ಮೂಡಿಗೆರೆಗೆ ತೋಟ ಮಾಡಲು ಬಂದಿದ್ದಕ್ಕೆ ಇವ್ಯಾವೂ ಕಾರಣಗಳಲ್ಲ. ನೀವು ತಿಳಿದಿರುವಂತೆ ಹೊಸ ಸಂವೇದನೆಯನ್ನು ಅರಸುತ್ತಾ ಹೊರಟವನಲ್ಲ ನಾನು. ಮೊದಲಿನಿಂದಲೂ ಕೋವಿ ಹಿಡಿದುಕೊಂಡು ಕಾಡು ತಿರುಗುವ ಹುಚ್ಚರ ಗುಂಪಿನ ನಡುವೆ ಬೆಳೆದವನು. ನನಗೂ ಕಾಡಿಗೂ ಇರುವ ಸಂಬಂಧ ನನ್ನ ತಂದೆ, ತಾಯಿ, ಹೆಂಡತಿ, ಮಕ್ಕಳ ಜೊತೆ ಇರುವ ಸಂಬಂಧದಂತೆ ವಿವರಿಸಲಸಾಧ್ಯವಾದಷ್ಟು ನಿಗೂಢವಾದದ್ದು. ಆದ್ದರಿಂದಲೇ ನಾನು ಪರಿಸರವಾದಿಯೂ ಸಹ ಅಲ್ಲವೆಂದು ಅನ್ನಿಸುತ್ತದೆ. ಅವರೆಲ್ಲರಿಗಿಂತ ನನಗೆ ಕಾಡಿನ ಬಗ್ಗೆ, ಮರಗಳ ಬಗ್ಗೆ, ಪಕ್ಷಿ ಪ್ರಾಣಿಗಳ ಬಗ್ಗೆ ಹೆಚ್ಚಿಗೆ ಗೊತ್ತಿದ್ದರೂ ಅದೊಂದು ಬಗೆಯ ಅರಿವಾಗಿ ನನ್ನಲ್ಲಿದೆಯೇ ಹೊರತು ಶಾಸ್ತ್ರೀಯ ಜ್ಞಾನವಾಗಿ ಅಲ್ಲ. ನಾನು ಮೂಡಿಗೆರೆಗೆ ಬಂದನಂತರ ನಾವು ಸೆಮಿನಾರುಗಳಲ್ಲಿ, ಸಾಹಿತ್ಯದಲ್ಲಿ, ಉದ್ದೇಶಿಸುತ್ತಿದ್ದ ಮತ್ತು ಚರ್ಚಿಸುತ್ತಿದ್ದ ಭಾರತಕ್ಕೂ, ಮಂದಣ್ಣ, ಮಾರ,

ಪ್ಯಾರ, ಕರಿಯಪ್ಪ, ಎಂಗ್ಪರ ಅವ್ಯಕ್ತ ಭಾರತಕ್ಕೂ ಇದ್ದ ಅಗಾಧ ವ್ಯತ್ಯಾಸ ನನ್ನ ದೃಷ್ಟಿಕೋನವನ್ನೂ ಬರಣಿಗೆಯನ್ನೂ ಮತ್ತೆ ಬದಲಿಸಲಾಗದಂತೆ ಮಾರ್ಪಾಡು ಮಾಡಿಬಿಟ್ಟಿತು. ಯಾವ ತತ್ವ ಸಿದ್ಧಾಂತಗಳೂ ಎಂದೂ ಪರಿಪೂರ್ಣವಾಗಿ ವಿವರಿಸಲಾಗದಂಥ, ಅನೇಕ ದ್ವಂದ್ವ, ವೈರುಧ್ಯ, ಅಸಾಂಗತ್ಯಗಳ ಈ ಜೀವನ ವಾಹಿನಿ ನಿಧಾನವಾಗಿ ನನ್ನನ್ನು ಅಸ್ಥಿತ್ವವಾದದತ್ತ ತುಯ್ಯತೊಡಗಿತು. ನನ್ನ ಬರವಣಿಗೆಗಳೆಲ್ಲದರಲ್ಲೂ ಕಂಡುಬರುವ ವಿನೋದ ಮತ್ತು ವಿಷಾದಗಳ ವಿಶಿಷ್ಟ ಸಂಶ್ಲೇಷಣೆಗೆ ಇದೇ ಕಾರಣ.

ಇದಿಷ್ಟನ್ನೂ ನಿಮಗೆ ವಿವರಿಸಬೇಕಾಗಿ ಬಂದಿದ್ದಕ್ಕೆ ಕಾರಣ ನೀವು ನಾನು ಹೊಸ ಸಂವೇದನೆಯನ್ನು ಅರಸುತ್ತಾ ಹೊರಟೆ ಎಂದು ಹೇಳಿದ್ದರಿಂದ. ಬಹುಶಃ ಎಲ್ಲ ಉತ್ತಮ ಕಲಾವಿದರೂ ಬದುಕುತ್ತಾ ಹೋಗುವುದಕ್ಕೆ ಲೌಕಿಕ ಕಾರಣಗಳು ಅನೇಕವು ಇರುತ್ತವಾದರೂ ಕಲಾಕೃತಿಗಾಗಿ ನಿರ್ದಿಷ್ಟ ಬಗೆಯ ಬದುಕನ್ನು ಯಾರೂ ಹುಡುಕಿಕೊಂಡು ಹೋಗುವುದಿಲ್ಲ. ಎಲ್ಲ ಕಲಾಕೃತಿಗಳೂ ಅತ್ಯಂತ ಸಂಕೀರ್ಣ ಜೀವನಾನುಭವಗಳ ಅತ್ಯಂತ ವಿಶಿಷ್ಟ ಸಂಯೋಜನೆಯಾಗಿ ರೂಪುಗೊಂಡಿರುತ್ತದೆ. ಇಂಥ ಕಲಾಕೃತಿ ರಚಿಸಲು ಈ ಪ್ರಕಾರವಾಗಿ ಬದುಕಬೇಕೆನ್ನುವ ಸರಳ ಸಮೀಕರಣ ನಿಮಗೆಲ್ಲೂ ದೊರೆಯುವುದೇ ಇಲ್ಲ.

ಮೈಸೂರಿನ ಬರಹಗಾರರ ಒಕ್ಕೂಟದ ಸಮಾವೇಶದ ನಂತರ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆರಂಭವಾಗಿದ್ದನ್ನು ನೀವು ನೋಡಬಹುದು. ಅಕ್ಷರಕ್ಕೂ ವರ್ಣಮಾಲೆಗೂ ಹೊಸದಾಗಿ ಪದಾರ್ಪಣ ಮಾಡಿದ ಪೀಳಿಗೆಯೊಂದು ಶೂದ್ರಾತಿಶೂದ್ರ ದಲಿತ ವರ್ಗಗಳಿಂದೆಲ್ಲ ಬಂದು ಸಾಹಿತ್ಯ ರಚನೆಗೆ ಮುಂದಾದರು. ಇದರಿಂದಾಗಿ ಸಾಹಿತ್ಯದಲ್ಲಿ ತಂತಾನೆ ಹೊಸ ಆಂದೋಳನಗಳು ಪ್ರಾರಂಭವಾದುವು. ಇಲ್ಲಿ ತಂತಾನೇ ರೂಪುಗೊಂಡ ಹೊಸ ಆಂದೋಳನಗಳು ಎಂಬುದು ಬಹಳ ಮುಖ್ಯ. ಏಕೆಂದರೆ ಕನ್ನಡ ಸಾಹಿತ್ಯದ ಹೊಸ ಆಂದೋಳನಗಳಿಗೆಲ್ಲಾ, ನವೋದಯದಿಂದ ಹಿಡಿದು ನವ್ಯಕಾವ್ಯ ಸಂಪ್ರದಾಯದವರೆಗೆ ಪ್ರತಿಯೊಂದಕ್ಕೂ ಸಂವಾದಿಯಾಗಿ ಪಾಶ್ಚಿಮಾತ್ಯ ಸಾಹಿತ್ಯ ಸಂಪ್ರದಾಯಗಳ ಮಾದರಿಗಳಿರುತ್ತಿದ್ದವು. . ಆದರೆ ಬರಹಗಾರರ ಒಕ್ಕೂಟದ ಸಭೆ ತರುವಾಯ ಶುರುವಾದ ಸಾಹಿತ್ಯಾಂದೋಳನಕ್ಕೆ ಹಾಗೆ ಯಾವೂ ಪಾಶ್ಚಿಮಾತ್ಯ ಮಾದರಿಗಳಿರಲಿಲ್ಲ. ನಮ್ಮ ಮಾದರಿಗಳನ್ನು ನಾವೇ ನಿರ್ಮಿಸಬೇಕಾದ ಮತ್ತು ಅವನ್ನು ವಿಮರ್ಶಿಸಿ ಮೌಲ್ಯಮಾಪನ ಮಾಡಲು ಅಗತ್ಯವಾದ ಮಾನದಂಡಗಳನ್ನು ನಾವೇ ತೋರಿಸಿಕೊಡಬೇಕಾದ ವಿಚಿತ್ರ ಪರಿಸ್ಥಿತಿ ಹೊಸ ಬರಹಗಾರರ ಮೇಲೆ ಬಿತ್ತು. ಈ ಸಮಸ್ಯೆ ಇವತ್ತಿಗೂ ಸಮರ್ಪಕವಾಗಿ ಪರಿಹಾರವಾಗಿದೆ ಎಂದು ನನಗೆ ಅನ್ನಿಸುತ್ತಿಲ್ಲ. ನಾನು

ಹಲವಾರು ಯುವಬಹರಗಾರರ ದಲಿ, ಬಂಡಾಯ ಸಾಹಿತ್ಯ ಕಮ್ಮಟಗಳಲ್ಲಿ ಕುಳಿತು ಕೇಳಿದ್ದೇನೆ. ಅಲ್ಲೆಲ್ಲಾ ತಮ್ಮ ಬರವಣಿಗೆಯ ರಾಜಕೀಯ ಮತ್ತು ಸಾಮಾಜಿಕ ಆಯಾಮಗಳ ಬಗ್ಗೆ ಮಾತಾಡುತ್ತಾರೆಯೇ ಹೊರತು ಸಾಹಿತ್ಯ ಒಂದು ಲಲಿತ ಕಲೆ, ತಮ್ಮ ಕಲಾಭಿವ್ಯಕ್ತಿ ಭಾಷೆಯಲ್ಲಿ ಅಭಿವ್ಯಕ್ತಿಯಾಗಿ ರೂಪುಗೊಳ್ಳುವಾಗ ಪಡೆಯುವ ಆಕಾರಗಳೇನು? ಹಿಂದಿನ ಸಾಹಿತ್ಯಕ್ಕೂ ತಮಗೂ ಸಾಮ್ಯಗಳೇನು? ವ್ಯತ್ಯಾಸಗಳೇನು? ಇತ್ಯಾದಿಗಳ ಬಗ್ಗೆ ಅವರು ಹೆಚ್ಚು ಚಿಂತಿಸಿದಂತೆ ಕಾಣಲಿಲ್ಲ. ದಲಿತ ಸಾಹಿತ್ಯ ಎನ್ನುವ ಪಾರಿಭಾಷಿಕ ಶಬ್ದವನ್ನು ಅವರು ಜಾತಿ ಸೂಚಕವಾಗಿ ಬಳಸುತ್ತಾರೋ ಅಥವಾ ವರ್ಗಸೂಚಕವಾಗಿ ಬಳಸುತ್ತಾರೋ ಅಥವಾ ಹೊಸ ಸಾಹಿತ್ಯಂದೋಳನವಾಗಿ ಪರಿಭಾವಿಸಿದ್ದಾರೋ ತಿಳಿಯುತ್ತಿಲ್ಲ. ಕುವೆಂಪು ಬರೆದಿದ್ದು, ಮಾಸ್ತಿ ಬರೆದಿದ್ದು ಒಕ್ಕಲಿಗ ಅಥವಾ ಅಯ್ಯಂಗಾರ್ ಸಾಹಿತ್ಯವಾಗದೆ ಕನ್ನಡ ಸಾಹಿತ್ಯವಾಗಿರಬೇಕಾದರೆ ಇವರದ್ದು ಮಾತ್ರ ಹೇಗೆ ದಲಿತ ಸಾಹಿತ್ಯವಾಗುತ್ತದೆ? ಸಾಹಿತ್ಯದಲ್ಲಿ ಎಂದೂ ಮೀಸಲಾತಿ ಪ್ರಶ್ನೆಯೇ ಬರುವುದಿಲ್ಲ. ನಮ್ಮ ಜಾತಿ ಆಧಾರದ ಮೇಲೆ ವಿಶೇಷ ಸೌಲಭ್ಯ ಯಾಚಿಸುವುದಕ್ಕಿಂತ ವಿಶ್ವದ ಶ್ರೇಷ್ಠ ಬರಹಗಾರರೊಡನೆ ಹೋಲಿಸಿ ಎರಡನೆ ಅಥವಾ ಮೂರನೆ ದರ್ಜೆ ಬರಹಗಾರನಾದರು ಒಳ್ಳಿತೆಂಬುದು ನನ್ನ ನಿಲುವು.

ಈಚೆಗೆ ಕೆಲವು ವಿಮರ್ಶಾ ಲೇಖನಗಳನ್ನು ಬರೆದ ಮೊಗಳ್ಳಿ ಗಣೇಶ ಮತ್ತು ಶಿವಾರೆಡ್ಡಿಯವರು ಮಾತ್ರ ಈ ಕುರಿತು ಹಲವು ದಿಟ್ಟ ಪ್ರಯತ್ನಗಳನ್ನು ಮಾಡಿದ್ದಾರೆ. ಇವರಿಬ್ಬರೂ ತಮ್ಮ ಪೀಳಿಗೆಯ ಸಮಕಾಲೀನ ಸಾಹಿತ್ಯದ ಬಗ್ಗೆ ನೇರವಾಗಿ ಬರೆದಿಲ್ಲವಾದರೂ ಹಿಂದಿನ ತಲೆಮಾರಿನ ಸಾಹಿತ್ಯಕ್ಕೆ ತಾವು ಸ್ಪಂದಿಸುವ ಕ್ರಮದಲ್ಲೇ ಸಮಕಾಲೀನ ಸಾಹಿತ್ಯಕ್ಕೆ ವ್ಯಾಖ್ಯಾನ ಬರೆಯಲು ಹವಣಿಸಿದ್ದಾರೆ. ಶ್ರೀಯುತರಾದ ಮಹಾದೇವ, ಸಿದ್ಧಲಿಂಗಯ್ಯ, ಮೊಗಳ್ಳಿ ಗಣೇಶ, ಗೋವಿಂದಯ್ಯ, ಹನೂರು ಕೃಷ್ಣಮೂರ್ತಿ, ಮುಂತಾದವರ ಕೃತಿಗಳನ್ನು ನವ್ಯೋತ್ತರ ಸಾಹಿತ್ಯದ ಉತ್ತಮ ಕೃತಿಗಳೆಂದು ನಿರ್ವಿವಾದವಾಗಿ ಒಪ್ಪಬಹುದಾದರೂ ಈ ಕಾಲಘಟ್ಟದ ಪ್ರಾತಿನಿಧಿಕ ಕೃತಿಗಳೆಂದು ಇವನ್ನು ಪರಿಗಣಿಸಬಹುದೆ ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ ಸಮಕಾಲೀನ ಸಂದರ್ಭದ ಎಲ್ಲ ವೈಲಕ್ಷಣ್ಯಗಳನ್ನೂ ಇವು ಒಳಗೊಂಡಿವೆಯೆ? ಮತ್ತು ಅವು ಏನೇನು? ಯಾರೂ ಸಾವಧಾನವಾಗಿ ವಿವರಿಸಿ ವಿಶ್ಲೇಷಿಸುವ ಜವಾಬ್ದಾರಿ ತೆಗೆದುಕೊಂಡಿಲ್ಲ. ಈ ಕಾರಣಕ್ಕಾಗಿ ನಾವು ಹೊಸ ಯುವ ಬರಹಗಾರರ ಬಗ್ಗೆ ವಿಶ್ವಾಸ ಕಳೆದುಕೊಳ್ಳುವ ಅಗತ್ಯ ಇಲ್ಲ.

ಇಂದಿನ ಕನ್ನಡ ಸಾಹಿತ್ಯದ ಪರಿಸ್ಥಿತಿಯ ಬಗ್ಗೆ ನನ್ನ ಅನಿಸಿಕೆಗಳನ್ನು ಹೇಳುವುದಕ್ಕೆ ಈ ಹಿನ್ನೆಲೆ ಅಗತ್ಯ ಇರುವುದರಿಂದ ತಿಳಿಸುತ್ತಿದ್ದೇನೆ.

ಇಂದು ಸಾಹಿತ್ಯ ರಚನೆಗೆ ಪದಾರ್ಪಣ ಮಾಡಿರುವ ತರುಣ ಬರಹಗಾರರಲ್ಲಿ ಅಕ್ಷಯವಾದ ಜೀವನಾನುಭವದ ಹಿನ್ನೆಲೆ ಇರುವುದನ್ನು ನೀವು ಗಮನಿಸಿರಬಹುದು. ನವ್ಯ ಕಾವ್ಯದ ಕಾಲದಲ್ಲಿ ಬರೆಯಲಾರಂಭಿಸಿದ ಉದ್ದಾಮ ಲೇಖಕರ ಕೃತಿಗಳನ್ನು ಈಗಿನ ತರುಣರ ಬರಹಗಳೊಂದಿಗೆ ಹೋಲಿಸಿ ನೋಡಿದರೆ ಆ ಹಿರಿಯ ಬರಹಗಾರರ ಜೀವನಾನುಭವವೇ ಎಷ್ಟೊಂದು ಸೀಮಿತ ಎನ್ನಿಸುತ್ತದೆ. ಅವರ ಕೃತಿಗಳ ಬಹುಪಾಲು ಜೀವಾನುಭವಕ್ಕಿಂತ ಹೆಚ್ಚಾಗಿ ಇತರ ಶಕ್ತ ಲೇಖಕರ ಕೃತಿ ಜನ್ಯ ಎಂದೆನಿಸುತ್ತದೆ. ಈ ತಲೆಮಾರಿನ ಲೇಖಕರ ಮಹತ್‌ಕೃತಿ ಎಂದು ಅದೇ ವರ್ಗದ ವಿಮರ್ಶಕರಿಂದ ಹೊಗಳಿಸಿಕೊಳ್ಳುತ್ತಿರುವ ಕಾದಂಬರಿಯೊಂದರಲ್ಲಿ ಒಂದು ಜಿಂಕೆ ಮತ್ತು ಕರಿಯ ಬೆಕ್ಕೊಂದರ ಉಲ್ಲೇಖ ಬರುತ್ತದೆ. ಆದರೆ ಇದು ಯಾವ ಜಿಂಕೆ ಯಾವ ಬೆಕ್ಕು ಎನ್ನುವುದು ಕಾದಂಬರಿಕಾರನಿಗೆ ಗೊತ್ತಿಲ್ಲ. ಕಾನೂರು ಹೆಗ್ಗಡತಿಯನ್ನೋ ಮಲೆಗಳಲ್ಲಿ ಮದುಮಗಳು ಕೃತಿಯನ್ನೋ ಇಲ್ಲವೇ ಆಂಡರ್‌ಸನ್ನರ ಕಾಡಿನ ಅನುಭವಗಳನ್ನೋ ಅಥವಾ ಬೇರಾವುದೇ ಶಕ್ತ ಲೇಖಕರ ಕೃತಿಗಳನ್ನು ಓದಿಕೊಂಡು ಮಲೆನಾಡಿನ ಬಗ್ಗೆ, ಕಾಡಿನ ಬಗ್ಗೆ ನಿರರ್ಗಳ ಬೊಗಳೆ ಬಿಡುತ್ತಿರುವುದರಿಂದಲೇ ಇಂಥ ಅಬದ್ಧಗಳು ಉದ್ಭವಿಸುವುದು. ತನ್ನ ಜೀವನಾನುಭವದ ಮೂಲದ್ರವ್ಯದಿಂದಲೇ ಬರೆಯುವವನಿಗೆ ಜಿಂಕೆಯಲ್ಲಿ ಎಷ್ಟು ವಿಧಗಳಿವೆ. ಬೆಕ್ಕಿನಲ್ಲಿ ಎಷ್ಟು ವಿಧಗಳಿವೆ ಎಂದು ಗೊತ್ತಿರುತ್ತದೆ. ಕಡ (ಕಡವೆ), ಹುಲ್ಲೆ, ಕಾಡುಕುರಿ, ಕೃಷ್ಣಮೃಗ, ಕಬ್ಬೆಕ್ಕು, ಪುನುಗಿನ ಬೆಕ್ಕು, ಕಾಡು ಬೆಕ್ಕು, ಮ್ಯಾಣ ಬೆಕ್ಕು, ಹಾರು ಬೆಕ್ಕು, ಹುಲಿ ಬೆಕ್ಕು, ಮುಂತಾದ ನೂರಾರು ವಿಧಗಳಿವೆ ಈ ಎರಡು ಹೆಸರಿನ ಹಿಂದೆ. ಈ ಪ್ರಭೇದಗಳೆಲ್ಲಾ ನಾನೇನೂ ಪುಸ್ತಕ ಓದಿ ತಿಳಿದುಕೊಂಡಿದ್ದಲ್ಲ. ಒಬ್ಬ ಲೇಖಕನಿಗೆ ಕಾಡಿನ ಮರಗಳೂ, ಅಸಂಖ್ಯ ಹಕ್ಕಿಗಳೂ, ಪ್ರಾಣಿಗಳೂ ಪಶು ಪಕ್ಷಿ ಪ್ರಾಣಿ ತರುಲತೆಗಳೆಂಬ ಸಾರ್ವತ್ರಿಕ ನಾಮಕರಣದ ಮುಖವಾಡ ಹಾಕಿಕೊಂಡು ಪರಿಚಯವಾಗುವುದೇ ಇಲ್ಲ. ಲೇಖಕರಿರಲಿ ಮಲೆನಾಡಿನ ಯಾರಿಗೂ ಅಷ್ಟೆ. ಏಕೆಂದರೆ ಅವುಗಳನ್ನು ಯಾವುದರ ಮಾಂಸ ತಿನ್ನಬಹುದು. ಯಾವುದು ನಿಶಿದ್ಧ, ಯಾವಯಾವುದರ ಮಾಂಸಕ್ಕೆ ಯಾವ ಕಾರ ಕಡೆಯಬೇಕೆಂಬುದು ಸಹ ವಿಶಿಷ್ಟವಾಗಿರುವುದರಿಂದ ಮಲೆನಾಡು ತನ್ನ ವಿಶಿಷ್ಟತೆಯೊಂದಿಗೆ ಪರಿಚಯವಗಿ ಸಾರ್ವತ್ರಿಕತೆಯತ್ತ ವಿಕಾಸವಾಗುತ್ತದೆಯೇ ಹೊರತು ಸಾರ್ವತ್ರಿಕತೆಯಿಂದ ವಿಶಿಷ್ಟತೆಯ ಕಡೆಗಲ್ಲ. ಒಂದೇ ಕೃತಿಗೇ ತನ್ನ ಅನುಭವದ ಖಜಾನೆ ಖಾಲಿಯಾಗಿ ಬರೀ

ಬುಡುಬುಡುಕೆ ಅಲ್ಲಾಡಿಸುತ್ತಿರುವ ಈ ಹಿರಿಯ ಲೇಖಕರಿಗಿಂತ ದಟ್ಟ ಅನುಭವದ ಭದ್ರ ಬುನಾದಿಯ ಮೇಲೆ ನಿಂತು ಮಾತಾಡುತ್ತಿರುವ ಹೊಸ ತಲೆಮಾರಿನ ಒರಟರು ಒಡ್ಡರು ನನಗೆ ಹೆಚ್ಚು ಕುತೂಹಲ ಕೆರಳಿಸುತ್ತಾರೆ. ಏಕೆಂದರೆ ಕಮೂ, ಕಾಫ್ಕ, ಲಾರೆನ್ಸ್‌ರಿಂದ ಕಳ್ಳ ಸಾಗಾಣಿಕೆ ಮಾಡದೆ ತಮ್ಮ ಅನುಭವದ ಮಿತಿಯೊಳಗೇ ಮಾತನಾಡಲು ಇವರು ಪಣತೊಟ್ಟಿದ್ದಾರೆ.

ಪ್ರಶ್ನೆ: ಚಿದಂಬರ ರಹಸ್ಯದ ಕೊನೆಯಲ್ಲಿ ಎಲ್ಲರೂ ಲಂಟಾನದ ಹೊಗೆಯಿಂದ ಸಾಯುತ್ತಾರೆ. ಆಗ ರಫಿ ಮತ್ತು ಜಯಂತಿಯನ್ನು ಎತ್ತರದ ಗುಡ್ಡದಲ್ಲಿ ನಿಲ್ಲಿಸಿ ರಕ್ಷಿಸಿಬಿಟ್ಟಿದ್ದೀರಿ. ಈ ಇಂಡಿಯಾದ ಭವಿಷ್ಯದ ಬಗ್ಗೆ ಇದು ನಿಮ್ಮ ಅಂತಿಮ ಆಶಯವೇ?

ಚಿದಂಬರ ರಹಸ್ಯ ಸಾಂಕೇತಿಕವಾಗಿ ಬರೆದಿರುವ ನನ್ನ ಕಥೆ ಅಲ್ಲ. ಜನಕ್ಕೆ ಏನಾದರೂ ಹೇಳಬೇಕೆಂದಿದ್ದರೆ, ಸಂದೇಶ ಕೊಡಬೇಕೆಂದಿದ್ದರೆ ನಾನು ಕಥೆ ಮುಖಾಂತರ ಹೇಳುವುದಕ್ಕೆ ಹೋಗುವುದಿಲ್ಲ. ನೇರವಾಗೇ ಹೇಳಲು ಹೋಗುವುದಿಲ್ಲ. ನೇರವಾಗೇ ಹೇಳಲು ಪ್ರಯತ್ನಿಸುತ್ತೇನೆ. ಆದ್ದರಿಂದ ನನ್ನ ಯಾವ ಕಥೆಯನ್ನೂ ಯಾವುದೋ ಒಂದು ಒಳಾರ್ಥಗಳನ್ನಿಟ್ಟು ಬರೆದಿರುವ ಒಗಟು ಎನ್ನುವಂತೆ ನೋಡುವ ಅಗತ್ಯವಿಲ್ಲ. ಈ ರೀತಿಯ ಕೃತಕ ಸಾಂಕೇತಿಕತೆ ನವ್ಯಮಾರ್ಗದ ಅವಸಾನ ಸಂದರ್ಭದಲ್ಲಿ ಇತ್ತು. ಓದಲಸಾಧ್ಯವಾದ ಅಧ್ವಾನಗಳನ್ನೆಲ್ಲಾ ಬರಕೊಂಡು ಅದರೊಳಗಿನ ಅದ್ಭುತ ವ್ಯಂಗ್ಯಾರ್ಥಗಳಿಗೆ ಅದನ್ನು ಹೊಗಳುತ್ತಾ ಓಡಾಡುತ್ತಿದ್ದರು. ಆದರೆ ಅವೆಲ್ಲಾ ಮಠ ಸೆಮಿನಾರುಗಳಿಂದಾಚೆಗೆ ಬದುಕಲೇ ಇಲ್ಲ. ವಾಚ್ಯದ ಮಟ್ಟದಲ್ಲಿ ಕಲಾತ್ಮಕವಲ್ಲದ್ದು ವ್ಯಂಗ್ಯದ ಮಟ್ಟದಲ್ಲಿ ಅಮೋಘವಾಗುವುದು ಸುಳ್ಳು. ಆದ್ದರಿಂದ ಕರ್ವಾಲೋ ಕಥೆಯ ಕೊನೆಯಲ್ಲಿ ಆಕಾಶದ ನೀಲಿಯಲ್ಲಿ ಲೀನವಾಗುವ ಓತಿಯಾಗಲೀ, ಚಿದಂಬರ ರಹಸ್ಯದಲ್ಲಿ ಕೊನೆಗೆ ಬೆಟ್ಟ ಹತ್ತಿ ಸಾವಿನಿಂದ ಪಾರಾಗುವ ರಫಿ ಜಯಂತಿಯಾಗಲಿ ಕಥೆಯ ವಾಸ್ತವದ ವಿಸ್ತರಣೆಯೇ ಹೊರತು ಸಂದೇಶಗಳನ್ನು ಹೊಟ್ಟೆಯಲ್ಲಿಟ್ಟುಕೊಂಡ ಒಗಟುಗಳಲ್ಲ. ತಮ್ಮ ವಾಚ್ಯದ ಪರಿಧಿಯನ್ನೂ ಮೀರಿ ಏನೇನೋ ಅರ್ಥಗಳನ್ನು ನಿನ್ನ ಮನಸ್ಸಿನಲ್ಲಿ ಸ್ಫುರಿಸುವಂತೆ ಮಾಡುವುದು ಎಲ್ಲ ಕಲಾಕೃತಿಗಳ ಅನುಷಂಗಿಕ ಲಕ್ಷಣ. ಅದನ್ನು ನಿರ್ದಿಷ್ಟಗೊಳಿಸಲು ಪ್ರಯತ್ನಿಸಿದರೆ ಆಗ ಅವೆಲ್ಲಾ ಕೃತಕ ಸಂಕೇತಗಳಾಗುತ್ತವೆ. ಕಥೆ ಒಂದು ಚಕ್ರಬಂಧ ಸ್ಪರ್ಧೆಯಾಗುತ್ತದೆ.

ಚಿದಂಬರ ರಹಸ್ಯ ಓದಿದಾಗ ಕೊನೆಯಲ್ಲಿ ನಿನಗೆ ಹಾಗೆನ್ನಿಸಿದರೆ ಅದು ನಿನ್ನ ವ್ಯಕ್ತಿತ್ವದ ಮತ್ತು ಸಂಸ್ಕಾರದ ಕೊಡುಗೆಯೇ ಹೊರತು ನಿನಗೆ ಹಾಗೆನ್ನಿಸಲಿ ಎಂದು ನಾನು ಅವರನ್ನು ಬೆಟ್ಟು ಹತ್ತಿಸಿಲ್ಲ.

(ತೇಜಸ್ವಿಯವರು ಆಂದೋಲನ ಮತ್ತು ಲಂಕೇಶ್ ಪತ್ರಿಕೆಗೆ ನೀಡಿದ ಸಂದರ್ಶನವನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.)

ಟಿಪ್ಪಣಿ: ಪೂರ್ಣಚಂದ್ರ ತೇಜಸ್ವಿ, 'ವಿಮರ್ಶೆಯ ವಿಮರ್ಶೆ', ಪುಸ್ತಕ ಪ್ರಕಾಶನ, 2009.

ಉಪಸಂಹಾರ

ಎಲ್ಲಾ ಕ್ರಾಂತಿಗಳ ಆಶಯ ಸಮಾಜವಾದದ ಒಲವಾಗಿದೆ. ಈ ಶತಮಾನದಲ್ಲಿ ಎಲ್ಲಾ ಇಸಂಗಳ ವಾದ ಮುಗಿದಿದ್ದರೂ ಮಾನವೀಯತೆಯೊಂದೇ ಏಕೈಕ ಒಲವಾದರೂ ರಸ್ತೆಯ ಅಂಚಿನಲ್ಲಿ ಬಡ ಹೆಂಗಳೆ ಮೇಲೆ ಮೂರ್ನಾಲ್ಕು ಮಕ್ಕಳು ಹಸಿವಿನಿಂದ ಬಾಡಿದ ಮೊಲೆಗಳನ್ನಿಂಡುವುದನ್ನು ನೋಡಿದಾಗ, ಮಂತ್ರಿಯೊಬ್ಬನಿಗಾಗಿ ವೆಚ್ಚ ಮಾಡುವ ಖರ್ಚು ಇವುಗಳನ್ನು ಗಮನಿಸಿದಾಗ ಸಮಾಜವಾದಕ್ಕಾಗಿ ತುಡಿಯುವ ಮನಸ್ಸುಗಳು ಕ್ರಿಯಾಶೀಲವಾಗಿರುವುದನ್ನು ಕಾಣಬಹುದಾಗಿದೆ. ನನ್ನನ್ನು ಕಾಡುವ ಲೇಖಕರಲ್ಲಿ ಪ್ರಮುಖರಾದ ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿಯವರ ಕಾದಂಬರಿಗಳ ಮೂಲಕ ನವ ಸೈದ್ಧಾಂತಿಕ ಹುಡುಕಾಟದತ್ತ ಅಧ್ಯಯನ ದಾಪುಗಾಲಿರಿಸಿದೆ. ಈ ಅಧ್ಯಯನದ ಕೊನೆಗೆ ಹೇಳುವ ಮಾತು – ಅದೇನೆಂದರೆ ಎಲ್ಲಾ ಯುವ ಮನಸ್ಸುಗಳು ಈ ಅಧ್ಯಯನವನ್ನು ಇದೀಗ ಪ್ರಾರಂಭಿಸಬೇಕಿದೆ.

ಪರಾಮರ್ಶನ ಗ್ರಂಥಗಳು

1. ಅಗ್ರಹಾರ ಕೃಷ್ಣಮೂರ್ತಿ (ಸಂ): 'ಸಂಸ್ಕೃತಿ ಕಥನ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಾಶನ, 2006,
2. ಯು.ಆರ್.ಅನಂತಮೂರ್ತಿ, 'ಸನ್ನಿವೇಶ' 'ಅಕ್ಷರ ಪ್ರಕಾಶನ,' 'ಹೆಗ್ಗೋಡು,' ದ್ವಿತೀಯ ಮುದ್ರಣ – 1992,
3. ಪೂರ್ಣಚಂದ್ರ ತೇಜಸ್ವಿ, 'ವಿಮರ್ಶೆಯ ವಿಮರ್ಶೆ', ಪುಸ್ತಕ ಪ್ರಕಾಶನ, 2009.
4. ಶ್ರೀ.ಗಜೇಂದ್ರಗಡ ಶಾಮರಾಯ: (ಅನು) 'ನನ್ನ ಕನಸಿನ ಭಾರತ,' ಮೋ.ಕ.ಗಾಂಧಿ, ಗಾಂಧಿ ಸ್ಮಾರಕ ನಿಧಿ ಪ್ರಕಾಶನ 1960
5. ಪ್ರೊ.ವಿಘ್ನೇಶ್. ಎನ್.ಭಟ್ : 'ಎಂ.ಎನ್.ರಾಯ್,' ಕನ್ನಡ ಪುಸ್ತಕ ಪ್ರಾಧಿಕಾರ 2000.
6. ಡಾ॥ಡಿ.ಆರ್.ನಾಗರಾಜ್, ಕಿ.ರಂ. ನಾಗರಾಜ್ (ಸಂ) 'ಸಮಾಜವಾದಿ ಆಚಾರ್ಯ,' ಭಾರತ ಯಾತ್ರಾ ಕೇಂದ್ರ. 1969
7. ಡಾ॥ದಸ್ತಗೀರಸಾಬ್‌ದಿನ್ನಿ(ಸಂ) 'ಲೋಹಿಯಾ ಸಾಂಸ್ಕೃತಿಕ ಅನುಸಂಧಾನ,' ಕರ್ನಾಟಕ ಸಾಹಿತ್ಯ ಅಕಾಡೆಮಿ, 2008.
8. ಹನುಮಂತ :(ಸಂ) 'ಸಮಾಜವಾದದೆಡೆಗೆ,' ಆಚಾರ್ಯನರೇಂದ್ರದೇವ, ಜನಪ್ರಕಾಶನ, 1991
9. ನಟರಾಜ್ ಹುಳಿಯಾರ್ (ಸಂ) ರಾಮಮನೋಹರ ಲೋಹಿಯಾ ಚಿಂತನೆ, ಸಂ: 7, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008.
10. ಮೂಲ:ರಾಮ ಮನೋಹರ ಲೋಹಿಯಾ, ಹಸನ್ ನಯೀಂ ಸುರಕೋಡ (ಅನು), 'ಜಾತಿ ಪದ್ಧತಿ', ಪತ್ರಿಕೆ ಪ್ರಕಾಶನ,
11. ಯು.ಅರ್.ಅನಂತಮೂರ್ತಿ: 'ಅವಸ್ಥೆ'; ಅಕ್ಷರ ಪ್ರಕಾಶನ, ಹೆಗ್ಗೋಡು, ನಾಲ್ಕನೇ ಮುದ್ರಣ 2004,
12. ಕಾಳೇಗೌಡನಾಗವಾರ, ನಟರಾಜ್ ಹುಳಿಯಾರ್, 'ಸ್ವಾತಂತ್ರ್ಯದ ಅಂತರ್ಜಲ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 1996.
13. ಜಿ.ಎಸ್.ಶಿವರುದ್ರಪ್ಪ (ಸಂ) ಸಾಹಿತ್ಯವಾರ್ಷಿಕ : ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, 1978.
14. ಜಿ.ಎಸ್.ಆಮೂರ: ಸಾತ್ವಿಕ ಪಥ, ಪ್ರಿಯದರ್ಶಿನಿ ಪ್ರಕಾಶನ, 1995.

15. ಟಿ.ಪಿ.ಅಶೋಕ (ಸಂ) ಕೆ.ವಿ.ಸುಬ್ಬಣ್ಣ 'ಆಯ್ದ ಬರಹಗಳು', ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1992

16. ಮುರಳೀಧರ ಉಪಾಧ್ಯ ಹಿರಿಯಡಕ (ಸಂ) ಯು.ಆರ್.ಅನಂತಮೂರ್ತಿ (ಜೀವನ ಹಾಗೂ ಕೃತಿಗಳ ಸಮೂಹಶೋಧ) ಕರ್ನಾಟಕ ಸಂಘ, ಪುತ್ತೂರು, 2000.

17. ನಟರಾಜ್ ಹುಳಿಯಾರ್, 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ,' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004.

18. ಪೂರ್ಣಚಂದ್ರ ತೇಜಸ್ವಿ: 'ಚಿದಂಬರ ರಹಸ್ಯ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಾಶನ, ಮುದ್ರಣ, 2006,

19. ಕಾಳೇಗೌಡನಾಗವಾರ, ನಟರಾಜ್ ಹುಳಿಯಾರ್ (ಸಂ) 'ಉತ್ತರ-ದಕ್ಷಿಣ', ರಾಮಮನೋಹರ ಲೋಹಿಯಾ ಚಿಂತನೆ, ಸಂಪುಟ – 2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 1996.

20. ಡಿ.ವಿ.ಪ್ರಹ್ಲಾದ್ : (ಸಂ) ತೇಜಸ್ವಿಲೋಕ, ಸಂಚಯ ಪ್ರಕಾಶನ, 2007.

21. ಕೆ.ವಿ.ಪೂರ್ಣಚಂದ್ರ ತೇಜಸ್ವಿ, ಎಂ.ಡಿ.ನಂಜುಂಡಸ್ವಾಮಿ: (ಸಂ) ಲೋಹಿಯಾರೆಡ್ ಬುಕ್, ಕನ್ನಡ ಪುಸ್ತಕ ಪ್ರಾಧಿಕಾರ, ಎರಡನೇ ಮುದ್ರಣ – 2007.

22. ಕಾಳೇಗೌಡ ನಾಗವಾರ, ನಟರಾಜ್ ಹುಳಿಯಾರ್ (ಸಂ) 'ಭಾಷೆ ಮತ್ತು ಇತಿಹಾಸ' ರಾಮಮನೋಹರ ಲೋಹಿಯಾ ಚಿಂತನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 1996.

23. ಕಾಳೇಗೌಡ ನಾಗವಾರ, ನಟರಾಜ್ ಹುಳಿಯಾರ್ (ಸಂ) 'ಮಾನವಕುಲದ ಏಕತೆ' ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 1996.